ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 45
ನವೆಂಬರ್ 09, 2014

ಪುಟ 16 ರೂ. 10/-





ಸಿಪಿಐ(ಎಂ) ಸ್ಥಾಪನೆಯ 50 ನೇ ವರ್ಷಾಚರಣೆ:

ಕಪ್ಪು ಹಣ ವಾಪಸು ತರುವ ಪೊಳ್ಳು ಅಬ್ಬರ

'ಜನ್ ಧನ್' ಮೋಸದ ಬಲೆಯೇ



ಗ್ರಾಮ ಪಂಚಾಯತ್ ನೌಕರರ ಚಳುವಳಿ: ಮುನ್ನಡೆಯ ಕೆಲವು ಹೆಜ್ಜೆಗಳು





ರಸ್ತೆ ಸಾರಿಗೆ ಸುರಕ್ಷತಾ ವಿಧೇಯಕ : ಮಾರಕ

'ರಸ್ತೆ ಸಾರಿಗೆ, ಸುರಕ್ಷತಾ ವಿಧೇಯಕ'ಕ್ಕೆ ವಿರೋಧ



ಕೇಂದ್ರ ಸರಕಾರ ಜಾರಿಗೆ ತರಲು ಉದ್ದೇಶಿಸಿರುವ 'ರಸ್ತೆ ಸಾರಿಗೆ ಮತ್ತು ಸುರಕ್ಷತಾ ವಿಧೇಯಕ-2014'ಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ಸಿಪಿಐ(ಎಂ), ಸಿಐಟಿಯು, ಆಟೊ ಮತ್ತು ಟ್ಯಾಕ್ಸಿ ಚಾಲಕರ ಸಂಘಟನೆಗಳು ಪ್ರಬಲ ಹೋರಾಟ ನಡೆಸಲು ಒಮ್ಮತದ ತೀರ್ಮಾನ ಕೈಗೊಂಡವು.

ಬೆಂಗಳೂರಿನಲ್ಲಿ ಜನವರಿ 2015 ರಲ್ಲಿ ನಡೆಯಲಿರುವ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನದ ಅಂಗವಾಗಿ ಸಿಪಿಐ(ಎಂ) ಬೆಂಗಳೂರು ಸಮಿತಿಗಳು ಬೆಂಗಳೂರು ನಗರದ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲಿನಲ್ಲಿ ಅಕ್ಟೋಬರ್ 30, 2014 ರಂದು ಗುರುವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ರಸ್ತೆ ಸಾರಿಗೆ ಮತ್ತು ಸುರಕ್ಷತಾ ವಿಧೇಯಕ ಜಾರಿ ವಿರುದ್ಧದ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಸಾರಿಗೆ ನಿಗಮಗಳ ನೌಕರರ ಒಕ್ಕೂಟ, ಟ್ಯಾಕ್ಸಿ ಮತ್ತು ಆಟೋ ಚಾಲಕರ ಸಂಘಟನೆಗಳು ಘೋಷಿಸಿದವು.

ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, "ಅಸಂಘಟಿತ ಸಾರಿಗೆ ವ್ಯವಸ್ಥೆಯಾಗಿರುವ ಆಟೋ, ಟ್ಯಾಕ್ಸಿಯನ್ನು ಹಂತ ಹಂತವಾಗಿ ಹೊರಹಾಕಿ, ಸಂಘಟಿತ ಖಾಸಗಿ ವ್ಯವಸ್ಥೆಯನ್ನು ಸುಭದ್ರಗೊಳಿಸುವ ಹುನ್ನಾರವನ್ನು ಸಾರಿಗೆ ಮತ್ತು ಸುರಕ್ಷತಾ ವಿಧೇಯಕ ಒಳಗೊಂಡಿದೆ. ಕಾರ್ಮಿಕರು ಮತ್ತು ಜನ ವಿರೋಧಿಯಾಗಿರುವ ಈ ವಿಧೇಯಕವನ್ನು ಜಾರಿಗೊಳಿಸದಿರುವಂತೆ ಮಾಡಲು ಏಕೀಕೃತ ಹೋರಾಟ ನಡೆಸಬೇಕಿದೆ," ಎಂದು ಹೇಳಿದರು.

"ಇದು ಬಡವರು ಮತ್ತು ಮಧ್ಯಮ ವರ್ಗದವರಿಗೆ ಮರಣ ಶಾಸನವಿದ್ದಂತೆ. ಇದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗುವುದಿಲ್ಲ. ರಾಜ್ಯಗಳಲ್ಲಿನ ಸಾರಿಗೆ ಮತ್ತು ಗೃಹ ಇಲಾಖೆಯು ವಿಧೇಯಕದಡಿ ಸ್ಥಾಪಿಸಲಾಗುವ ಮೋಟಾರು ವಾಹನ ನಿಯಂತ್ರಣ ಮತ್ತು ರಸ್ತೆ ಸುರಕ್ಷತಾ ಪ್ರಾಧಿಕಾರದ ವ್ಯಾಪ್ತಿಗೆ ಸೇರಲಿದೆ. ಇದರಿಂದ ಸಾವಿರಾರು ಮಂದಿ ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಸಾರಿಗೆ ನೌಕರರ ಭವಿಷ್ಯ ಹಾಳಾಗಲಿದೆ." ಎಂದು ತಿಳಿಸಿದರು.

"ರಸ್ತೆ ಸುರಕ್ಷತಾ ಪ್ರಾಧಿಕಾರವು ಹೊಸ ಆವಿಷ್ಕಾರಗಳನ್ನು ಮಾನ್ಯ ಮಾಡಲಿದೆ. ಎಲ್ಲವನ್ನು ಪ್ರಾಧಿಕಾರವೇ ತೀರ್ಮಾನಿಸಲಿದೆ. ಇದನ್ನು ಯಾರೂ ಕೂಡ ಪ್ರಶ್ನಿಸಲಾಗುವುದಿಲ್ಲ. ವಿಧೇಯಕ ಜಾರಿಗೆ ಬಂದರೆ, ಸಾರಿಗೆ ನಿಗಮಗಳನ್ನು ಸ್ಥಗಿತಗೊಳಿಸಲಾಗುತ್ತದೆ. ಆ ಬಳಿಕ ಸಾರಿಗೆ ಸಚಿವ ಹುದ್ದೆಯನ್ನೇ ಕೈಬಿಡಲಾಗುತ್ತದೆ. ಇದು ಖಾಸಗಿ ಸಾರಿಗೆಗೆ ಅನುಕೂಲ ಮಾಡಿಕೊಡುವ ಹುನ್ನಾರವಾಗಿದೆ. ಭ್ರಷ್ಟಾಚಾರಕ್ಕೆ ಉತ್ತೇಜನ ನೀಡಲು ದಂಡದ ಪ್ರಮಾಣವನ್ನು ಹೆಚ್ಚಿಸಲಾಗುತ್ತಿದೆ. ವಾಹನ ಮಾರಾಟ ಕಂಪೆನಿಗಳಿಂದಲೇ ಕಡಿಮೆ ಬೆಲೆಗೆ ಬಿಡಿಭಾಗಗಳನ್ನು ದೊರಕಿಸಿಕೊಡುವ ಆಮಿಷ ಸತ್ಯದಿಂದ ಕೂಡಿದೆಯೇ," ಎಂದು ಪ್ರಶ್ನಿಸಿದರು.

ವಕೀಲ ಶ್ರೀಧರ್ ಪ್ರಭು ಮಾತನಾಡಿ, "ಕೇಂದ್ರದಲ್ಲಿನ ಪ್ರಭುತ್ವವು ರಾಜ್ಯಗಳನ್ನು ತಮ್ಮ ಹಿಡಿತಕ್ಕೆ ಪಡೆಯಲು ಕಾನೂನಿನ ಕವಚ ಬೇಲಿ ಹಾಕಿ, ಜೈಲಿನ ಗೋಡೆ ಕಟ್ಟಲಾಗುತ್ತಿದೆ. ರಸ್ತೆಗೆ ಸಂಬಂಧಿಸಿದಂತೆ ವಿಧೇಯಕ ರೂಪಿಸಲು ಕೇಂದ್ರಕ್ಕೆ ಅಧಿಕಾರವೇ ಇಲ್ಲ. ಇದು ಸಂವಿಧಾನ ವಿರೋಧಿ ಕಾರ್ಯವಾಗಿದೆ." ಎಂದು ಹೇಳಿದರು.

"ಭಾರತೀಯರ ಮಾಸಿಕ ಆದಾಯ 5,800 ರೂ. ಇವರು ಸಂಚಾರ ನಿಯಮ ಉಲ್ಲಂಘನೆಗೆ ಐದು ಸಾವಿರ ರೂ. ದಂಡವನ್ನು ಪಾವತಿಸುವುದಾದರೂ ಹೇಗೆ? ಉದ್ಯಮಿ ಅದಾನಿ ಅವರ ಆದಾಯ 4,260 ಕೋಟಿ ರೂ. ಗಳು. 'ಮೇಕ್ ಇನ್ ಇಂಡಿಯಾ' ಅಂದ್ರೆ ಇದೇ ಆಗಿದೆ. ಶ್ರೀಮಂತರು ಮತ್ತು ಬಡವರಿಗೆ ಒಂದೇ ದಂಡ ವಿಧಿಸುವುದು ಸಮಾನತೆ ಹೇಗಾಗುತ್ತದೆ. ಇದರ ವಿರುದ್ಧ ಎಲ್ಲರೂ ಒಗ್ಗೂಡಿ ಹೋರಾಟ ನಡೆಸಬೇಕು. ಕಾನೂನು ಹೋರಾಟದಿಂದ ಸಮಸ್ಯೆ ಬಗೆಹರಿಯುವುದೆಂಬ ಭ್ರಮೆ ಬೇಡ," ಎಂದರು.

ಆಟೊರಿಕ್ಷಾ ಡ್ರೈವರ್ಸ್ ಯೂನಿಯನ್‌ನ ಅಧ್ಯಕ್ಷ ಎಂ.ಎಸ್.ಮೀನಾಕ್ಷಿ ಸುಂದರಂ, "ಕೇಂದ್ರ ಜಾರಿಗೆ ತರುತ್ತಿರುವ ಪ್ರತಿಯೊಂದು ಕಾನೂನು ದುರ್ಬಲ ವರ್ಗದ ರಕ್ಷಣೆಯ ತತ್ವವನ್ನು ಒಳಗೊಂಡಿವೆ. ಆದರೆ, ಅವು ಕ್ರಮೇಣ ಬಲಿಷ್ಠರಿಗೆ ಅನುಕೂಲ ಮಾಡಿಕೊಡುತ್ತಾ ಹೋಗುತ್ತವೆ. 'ಮೇಕ್ ಇನ್ ಇಂಡಿ-ಯಾ' ಎಂದು ಹೇಳಿದ ಮೋದಿ ಅವರಿಗೆ 'ಮೇಕ್ ಫಾರ್ ಇಂಡಿಯಾ' ಎಂದು ಯಾಕೆ ಹೇಳಲಾಗಲಿಲ್ಲ," ಎಂದು ಕಿಡಿಕಾರಿದರು.



ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿಗಮಗಳ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಮಂಜುನಾಥ್, ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಉಪನ್ಯಾಸಕ ಚಂದ್ರಶೇಖರ್, ಆದರ್ಶ ಆಟೊ ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ಎಂ.ಮಂಜುನಾಥ್, ರಾಜೀವ ಗಾಂಧಿ ಆಟೋ ಚಾಲಕರ ಸಂಘದ ಅಧ್ಯಕ್ಷ ಚಂದ್ರಶೇಖರ್, ವಕೀಲ ನಾರಾಯಣಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು. •

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಗುರುತಿನ ಚೀಟಿ ವಿತರಣೆ ಮತ್ತು ಕಾನೂನು ಅರಿವು-ನೆರವು ಕಾರ್ಯಕ್ರಮ

ಸೂಡಿ :

ಕಾನೂನು ಸೇವೆಗಳ ಸಮಿತಿ, ತಾಲೂಕಾ ನ್ಯಾಯವಾದಿಗಳ ಸಂಘ, ಸಹಾಯಕ ಸರಕಾರಿ ಅಭಿಯೋಜಕರ ಇಲಾಖೆ ರೋಣ, ಜಿಲ್ಲಾ ಕಾರ್ಮಿಕ ಇಲಾಖೆ ಗದಗ, ಮತ್ತು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸಂಘ (ಸಿಐಟಿಯು) ಸೂಡಿ ಗ್ರಾಮ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕಾನೂನು ಅರಿವು-ನೆರವು ಕಾರ್ಯಕ್ರಮ ಸ್ಥಳಿಯ ಸೂಡಿ ಗ್ರಾಮದ ಕಸ್ತೂರಿ ಬಾ ಪ್ರಾಥಮಿಕ ಶಾಲೆಯಲ್ಲಿ ಜರುಗಿತು.

ನ್ಯಾಯವಾದಿಗಳಾದ ವಿ. ಡಿ. ಪಾವಸ್ಕರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ1996 ರ ಅಡಿಯಲ್ಲಿ ಬರುವ ಸೌಲಭ್ಯಗಳ ಬಗ್ಗೆ ಮಾಹಿತಿ ತಿಳಿಸುತ್ತಾ ಕಟ್ಟಡ ನಿರ್ಮಾಣ ಕಾರ್ಮಿಕರ ಕೆಲಸ ಅಪಾಯಕರವಾಗಿದ್ದು ಕಟ್ಟಡ ನಿರ್ಮಾಣ ಕಾರ್ಮಿಕರು ಕಲ್ಯಾಣ ಮಂಡಳಿಗೆ ಸದಸ್ಯರಾಗಿ ಕಲ್ಯಾಣ ಮಂಡಳಿಯಿಂದ ಸಿಗುವಂತಹ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು, ಕಾರ್ಮಿಕರು ದುಶ್ಚಟಗಳಿಗೆ ಬಲಿಯಾಗದೆ ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸುವ ಮೂಲಕ ಸಮಾಜದಲ್ಲಿ ಗೌರವದಿಂದ ಬದುಕಬೇಕು ಎಂದು ಹೇಳಿದರು.

ಕಾರ್ಮಿಕ ಮುಖಂಡ, ನ್ಯಾಯವಾದಿ ಎಮ್. ಎಸ್. ಹಡಪದ ಮಾತನಾಡಿ ಕಾರ್ಮಿಕರು ಕೇವಲ ಗುರುತಿನ ಚೀಟಿಯನ್ನು ಪಡೆದುಕೊಂಡರೆ ಸಾಲದು ಸೌಲಭ್ಯಗಳನ್ನು ಪಡೆದುಕೊಳ್ಳಲು ಇರುವ ತಾಂತ್ರಿಕ ವಿಧಾನಗಳ ಬಗ್ಗೆ ಮಾಹಿತಿ ಪಡೆಯುವುದು ಅವಶ್ಯ. ಕಾರ್ಮಿಕರ ಹೋರಾಟ, ತ್ಯಾಗ, ಬಲಿದಾನಗಳಿಂದ ಪಡೆದ ಕಲ್ಯಾಣ ಮಂಡಳಿಯ ಸೌಲಭ್ಯಗಳು ದೊರೆಯಬೇಕಾದರೆ ಸಂಘಟನೆ ಅವಶ್ಯ. ಕಾರಣ ಕಾರ್ಮಿಕರು ಸಂಘಟನೆಯನ್ನು ಶಿಸ್ತು ಬದ್ಧವಾಗಿ ಕಟ್ಟಿಕೊಂಡು ಕಲ್ಯಾಣ ಮಂಡಳಿಯಿಂದ ದೊರೆಯುವ ಶೈಕ್ಷಣಿಕ ಧನಸಹಾಯ, ಮದುವೆ ಧನಸಹಾಯ, ಆರೋಗ್ಯ ಚಿಕಿತ್ಸಾ ವೆಚ್ಚ, ಹೆರಿಗೆ ಧನ ಸಹಾಯ, 60 ವರ್ಷದ ನಂತರ ಸಿಗುವ ಮಾಸಿಕ ಪಿಂಚಣಿ, ಆಪಘಾತ ವಿಮೆ, ಮುಂತಾದ ಸೌಲಭ್ಯ ಪಡೆದುಕೊಳ್ಳಿ ಎಂದು ತಿಳಿಸಿದರು.

ಜಿಲ್ಲಾ ಕಾರ್ಮಿಕ ಇಲಾಖೆಯ ಕಾರ್ಮಿಕ ನಿರೀಕ್ಷಕರಾದ ಶ್ರೀ ಸಿದ್ದನಗೌಡ ಪಾಟೀಲ ಮಾತನಾಡಿ ನೊಂದಾಯಿತ ಕಾರ್ಮಿಕರಿಗೆ 2ಲಕ್ಷ ರೂ ಅಫಘಾತ ವಿಮೆ, 5ನೇ ತರಗತಿಯಿಂದ ಕಾರ್ಮಿಕ ಮಕ್ಕಳಿಗೆ ಶೈಕ್ಷಣಿಕ ಧನ ಸಹಾಯ, ಮದುವೆ ಧನಸಹಾಯ, ಆರೋಗ್ಯ ಚಿಕಿತ್ಸಾ ವೆಚ್ಚ, ಹೆರಿಗೆ ಧನ ಸಹಾಯ, 60 ವರ್ಷದ ನಂತರ ಸಿಗುವ ಮಾಸಿಕ ಪಿಂಚನಿ, ಆಘಘಾತ ವಿಮೆ, ಮನೆ ನಿರ್ಮಿಸಿಕೊಳ್ಳಲು ಅಥವಾ ಮನೆ ಕೊಂಡುಕೊಳ್ಳಲು ಬೇಕಾದ ಮಾಹಿತಿಗಳ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಹೊಸದಾಗಿ ನೋಂದಾಯಿತರಾದ ಕಾರ್ಮಿಕರಿಗೆ ಗುರುತಿನ ಚೀಟಿ ವಿತರಿಸಲಾಯಿತು. ನ್ಯಾಯವಾದಿಗಳಾದ ಶಾಂತಕುಮಾರ ಕೊಳ್ಳಪ್ಪನವರ, ಪ್ರಕಾಶ ಬಡಿಗೇರ, ಸುಭಾಸ ಬಡಿಗೇರ ಬಸವರಾಜ ವಡ್ಡರ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸಂಘ (ಸಿಐಟಿಯು) ಸೂಡಿ ಗ್ರಾಮ ಘಟಕದ ಅಧ್ಯಕ್ಷರಾದ ಭರಮಪ್ಪ ಬಿ ವಡ್ಡರ ವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸಂಘದ ಜಿಲ್ಲಾ ಅಧ್ಯಕ್ಷರಾದ ಮಾರುತಿ ಚಿಟಗಿ, ಸೂಡಿ ಗ್ರಾಮ ಘಟಕದ ಕಾರ್ಯದರ್ಶಿ ಶರಣಪ್ಪ ವಡ್ಡರ ವಂದಿಸಿದರು. •

ಜನಶಕ್ತಿ
ಕನ್ನಡ ವಾರಪತ್ರಿಕೆ



ಕೃಷಿ ಉತ್ಪನಗಳಿಗೆ ಬೆಂಬಲ ಬೆಲೆ ದೊರಕಿಸುವುದು...... ನಮ್ಮ ಸರ್ಕಾರಗಳ ಆದ್ಯತೆ ಆಗಲಾರದೆ.........?

▌ನಿತ್ಯಾನಂದಸ್ವಾಮಿ

ಕಳೆದ ವರ್ಷದಂತೆ ಈ ವರ್ಷವೂ ಮಾರುಕಟ್ಟೆಗೆ ಬರುತ್ತಿರುವ ಕೃಷಿ ಉತ್ಪನ್ನಗಳ ಬೆಲೆ ಕುಸಿದು ರೈತರು ಕಂಗಾಲಾಗಿದ್ದಾರೆ. ಪಿರಿಯಾಪಟ್ಟಣ, ಎಚ್.ಡಿ. ಕೋಟೆ, ಹುಣಸೂರು, ಕೊಡಗು ಪ್ರದೇಶದಲ್ಲಿ ತಂಬಾಕು ಪ್ರಮುಖ ಬೆಳೆಯಾದರೆ, ಶುಂಠಿಗೆ ಎರಡನೇ ಸ್ಥಾನ. ಈ ಬಾರಿ ಸರಿಯಾದ ಸಮಯಕ್ಕೆ ಮಳೆ ಬಾರದಿರುವದು ಮತ್ತು ನಂತರ ಅತಿವೃಷ್ಟಿಯಾಗಿರುವದರಿಂದ ಶುಂಠಿ ಇಳುವರಿ ಕಡಿಮೆಯಾಗಿದೆ. ಕಳೆದ ಬಾರಿಗಿಂತ ಈ ಬಾರಿ ಇಳುವರಿ ಕಡಿಮೆಯಾಗಿದ್ದರೂ ತೀವ್ರ ಬೆಲೆ ಕುಸಿತದಿಂದ ರೈತರಿಗೆ ತುಂಬಾ ನಷ್ಟವಾಗಿದೆ. ಟೊಮೊಟೊ ಬೆಲೆ ದಿಡೀರ್ ಕುಸಿತ ಕಂಡಿದ್ದರಿಂದ ಮೈಸೂರು, ಪಾಂಡವಪುರ, ಮಳವಳ್ಳಿ ಮೊದಲಾದ ತಾಲೂಕಗಳ ರೈತರು ಮಾರಾಟಕ್ಕಾಗಿ ತಂದಿದ್ದ ಟೊಮೊಟೊಗಳನ್ನು ರಸ್ತೆಗೆ ಸುರಿದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಟೊಮೊಟೊ ಬೆಳೆಯಲು ಉಪಯೋಗಿಸುವ ಗೊಬ್ಬರ ಮತ್ತು ಕ್ರಿಮಿನಾಶಕಗಳಿಗೆ ವಿಧಿಸಲಾಗುತ್ತಿರುವ ದುಬಾರಿ ತೆರಿಗೆಯಿಂದ ಟೊಮೊಟೊ ಬೆಳೆಗಾರರು ಹೆಚ್ಚು ನಷ್ಟಕ್ಕೆ ಒಳಗಾಗಿರುತ್ತಾರೆ.

ಈರುಳ್ಳಿ ದರದಲ್ಲಿ ಭಾರಿ ಕುಸಿತದಿಂದ ತೀವ್ರ ಆತಂಕಕ್ಕೆ ಒಳಗಾದ ರೈತರು ಇತ್ತೀಚಿಗೆ ದಾವಣಗೆರೆಯಲ್ಲಿ ರೈತರು ರಸ್ತೆತಡೆ ನಡೆಸಿದ್ದು ರಾಜ್ಯದ ಗಮನ ಸೆಳೆದಿದೆ. ಹಬ್ಬದ ದಿನಗಳಲ್ಲಿ ದಾವಣಗೆರೆ ಮಾರುಕಟ್ಟೆಯಲ್ಲಿ ಉತ್ತಮ ದರ ಸಿಗಬಹುದೆಂದು ನಿರೀಕ್ಷಿಸಿ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ, ಜಗಳೂರು, ಹಾವೇರಿ ಜಿಲ್ಲೆಯ ರಾಣೇಬೆನ್ನೂರ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮುಂತಾದ ತಾಲೂಕಗಳಿಂದ ಬಳ್ಳಾರಿ, ಗದಗ ಮುಂತಾದ ದೂರದ ಜಿಲ್ಲೆಗಳಿಂದ ರೈತರು ಈರುಳ್ಳಿ ತಂದಿದ್ದರು. ಆದರೆ 50 ಕೆ.ಜಿ. ತೂಕವಿರುವ ಈರುಳ್ಳಿ ಚೀಲದ ದರ ರೂ.40 ಕ್ಕೆ ಕುಸಿದಾಗ ಆಕ್ರೋಶಗೊಂಡ ರೈತರು ರಸ್ತೆಯ ಮೇಲೇ ಧರಣಿ ಕುಳಿತರು. ಕೇಂದ್ರ ಸರಕಾರ ಈರುಳ್ಳಿ ರಫ್ತಿಗೆ ಮಿತಿ ಹೇರಿರುವದು, ಹಾಗೂ ರಫ್ತು ಸುಂಕ ಹೆಚ್ಚಿಸಿರುವದು ಈರುಳ್ಳಿ ಬೆಲೆ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

ತಾವು ಬೆಳೆದ ಹತ್ತಿ, ಗೋವಿನ ಜೋಳ, ಈರುಳ್ಳಿ ಮೊದಲಾದ ಬೆಳೆಗಳಿಗೆ ಬೆಂಬಲ ಬೆಲೆ ನೀಡಬೇಕೆಂದು ಒತ್ತಾಯಿಸಿ ಇತ್ತೀಚಿಗೆ ನಡೆದ ರೈತ ಬಂಡಾಯದ ನೆಲ, ನರಗುಂದ ಬಂದ್ ಸಂಪೂರ್ಣ ಯಶಸ್ವಿಯಾಗಿತ್ತು. ಈ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದ ರೈತರು ಕೇಂದ್ರದ ಮೋದಿ ನೇತೃತ್ವದ ಬಿಜೆಪಿ ಸರಕಾರದ ವಿರುದ್ದ ಹಾಗೂ ರಾಜ್ಯದ ಸಿದ್ರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ವಿರುದ್ದ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಕಬ್ಬು ದರ ನಿಗದಿ ಪ್ರಶ್ನೆ ಇದುವರೆಗೂ, ಇತ್ಯರ್ಥವಾಗಿಲ್ಲ, ಉತ್ತರ ಕರ್ನಾಟಕದ ಇತರ ಬೆಳೆಗಳಿಗೂ ನ್ಯಾಯಸಮ್ಮತವಾದ ಬೆಲೆ ಸಿಗದೆ ರೈತರು ಪರಿತಪಿಸುತ್ತಿದ್ದಾರೆ. ಅತಿವೃಷ್ಠಿ, ಅನಾವೃಷ್ಠಿಯಿಂದ ಹಾನಿಗೀಡಾಗುವ ರೈತರಿಗೆ ಪರಿಹಾರವೂ ಸಿಗುವುದಿಲ್ಲ, ಕಷ್ಟ ಪಟ್ಟು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆಯೂ ಸಿಗುವುದಿಲ್ಲ.

ಈ ಸಲ ನಮಗೊಬ್ಬ 'ಮಾತನಾಡುವ' ಪ್ರಧಾನಿ ಸಿಕ್ಕಿದ್ದಾರೆ! ಅವರು ಎಲ್ಲಾ ವಿಷಯಗಳ ಬಗ್ಗೆ ಮಾತನಾಡುತ್ತಾರೆ. ಆದರೆ ಅವರು ಅಪ್ಪಿತಪ್ಪಿಯೂ ಕೃಷಿ ಬಿಕ್ಕಟ್ಟಿನ ಬಗ್ಗೆ, ರೈತರ ಸಂಕಷ್ಟಗಳ ಬಗ್ಗೆ ಮಾತನಾಡುವುದಿಲ್ಲ. ಈ ದೇಶದ ಎಲ್ಲಾ ಸಮಸ್ಯೆಗಳಿಗೆ ವಿದೇಶಿ ಬಂಡಾವಾಳ ಹೂಡಿಕೆಯೊಂದೇ ಪರಿಹಾರ ಎಂಬ ಭ್ರಮೆಯನ್ನು ಅವರು ಬಿತ್ತುತ್ತಿದ್ದಾರೆ. ರೈತರು ಬೆಳೆಯುವುದೂ ಬೇಡ, ಆತ್ಮಹತ್ಯೆ ಮಾಡಿಕೊಳ್ಳುವದೂ ಬೇಡ. ರೈತರು ತಮ್ಮ ಭೂಮಿಯನ್ನೆಲ್ಲಾ ಆ ವಿದೇಶಿ ಹೂಡಿಕೆದಾರರಿಗೆ ಒಪ್ಪಿಸಿ ಹಾಯಾಗಿರಬಹುದು ಎನ್ನುತ್ತಿದ್ದಾರೆ ಅವರು! ಅದನ್ನೇ ಬಿತ್ತರಿಸುತ್ತವೆ ನಮ್ಮ ಮಾಧ್ಯಮಗಳು ! ಈ ಮನುಷ್ಯನ ಮಾತಿಗೆ ಮರುಳಾಗುತ್ತಿದ್ದಾರೆ ನಮ್ಮ ಜನ. ಇದುವೆ ದೊಡ್ಡ ದುರಂತ !!

ರಾಜ್ಯದ ಮುಖ್ಯಮಂತ್ರಿಗಳು, ಕೃಷಿ ಮಂತ್ರಿಗಳು ಮತ್ತು ಇತರ ಮಂತ್ರಿಗಳು ರೈತರ ಬಗ್ಗೆ ಆಗಾಗ ಮಾತನಾಡುತ್ತಾರೆ. ಆದರೆ ರೈತರನ್ನು ಸಂಕಷ್ಟದಿಂದ ಪಾರುಮಾಡಲು ಏನನ್ನೂ ಮಾಡುತ್ತಿಲ್ಲ. ಕೃಷಿ ಉತ್ಪನ್ನಗಳ ಬೆಲೆ ಕುಸಿಯುತ್ತಿರುವದು ಇದೇ ಮೊದಲಲ್ಲ. ಪ್ರತಿ ಸಲವೂ ಈ ಸಮಸ್ಯೆ ತಲೆದೋರುತ್ತಲೇ ಇರುತ್ತದೆ. ಆವರ್ತ ನಿಧಿಗೆ ಆದ್ಯತೆಯ ಮೇರೆಗೆ ಹೆಚ್ಚು ಹಣವನ್ನು ಒದಗಿಸಿ, ಬೆಲೆ ಕುಸಿತದ ಸಂದರ್ಭದಲ್ಲಿ ಸರ್ಕಾರ ಮಧ್ಯಪ್ರವೇಶಿಸಿ, ರೈತರಿಗೆ ಬೆಂಬಲ ಬೆಲೆ ನೀಡಿ, ಅವರ ಉತ್ಪನ್ನಗಳನ್ನು ಖರೀದಿ ಮಾಡಿದರೆ ರೈತರು ದಿವಾಳಿಯಾಗುವದನ್ನು, ಕೃಷಿ ರಂಗವನ್ನು ತೊರೆಯುವದನ್ನು ತಪ್ಪಿಸಬಹುದು. ■

ಜನ್ ಧನ್ : 'ಮೋಡಿ'ಯಾಟದ ಮೋಸದ ಒಂದು ಬಲೆಯೇ ?



ಬ್ಯಾಂಕ್‌ನ ಪಾಸ್ ಬುಕ್ಕಿಗೆ ಎಂಟ್ರಿ ಹಾಕಿಸೋಣ ಅಂತಾ ಕೆನರಾ ಬ್ಯಾಂಕ್‌ನ ಒಳಗೆ ಹೋಗೋಣವೆಂದರೆ ಅಲ್ಲಿ ಕಾಲಿಡಲೂ ಜಾಗವೇ ಇಲ್ಲ. ಇವತ್ತು ಯಾಕೆ ಹೀಗೆ, ಇಷ್ಟೆಲ್ಲಾ ಜನ ಬ್ಯಾಂಕ್‌ಗೆ ಬಂದರಾದರೂ ಹೇಗೆ ಎಂದು ವಿಚಾರಿಸುವಾಗ ತಿಳಿದದ್ದು 'ಮೋದಿ ಎಫೆಕ್ಟ್' ಇದು ಅಂತಾ! ಗಿಜಿಗಿಡುವ ಜನ ಜಂಗುಳಿ ಅಲ್ಲಿ ಸೇರಿದ್ದು ಹೊಸ ಖಾತೆ ತೆರೆಯಲು. ಅಂದರೆ 'ಪ್ರಧಾನ ಮಂತ್ರಿ ಜನ್ ಧನ್ ಯೋಜನಾ' ದ ಫಲವುಣ್ಣಲು! ವಾರವೆಲ್ಲಾ ಖಾತೆ ತೆರೆಯುವ ಒತ್ತಡದಿಂದ ಪಾರಾಗಲು ಕೆಲವು ಬ್ಯಾಂಕ್‌ಗಳು ಎರಡು ದಿನಗಳನ್ನು ಈ ಖಾತೆದಾರರಿಗೆ ನಿಗದಿ ಮಾಡಿ ನಿಭಾಯಿಸುತ್ತಿವೆ.

ಹತಭಾಗ್ಯರೇ,
ಭಾಗ್ಯದ ಬಾಗಿಲು ತೆರೆದಿದೆ!

'ವಿಷಯ ಏನೇ ಇರಲಿ, ಏನು ಮಾಡಿಯಾದರೂ ಜನವರಿ 26, 2015ರೊಳಗೆ ಕನಿಷ್ಠ 7ಕೋಟಿ 50ಸಾವಿರ ಹೊಸ ಅಕೌಂಟ್‌ಗಳನ್ನು ತೆರೆಯಲೇ ಬೇಕು' ಎಂಬುದು ಕೇಂದ್ರ ಸರಕಾರದ ಆಜ್ಞೆ, ಮುಂದಿನ ಆಗಸ್ಟ್ 15 ರೊಳಗೆ ಹೊಸ ಖಾತೆಗಳು ಕನಿಷ್ಠ 15 ಕೋಟಿಗಳಿಗೆ ವಿಸ್ತರಿಸಬೇಕು. ನೋಡಿ! ಮೋದಿ 2014 ರ ಆಗಸ್ಟ್ 15ರಂದು ಲಾಲ್‌ಕಿಲಾದ ಮೇಲೆ ನಿಂತು ಭಾಷಣ ಮಾಡಿ ಹೇಳಿದ 13 ದಿನದಲ್ಲೇ ಅಂದರೆ ಆಗಸ್ಟ್ 28ರಂದು ಇಡೀ ದೇಶ್ಯಾದ್ಯಂತ ಒಂದು ದಿನದಲ್ಲೇ 77 ಸಾವಿರ ಸ್ಥಳಗಳಲ್ಲಿ 1ಕೋಟಿ 50 ಲಕ್ಷ ಅಕೌಂಟ್‌ಗಳನ್ನು ತೆರೆಯಲಾಗಲಿಲ್ಲವೇ! (ಕರ್ನಾಟಕದಲ್ಲಿ 12.19 ಲಕ್ಷ) ಹಾಗೇ ಇದೂ ಆಗಬೇಕು. ಬ್ಯಾಂಕ್‌ನ ಮೆಟ್ಟಿಲೇರದವರು, ಏರಿದರೂ ಖಾಲಿ ಕೈಯವರಿಗೆ ಖಾತೆ ತೆರೆಯಲಾಗುವುದಿಲ್ಲವೆಂದು ಮುಖಕ್ಕೆ ಹೊಡೆದ ಹಾಗೆ ಅಧಿಕಾರಿಗಳಿಂದ ಹೇಳಿಸಿಕೊಂಡು ತಲೆ ಕೆಳಗೆ ಹಾಕಿ ಹೊರ ನಡೆದವರು ಎಲ್ಲರೂ ಮೋದಿ ಮಾತಿಗೆ ತಲೆದೂಗಿ ಬಂದರಲ್ಲ, ಹಾಗೇ ಆಗಬೇಕು.

ಇದನ್ನೇ ಮೋದಿ ಹಿಂದೆಂದೂ ಕಾಣದ ಚಾರಿತ್ರಿಕ ದಾಖಲೆ ಎಂದು ಹೇಳಿದ್ದು. ಒಂದೇ ದಿನ ಕೇಂದ್ರದ ಮಂತ್ರಿಗಳು, ಮುಖ್ಯಮಂತ್ರಿಗಳೂ, ಅಧಿಕಾರಿಗಳು ಏಕಕಾಲದಲ್ಲೇ ಒಂದು ಯೋಜನೆಗೆ ತೊಡಗಿದ್ದು ಹಿಂದೆಂದೂ ಕಾಣದ್ದು ಎಂದು ಬಣ್ಣಿಸಿದ್ದು!



ಗಾಂಧಿ ಮಾಡದ್ದು

ಅಂದರೆ, ಇದು ಒಂದು ಭಾರೀ 'ಮಹತ್ವಾಕಾಂಕ್ಷೆ'ಯ ಯೋಜನೆ! ಬಡತನ ನಿರ್ಮೂಲನೆಗೆ ದಿಟ್ಟ ಕ್ರಮ, ಆರ್ಥಿಕ ಅಸ್ಪೃಶ್ಯತೆಗೆ ಅಂತ್ಯ ಹಾಡುವ ದಿಟ್ಟ ಹೆಜ್ಜೆ ಎಂದೆಲ್ಲಾ ಬಣ್ಣಿಸಿದ್ದು! 'ಬಡತನ ನಿರ್ಮೂಲನ ಆಗಬೇಕಾದರೆ ಆರ್ಥಿಕ ವ್ಯವಸ್ಥೆಯೊಂದಿಗೆ ಸಂಬಂಧ ಕಲ್ಪಿಸಬೇಕು. 1969ರಲ್ಲಿ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿದಾಗ ಬಡತನ ನಿರ್ಮೂಲನೆ ಮಾಡುವ ಸಂಕಲ್ಪ ಈಡೇರಿಲ್ಲ. ಸ್ವಾತಂತ್ರ್ಯ ಬಂದು 68 ವರುಷಗಳಾದರೂ ಶೇ.68 ರಷ್ಟು ಜನರಾದರೂ ಬ್ಯಾಂಕ್ ಖಾತೆ ತೆರೆಯಲಿಲ್ಲ, ಮಹಾತ್ಮ ಗಾಂಧಿ ಸಾಮಾಜಿಕ ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು, ಇದೀಗ ಆರ್ಥಿಕ ಅಸ್ಪೃಶ್ಯತೆಯ ವಿರುದ್ಧ ಹೋರಾಡ ಬೇಕಿದೆ. ಅದನ್ನೇ ನಾನು ಮಾಡೋದು' ಎಂದು 'ನಮೋ' ಹೇಳಿದಾಗ ಸಾಮಾನ್ಯರು ತಲೆದೂಗದೇ ಇದ್ದಾರೆಯೇ? (ನಮ್ಮ ಮಾಧ್ಯಮಗಳು ಸುಮ್ಮನೇ ಬಿಟ್ಟಾವೆಯೇ?) ಹೇಗಿದೆ ಮೋದಿಯ ಮಾತಿನ ಮೋಡಿ! ಒಂದೇ ಕಲ್ಲಿಗೆ ರಾಷ್ಟ್ರೀಕರಣ, ಮಹಾತ್ಮ ಗಾಂಧಿ, ಅಸ್ಪೃಶ್ಯತೆಯ ಹಲವು ಹಕ್ಕಿಗಳನ್ನು ಹೊಡೆದುರುಳಿಸುವ ತಂತ್ರ. ದೋಷ ಇದ್ದದ್ದು ನೀತಿ ನಿರ್ಧಾರಗಳಲ್ಲೋ ಅಥವಾ ಆಳುವವರ ವರ್ಗ ಹಿತಾಸಕ್ತಿ ಕಾಯುವ ಜಾರಿಯ ಗುರಿಯಲ್ಲೋ, ಜನರಿಗೆ ಸುಲಭವಾಗಿ ಅರ್ಥವಾಗಬಾರದು, ಗೊಂದಲದಲ್ಲೇ ಬೀಳಬೇಕು!

ಹಿಂದೆ ಒಬ್ಬ ಪ್ರಧಾನಿ ಇದ್ದರು ಅವರು ಮಾತನ್ನೇ ಆಡದವರು, ಈಗ ಇರುವವರು ಬರೀ ಮಾತನ್ನೇ ಆಡುವವರು! ಭಲೇ ಕಾರ್ಪೋ–ಸಂಘ ಪ್ರಚಾರಕರು!

ಆಫರ್ ಅಂದ್ರೆ ಇದು

ಕೇಂದ್ರ ಸರಕಾರವೇ ಘೋಷಿಸಿದಂತೆ ಈ ಯೋಜನೆಯ ವ್ಯಾಪ್ತಿಯಲ್ಲಿ ಖಾತೆ ತೆರೆದವರಿಗೆ ಒಂದು ಲಕ್ಷ ರೂಪಾಯಿಗಳ ಅಪಘಾತ ವಿಮೆ ಸಿಗಲಿದೆ. ಖಾತೆಯಲ್ಲಿ ಶೂನ್ಯ ಡಿಪಾಸಿಟ್ ಇದ್ದರೂ 5000 ರೂ.ಗಳವರೆಗೆ ಸಾಲ ಸಿಗುತ್ತದೆ! ಪ್ರೋತ್ಸಾಹಕರವಾಗಿ ಮುಂದಿನ ಜನವರಿ 26ರೊಳಗೆ ಖಾತೆ ತೆರೆದವರಿಗೆ 30 ಸಾವಿರದಷ್ಟು ವಿಮೆಯೂ ಸಾಧ್ಯ. ಖಾತೆ ತೆರೆದ–ರೇ ಸಾಕು, ಸೊನ್ನೆಯಲ್ಲೇ ಖಾತೆ ಆರಂಭ! ಇಂತಹ 'ಆಫರ್' ಯಾರಿಗೆ ಬೇಡ ಹೇಳಿ!

ತರೋದು ಎಲ್ಲಿಂದ? ಯೋಚಿಸಿದ್ದೀರಾ!

ನಮ್ಮ ದೇಶದಲ್ಲಿ ಕೋಟ್ಯಾಂತರ ಜನರಿಗೆ ಬ್ಯಾಂಕಿನ ಮುಖವನ್ನೇ ನೋಡುವ ಭಾಗ್ಯವೇ ಬರಲಿಲ್ಲ. ಖಾತೆ ತೆರೆಯುವುದೋ ದೂರದ ಮಾತು. ಅಂತಹವರಿಗೆ ಇದು ಒಂದು ಒಳ್ಳೇ ಅವಕಾಶ. ಯೋಜನೆಯಲ್ಲಿ ಪ್ರಕಟಿಸಿದಂತೆ ಫಲ ಸಿಕ್ಕರೆ ಖಂಡಿತಕ್ಕೂ ಸಂತೋಷ. ಬಹುತೇಕ ಜನ ಈ ಸಂತೋಷದಲ್ಲಿಯೇ ಮೈ ಮರೆತಿದ್ದಾರೆ. ಇದರ ನಿಜ ಜಾರಿ ಹೇಗೆ ಎಂಬ ಬಗ್ಗೆ ಜನರಿಗಿರಲಿ, ಕೇಂದ್ರ ಸರಕಾರವೇ ಸ್ಪಷ್ಟವಾಗಿ ಹೇಳೇ ಇಲ್ಲ! ಕನಿಷ್ಟ ಬಡತನದ ರೇಖೆಯಲ್ಲಿರುವ ಜನರಿಗೆ ಖಾತೆ ಎಂದರೂ ಎಷ್ಟು ಕೋಟಿ ಕೋಟಿ ರೂಪಾಯಿಗಳನ್ನು ಎಲ್ಲಿಂದ ತರುವುದು. ಉಳಿದವರದ್ದೂ ಎಂದ–ರೆ ಅದರ ಲೆಕ್ಕವೇನು? ಈಗಲೇ ಖಾಸಗಿ ಕಾರ್ಪೋರೇಟ್ ಕಂಪನಿಗಳನ್ನು ಕೊಬ್ಬಿಸುತ್ತಿರುವ

ಪುಟ 15 ಕ್ಕೆ

ನಿಯಂತ್ರಣ ಮುಕ್ತ ಡೀಸೆಲ್ ನೀತಿ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆ

ಮಹಾರಾಷ್ಟ್ರ ಮತ್ತು ಹರಿಯಾಣ ವಿಧಾನಸಭಾ ಚುನಾವಣೆಗಳು ಮುಗಿಯುವುದನ್ನೇ ಕಾಯುತ್ತಿದ್ದ ಕೇಂದ್ರದ ಮೋದಿ ಸರ್ಕಾರವು ಕಾರ್ಪೋರೇಟ್ ಗುತ್ತೇದಾರಿ ಕಂಪೆನಿಗಳಿಗೆ ಒಳ್ಳೆಯ ದಿನಗಳನ್ನು ತರಲು ಹೊರಟಿದೆ. ಗ್ಯಾಸ್ ಬೆಲೆಯ ಹೆಚ್ಚಳವು ಸಮಾನ್ಯವಾಗಿ ರಸಗೊಬ್ಬರಗಳ ಮತ್ತು ವಿದ್ಯುತ್‌ಚ್ಚಕ್ತಿಯ ದರ ಏರಿಕೆಗೆ ಕಾರಣವಾಗುತ್ತದೆ.


ಮಂಗಳೂರಿನಲ್ಲಿ ಪ್ರತಿಭಟನೆ

ಗ್ಯಾಸ್ ಬೆಲೆಯಲ್ಲಿ ಒಂದು ಡಾಲರ್ ಹೆಚ್ಚಾದರೆ, ರಸಗೊಬ್ಬರದ ಬೆಲೆ ರೂ.1,370 ಹೆಚ್ಚಾಗುತ್ತದೆ. ಈಗ ಗ್ಯಾಸ್‌ಗೆ ರೂ.1.41 ರೂಪಾಯಿ ಹೆಚ್ಚಾಗಿರುವುದರಿಂದ ಒಟ್ಟು ರೂ.1,932 ಒಂದು ಟನ್‌ಗೆ ಏರಲಿದೆ. ಹಾಗೆಯೇ ವಿದ್ಯುತ್ ಬೆಲೆಯೂ ಯೂನಿಟ್‌ಗೆ ರೂ.0.64, ಸಿಎನ್‌ಜಿ ಗ್ಯಾಸ್ ಬೆಲೆಯೂ ಕೆ.ಜಿ.ಗೆ ರೂ.2.81 ಹಾಗೂ ಅಡಿಗೆ ಅನಿಲದ ಬೆಲೆ ಕ್ಯೂಬಿಕ್ ಮೀಟರ್‌ಗೆ ರೂ.1.89 ಏರಲಿದೆ ಎಂದು ಲೆಕ್ಕಹಾಕಲಾಗಿದೆ. ಜನವಿರೋಧಿಯಾದ ಇಂತಹ ತೀರ್ಮಾನವನ್ನು ಜಾರಿಮಾಡಲು ಕೇಂದ್ರ ಸರ್ಕಾರ ಕಾಯುತ್ತಿದ್ದದ್ದು ಕೇವಲ ಮಹಾರಾಷ್ಟ್ರ ಮತ್ತು ಹರಿಯಾಣ ಚುನಾವಣೆಗಾಗಿ, ಗ್ಯಾಸ್‌ನ ದರ ಏರಿಸಿದ್ದು, ಸಾರ್ವಜನಿಕ ಒಡೆತನದಲ್ಲಿರುವ ಓ.ಎನ್.ಜಿ.ಸಿ. ಹಾಗೂ ಆರ್.ಐ.ಎಲ್,(ರಿಲಯನ್ಸ್) ಗ್ಯಾಸ್‌ಗೆ ಪ್ರಯೋಜನಕಾರಿಯಾಗಿದೆ. ಇದರ ಜೊತೆಗೆ ಗಮನಿಸಬೇಕಾದ ಅಂಶ ಓ.ಎನ್.ಜಿ.ಸಿ. ಕಂಪೆನಿಯ ಶೇ.5ರಷ್ಟು ಷೇರುಗಳನ್ನು ಮಾರಾಟ ಮಾಡಲು ಇತ್ತೀಚೆಗೆ ಮೋದಿ ಸರ್ಕಾರ ತೀರ್ಮಾನ ಮಾಡಿತ್ತು. ಗ್ಯಾಸಿನ ಬೆಲೆ ಏರಿಕೆಯ ಇನ್ನೊಂದು ಉದ್ದೇಶ ಷೇರಿನ ಬೆಲೆ ಏರಿಸಲು ಸಹಾಯವಾಗಲಿ ಎಂಬುದಾಗಿದೆ.



ಗ್ಯಾಸಿನ ಬೆಲೆಯನ್ನು ಏರಿಸುವ ಜೊತೆ ಜೊತೆಯಲ್ಲೇ ಡಿಸೇಲ್ ಬೆಲೆಯ ಮೇಲಿರುವ ನಿಯಂತ್ರಣವನ್ನು ತೆಗೆದು ಹಾಕಲಾಗಿದೆ. ಇನ್ನು ಮುಂದೆ ಡೀಸೆಲ್‌ನ ಬೆಲೆಯನ್ನು ನಿಗದಿ ಮಾಡುವ ಪೂರ್ಣ ಸ್ವಾತಂತ್ರ್ಯವನ್ನು ತೈಲ ಕಂಪೆನಿಗಳಿಗೆ ನೀಡಲಾಗಿದೆ. ಇನ್ನು ಮುಂದೆ ತೈಲ ಬೆಲೆಯನ್ನು ಏರಿಸುವ ಮತ್ತು ಇಳಿಸುವುದು ತೀರ್ಮಾನವನ್ನು ಕೇಂದ್ರ ಸರ್ಕಾರ ಕಳೆದುಕೊಂಡಿದೆ.

ಮೇಲಿನ ಎರಡು ಕ್ರಮಗಳು ಜನ ಸಾಮಾನ್ಯರ ಅಗತ್ಯ ಮತ್ತು ದಿನ ಬಳಕೆ ವಸ್ತುಗಳ ಬೆಲೆ ಏರಿ–ಕೆಗೆ ಅವಕಾಶ ನೀಡಿದಂತಾಗಿದೆ. ಇದರ ನೇರ ಪರಿಣಾಮ ಅಂತಿಮವಾಗಿ ರೈತರಿಗೆ ಬೀಳಲಿದೆ. ರೈತರಿಗೆ ರಸ ಗೊಬ್ಬರ ಮತ್ತು ವಿದ್ಯುತ್ ಬೆಲೆ ಏರಿಕೆಯ ಅವರ ಜೀವನ ದುಸ್ತರವಾಗುತ್ತದೆ.

ಹಾಗೂ 'ಮೇಕ್ ಇನ್ ಇಂಡಿಯಾ' ಮತ್ತು 'ಶ್ರಮವೇ ಜಯತೇ' ಎಂದು ಘೋಷಣೆ ಹೊರಡಿಸಿ ಹೊಸ ಯೋಜನೆಗಳನ್ನು ಜಾರಿಗೆ ತರುವ ಮುಖಾಂತರ ದೇಶದ ಕಾರ್ಮಿಕರ ಹಿತಕ್ಕಿಂತ ಕೆಲವೇ ಕಾನೂನುಗಳನ್ನು ಸಂಪೂರ್ಣವಾಗಿ ಮಾಲೀಕರ ಪರವಾಗಿ ಬದಲಾವಣೆಗೊಳಪಡಿಸಿ ಹೂಡಿಕೆದಾರರಿಗೆ ಎಲ್ಲಾ ಮಿತಿಗಳನ್ನು ತೆ–ಗೆದು ಹಾಕಿ ದೇಶದ ಲೂಟಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಜೊತೆಗೆ ದುಡಿಯುವ ಜನರನ್ನು 'ದೇಶದ ಅಭಿವೃದ್ಧಿ'ಯ ಹೆಸರಿನಲ್ಲಿ ಯಾವುದೇ ಕಾನೂನಿನ ರಕ್ಷಣೆ, ಸಾಮಾಜಿಕ ಮತ್ತು ಉದ್ಯೋಗ ಭದ್ರತೆ ಇಲ್ಲದೆ ಗುಲಾಮರಂತೆ ದುಡಿಯಬೇಕಾದ ಪರಿಸ್ಥಿತಿಗೆ ಮೋದಿ ಸರ್ಕಾರ ತಳ್ಳುತ್ತಿದೆ.

ಈ ಜನ ವಿರೋಧಿ ಕ್ರಮಗಳಿಗೆ ವಿರೋಧವಾಗಿ ಹಾಸನದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿ ಜನವಿರೋಧಿ ನೀತಿಗಳನ್ನು ಹಿಂಪಡೆಯುವಂತೆ ಮೋದಿ ಸರ್ಕಾರವನ್ನು ಆಗ್ರಹಿಸುತ್ತದೆ.

ಡೀಸೆಲ್ ಅನ್ನು ನಿಯಂತ್ರಣ ಮುಕ್ತಗೊಳಿಸಿದ ಕೇಂದ್ರ ಸರಕಾರದ ಕ್ರಮವನ್ನು ವಿರೋಧಿಸಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ರಾಜ್ಯವ್ಯಾಪಿಯಾದ ಪ್ರತಿಭಟನೆ ಕರೆ ನೀಡಿತ್ತು. ಈ ಕರೆಯಂತೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬರುತ್ತಿವೆ.

ಮಂಗಳೂರಿನಲ್ಲಿ ಪ್ರತಿಭಟನೆ

ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಅಕ್ಟೋಬರ್ 25 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಗುತ್ತಿಗೆದಾರ ಸಂಸ್ಥೆಗಳಿಗೆ ಒಳ್ಳೆಯ ದಿನ ಬರಬೇಕೆಂಬ ಒಳ ಉದ್ದೇಶದಿಂದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ತೈಲ ದರದ ನಿಯಂತ್ರಣವನ್ನು ಮುಕ್ತಗೊಳಿಸಿದೆ ಎಂಬುದಾಗಿ ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಹಿರಿಯ ಪಕ್ಷ ಮುಖಂಡರೂ ಆದ ಕೆ.ಆರ್.ಶ್ರೀಯಾನ್ ಟೀಕಿಸಿದರು.

ಅಂತಾರಾಷ್ಟ್ರೀಯವಾಗಿ ಕಚ್ಚಾ ತೈಲದ ದರ ಏರಿಕೆ ಅಥವಾ ಇಳಿಕೆ ಆದ ಸಂದರ್ಭದಲ್ಲಿ ಸಾಮಾನ್ಯವಾಗಿ ದೇಶದಲ್ಲಿ ತೈಲದ ದರ ಏರಿಕೆ ಅಥವಾ ಇಳಿಕೆ ಆಗುತ್ತಿದೆ. ಕಚ್ಚಾ ತೈಲದ ದರ ದೊಡ್ಡ ಪ್ರಮಾಣದಲ್ಲಿ ಇಳಿಕೆ ಆಗಿರುವ ಈಗಿನ ಸಂದರ್ಭದಲ್ಲಿ ಡೀಸೆಲ್ ದರವನ್ನು ಇಳಿಸಿ ಜನರ ಕಣ್ಣಿಗೆ ಮಂಕು ಬೂದಿ ಎರಚಿ, ಜೊತೆಯಲ್ಲೇ ದರ ನಿಯಂತ್ರಣವನ್ನು ಮುಕ್ತಗೊಳಿಸಲಾಗಿದೆ. ಆ ಮೂಲಕ ತೈಲ ಕಂಪೆನಿಗಳಿಗೆ ಸಂಪೂರ್ಣ ದರ ಏರಿಕೆ ಮಾಡಲು ಅವಕಾಶ ಕೊಟ್ಟಿದ್ದು, ಇದರ ಹಿಂದಿರುವ ರಾಜಕೀಯವನ್ನು ಬಯಲಿಗೆ ಎಳೆಯಬೇಕೆಂದು ಅವರು ಹೇಳಿದರು. ಈಗಿನ ಕೇಂದ್ರ ಸರಕಾರದ ನೀತಿ ಹಿಂದಿನ ಕಾಂಗ್ರೆಸ್ ಸರಕಾರದ ನೀತಿಯನ್ನೇ ಮುಂದುವರಿಸುತ್ತದೆ. ಉದ್ಯಮಿಗಳ ಹಿಡಿತದಲ್ಲಿರುವ ಮೋದಿ ನೇತೃತ್ವದ ಕೇಂದ್ರ ಸರಕಾರದ ನೀತಿಗಳ ವಿರುದ್ಧ ಜನ ಬೀದಿಗೆ ಇಳಿಯಬೇಕು ಎಂದು ಕೆ.ಆರ್.ಶ್ರೀಯಾನ್ ಕರೆ ನೀಡಿದರು.

ಪ್ರತಿಭಟನಾ ಪ್ರದರ್ಶನದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಯು.ಬಿ.ಲೋಕಯ್ಯ, ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಜಿಲ್ಲಾ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ. ರಸ್ತೆ ತಡೆಯನ್ನು ನಡೆಸಲಾಗಿದೆ. ಸುಮಾರು 150 ಜನ ಕಾರ್ಯಕರ್ತರು ಭಾಗವಹಿಸಿದ್ದರು. ಕಾಂ. ಜಿ.ವಿ. ಶ್ರೀರಾಮರೆಡ್ಡಿ, ಮುನಿವೆಂಕಟಪ್ಪ ಪ್ರತಿಭಟನಾಕಾರರನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಬಿಜಾಪುರ ಜಿಲ್ಲಾ ಸಮಿತಿಯು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದ್ದಾರೆ. ಜಿಲ್ಲಾ ಕಾರ್ಯದರ್ಶಿ ಬೀಮಸಿ ಕಲಾದಗಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಸುಮಾರು 50 ಜನ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಹಾಸನದಲ್ಲಿ ಮತಪ್ರದರ್ಶನ

ಅಕ್ಟೋಬರ್ 28 ರಂದು ಹಾಸನದ ಹೇಮಾವತಿ ಪ್ರಿತಿಮೆಯ ಬಳಿ ಸಿಪಿಐ(ಎಂ) ವತಿಯಿಂದ ಪ್ರತಿಭಟನೆ ನಡೆಯಿತು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮುಖಂಡರಾದ ಧರ್ಮೇಶ್, ಜಿ.ಪಿ.ಸತ್ಯನಾರಾಯಣ, ಎಚ್.ಆರ್.ನವೀನ್‌ಕುಮಾರ್ ಪ್ರತಿಭಟನೆಯಲ್ಲಿ ಪಾಳ್ಗೊಂಡಿದ್ದರು.

ಕೊಡಗು

ಕೊಡಗು ಜಿಲ್ಲೆಯ ವಿರಾಜಪೇಟೆಯ ಗಡಿಯಾರ ಚೌಕದಲ್ಲಿ ಅಕ್ಟೋಬರ್ 29 ರಂದು ಸಿಪಿಐ(ಎಂ) ಶಾಖೆಯ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಸಭೆಯನ್ನುದ್ದೇಶಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಎಸ್.ವೈ. ಗುರುಶಾಂತ್, ಶಾಖಾ ಕಾರ್ಯದರ್ಶಿ ರಮೇಶ್ ಶಾಜಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಡಾ. ಐ.ಆರ್. ದುರ್ಗಾಪ್ರಸಾದ್ ಮುಖಂಡರಾದ ಎಚ್.ವಿ. ರಮೇಶ್, ಜೋಶ್, ಸಾಬು ಮುಂತಾದವರು ಪಾಲ್ಗೊಂಡಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ, ಬಳ್ಳಾರಿ, ಹಗರಿ ಬೊಮ್ಮನಹಳ್ಳಿ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಗುಲ್ಬರ್ಗಾದಲ್ಲಿ ಶಹಾಪುರ, ಚಿಂಚೋಳಿ ಮತ್ತು ಗುಲ್ಬರ್ಗಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆದಿದೆ. ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ತುಮಕೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಪುರಭವನದ ಎದುರು ಪ್ರತಿಭಟನೆ ನಡೆದಿದೆ. •

ತುಮಕೂರು: ಶಾಂತಿನಗರದ ರಸ್ತೆಗಳ ದುರಸ್ತಿಗಾಗಿ ಮಹಾನಗರ ಪಾಲಿಕೆ ಮುಂದೆ ಪ್ರತಿಭಟನೆ



ತುಮಕೂರಿನ ಶಾಂತಿನಗರದ ಗೂಡ್‌ಶೆಡ್ ರೇವಣ್ಣ ರಸ್ತೆ ಮತ್ತು ಪಕ್ಕದ ರಸ್ತೆಗಳನ್ನು ದುರಸ್ತಿ ಮಾಡಬೇಕು ಹಾಗೂ ಚರಂಡಿ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಶಾಂತಿನಗರ ಘಟಕದ ನೇತೃತ್ವದಲ್ಲಿ ತುಮಕೂರು ಮಹಾ ನಗರ ಪಾಲಿಕೆ ಮುಂದೆ ಪ್ರತಿಭಟನೆ ನಡೆಸಲಾಯಿತು.

17ನೇ ವಾರ್ಡ್‌ನ ಶಾಂತಿನಗರದ ಗೂಡ್‌ಶೆಡ್ ರೇವಣ್ಣ ರಸ್ತೆ ಮತ್ತು ಪಕ್ಕದ ರಸ್ತೆಗಳು ಸರಿಯಾಗಿಲ್ಲ. ಮಕ್ಕಳು ವೃದ್ಧರು ಸೇರಿದಂತೆ ಹಲವಾರು ಜನ ಬಿದ್ದು ಗಾಯಗಳನ್ನು ಮಾಡಿಕೊಳ್ಳುತ್ತಿದ್ದಾರೆ ಮತ್ತು ಚರಂಡಿಯ ವ್ಯವಸ್ಥೆ ಇಲ್ಲದೆ ಮಳೆ ಬಂದಾಗ ನೀರು ಮನೆಗಳ ಮುಂದೆಯೇ ನಿಂತು ಕೆಸರು ಗದ್ದೆಯಾಗುತ್ತದೆ. ಇದರಿಂದ ಜನರು ಮತ್ತು ವಾಹನಗಳು ಸರಾಗವಾಗಿ ಸುರಕ್ಷಿತವಾಗಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಮಹಾನಗರಪಾಲಿಕೆ ಕಸವನ್ನು ಹಾಕಲು ವಾಹನದ ವ್ಯವಸ್ಥೆ ಮಾಡಿದ್ದರೂ ಸಹ ಇಲ್ಲಿಯ ನಿವಾಸಿಗಳು ಕಸಹಾಕಲು ಪರದಾಡುವ ಸ್ಥಿತಿ ಇದೆ ಎಂದು ಟೀಕಿಸಿದ ಪ್ರತಿಭಟನಾಕಾರರು ಮಹಾಪೌರರು ಇದೇ ವಾರ್ಡ್‌ನಿಂದ ಗೆದ್ದು ಬಂದಿದ್ದು ಇತ್ತ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಭರವಸೆ :

ಮಹಾನಗರ ಪಾಲಿಕೆಯ ಮಹಾಪೌರರಾದ ಗೀತಾ ರುದ್ರೇಶ್ ಮಾತನಾಡಿ ಇನ್ನೂ ಒಂದು ತಿಂಗಳ ಒಳಗಾಗಿ ಈ ಭಾಗದ ಜನತೆಗೆ ರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಮಾಡಿಕೊಡುವುದಾಗಿ ಭರವಸೆ ನೀಡಿದರು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು ಸಮಸ್ಯೆ ಇದ್ದಲ್ಲಿ ಅದನ್ನು ಬಗೆಹರಿಸುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ಡಿವೈಎಫ್‌ಐನ ಜಿಲ್ಲಾಧ್ಯಕ್ಷ ಎಸ್. ರಾಘವೇಂದ್ರ, ನಾರಾಯಣಸ್ವಾಮಿ, ಘಟಕದ ಮುಖಂಡರಾದ ಬಸವರಾಜು ಮುಂತಾದವರು ನೇತೃತ್ವವಹಿಸಿದ್ದರು.

ವರದಿ : ರಾಘವೇಂದ್ರ. ಎಸ್. ●


ಜನಶಕ್ತಿ
ಕನ್ನಡ ವಾರಪತ್ರಿಕೆ

ಕುಂದಾಪುರ ತಾಲ್ಲೂಕಿನ ಗ್ರಾಮ ಗ್ರಾಮಗಳಲ್ಲಿ ಕೂಲಿಕಾರರ ಸಂಘದ ರಚನೆ – ನಿವೇಶನ ರಹಿತರ ಸಮಾವೇಶಗಳು

ಕಿರಿಮಂಜೇಶ್ವರ : ನಿವೇಶನ ರಹಿತರ ಬೃಹತ್ ಸಮಾವೇಶ

'ಭೂಮಿಯ ಪ್ರಶ್ನೆ ನಮ್ಮ ದೇಶದ ನೈಜ ಅಭಿವೃದ್ಧಿಯ ಮೂಲ ಪ್ರಶ್ನೆಯಾಗಿದೆ' – ಯಾದವ ಶೆಟ್ಟಿ

ಭೂಮಿಯ ಪ್ರಶ್ನೆ ನಮ್ಮ ದೇಶದ ನೈಜ ಅಭಿವೃದ್ಧಿಯ ಮೂಲ ಪ್ರಶ್ನೆಯಾಗಿದೆ. ಲಭ್ಯವಿರುವ ಭೂಮಿಯ ಸರಿಯಾದ ಬಳಕೆ ಸಾಧ್ಯವಾದರೆ ಇಂದು ದೇಶದಲ್ಲಿ ಹೆಚ್ಚುತ್ತಿರುವ ಬಡತನ, ನಿರುದ್ಯೋಗ ಹಾಗೂ ಒಟ್ಟಾರೆ ಹಿಂದುಳಿಯುವಿಕೆಯಂತಹ ಮೂಲಭೂತ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಿದೆ ಎಂದು ತಿಳುವಳಿಕೆ ಇಂದಿಗೂ ಪ್ರಸ್ತುತವಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ಹೇಳಿದರು.



ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ನಿತ್ಯಾನಂದಸ್ವಾಮಿ

ಅವರು ಕುಂದಾಪುರ ತಾಲ್ಲೂಕಿನ ನಾಗೂರು ಶಾಂತೇರಿ ಕಾಮಾಕ್ಷಿ ಕಲ್ಯಾಣ ಮಂಟಪ ಸಭಾಂಗಣದಲ್ಲಿ ಕಿರಿಮಂಜೇಶ್ವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.



ಕಿರಿಮಂಜೇಶ್ವರ

ಭೂಮಿ ಒಂದು ನೈಸರ್ಗಿಕ ಸಂಪತ್ತು. ಅದು ಎಲ್ಲರಿಗೂ ಸೇರಿದ್ದು. ಹೇಗೆ ಗಾಳಿ, ನೀರು ಮೊದಲಾದವುಗಳು ಎಲ್ಲರಿಗೂ ಸೇರಿರುವುವೋ ಹಾಗೆಯೇ ಭೂಮಿಯೂ ಸಹ. ಆದರೆ ಭೂಮಿ ಎಂಬುದು ಬಹಳ ಹಿಂದೆಯೇ ಖಾಸಗಿ ಒಡೆತನಕ್ಕೆ ಸೇರಿದ ಆಸ್ತಿಯಾಗಿ ಪರಿವರ್ತನೆಯಾಗಿದೆ. ಕೆಲವರಿಗೆ ಮಾತ್ರ ಭೂಮಿ ಬಹುಸಂಖ್ಯಾತರು ಭೂಹೀನರಾಗಿದ್ದಾರೆ. ಭೂಮಿ ಇದ್ದವರಲ್ಲಿಯೂ ಚಿಕ್ಕ ಹಿಡುವಳಿದಾರರೇ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಶ್ರೀಮಂತ ಜಮೀನ್ದಾರರಲ್ಲಿ ನೂರಾರು, ಸಾವಿರಾರು ಎಕ್ರೆ ಭೂಮಿ ಇದೆ ಎಂದು ಯಾದವ ಶೆಟ್ಟಿ ನುಡಿದರು.

ಮರವಂತೆ ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಹೋರಾಟ ಸಮಿತಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿಗಳ ನೇತೃತ್ವದಲ್ಲಿ ಮನೆ ನಿವೇಶನ ರಹಿತರಿಂದ ಸಾಮೂಹಿಕವಾಗಿ ಸ್ವೀಕರಿಸಿದ ನಿವೇಶನ ಮಂಜೂರು ಕೊಡಲು ಒತ್ತಾಯಿಸುವ ಒಟ್ಟು 598 ಅರ್ಜಿಗಳನ್ನು ಕಿರಿಮಂಜೇಶ್ವರ ಗ್ರಾಮ ಸ್ಥಳೀಯ ಗ್ರಾಮ ಪಂಚಾಯತ್ ಸದಸ್ಯೆ ಹಾಗೂ ಹೋರಾಟ ಸಮಿತಿಯ ಸಂಚಾಲಕ ರಾಜು ದೇವಾಡಿಗ ಅವರಿಗೆ ಸಲ್ಲಿಸಲಾಯಿತು. ಕೃಷಿ ಕೂಲಿಕಾರರ ಸಂಘದ ರಾಜೀವ ಪಡುಕೋಣೆ, ವೆಂಕಟೇಶ ಕೋಣಿ, ನಾಗರತ್ನ ನಾಡ, ಸಿಐಟಿಯು ತಾಲೂಕು ಅಧ್ಯಕ್ಷ ಎಚ್.ನರಸಿಂಹ ಉಪಸ್ಥಿತರಿದ್ದರು. ಮರವಂತೆ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಎಸ್.ಜನಾರ್ಧನ ಮರವಂತೆ ಶುಭಕೋರಿ ಮಾತನಾಡಿದರು.

ಕಿರಿಮಂಜೇಶ್ವರ ಗ್ರಾಮ ಸಮಿತಿಗೆ ರಾಜು ದೇವಾಡಿಗ (ಅಧ್ಯಕ್ಷ) ಕೆ.ರಾಮಚಂದ್ರ ಕಿರಿಮಂಜೇಶ್ವರ (ಕಾರ್ಯದರ್ಶಿ) ಗುರುರಾಜ ಆಚಾರ್ಯ, ಸುಮತಿ ಆಚಾರ್, ಸುರೇಶ, ವಿಜಯ, ಗಣೇಶ ಆಕಳಬೈಲ್, ರವೀಂದ್ರ ಶ್ಯಾನ್‌ಭಾಗ್, ನಾರಾಯಣ ಮಡಿವಾಳ, ಮಂಜುನಾಥ ಗಾಂಧಿನಗರ ಕೊಡೇರಿ (ಸದಸ್ಯರು) ಸರ್ವಾನುಮತದಿಂದ ಆಯ್ಕೆಯಾದರು.



ನಾವುಂದ

ನಾವುಂದ : ಭೂಮಿ ಹಕ್ಕಿಗಾಗಿ ಹೋರಾಟ

ಸಾರ್ವಜನಿಕ ಉದ್ದೇಶದ ಹೆಸರಿನಲ್ಲಿ ಭಾರೀ ಪ್ರಮಾಣದ ಕೃಷಿ ಭೂಮಿಯನ್ನು ರೈತ–ರಿಂದ ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವ ವಿಷಯದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರಕಾರಗಳಿಗೂ ರಾಜ್ಯದ ಕಾಂಗ್ರೆಸ್ ಸರಕಾರಗಳಿಗೂ, ನಡುವೆ ಯಾವುದೇ ಧೋರಣಾತ್ಮಕ ವ್ಯತ್ಯಾಸಗಳಿಲ್ಲ. ಈ ಎರಡೂ ಪಕ್ಷಗಳು ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ನವ ಉದಾರೀಕರಣ ಧೋರಣೆಗಳನ್ನು ಜಾರಿಗೊಳಿಸುತ್ತಾ ಬಂದಿರುವುದರಿಂದ ವಿಶೇಷ ಆರ್ಥಿಕ ವಲಯಗಳ ನಿರ್ಮಾಣಕ್ಕಾಗಲೀ, ಬೃಹತ್ ರಸ್ತೆಗಳ, ವಿಮಾನ ನಿಲ್ದಾಣಗಳ ನಿರ್ಮಾಣಕ್ಕಾಗಲೀ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ವಿಷಯದಲ್ಲಿ ಈ ಎರಡು ಪಕ್ಷಗಳು ಸಮಾನ ಮನಸ್ಕ ಪಕ್ಷಗಳೇ ಆಗಿವೆ ಎಂದು ಸಿಐಟಿಯು ತಾಲೂಕು ಅಧ್ಯಕ್ಷ ಎಚ್.ನರಸಿಂಹ ಅಭಿಪ್ರಾಯಪಟ್ಟರು.



ಮರವಂತೆ

ನಾವುಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ ನಿವೇಶನ ರಹಿತರ ಹೋರಾಟ ಸಮಿತಿ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ಬಡ ನಿವೇಶನ ರಹಿತರಿಂದ ನಿವೇಶನ ಹಕ್ಕುಪತ್ರ ಪಡೆಯಲು ಸ್ವೀಕರಿಸಿದ ಅರ್ಜಿಗಳನ್ನು ನಾವುಂದ ಗ್ರಾಮ ಪಂಚಾಯತ್ ಕಛೇರಿಗೆ ಹಸ್ತಾಂತರಿಸುವ ನಿವೇಶನ ರಹಿತರ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

423 ಅರ್ಜಿಗಳನ್ನು ಗ್ರಾಮ ಪಂಚಾಯತ್ ಅಧ್ಯಕ್ಷೆ ಪದ್ಮಾವತಿಯವರಿಗೆ ಸಾಮೂಹಿಕವಾಗಿ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಕೃಷಿ ಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ, ಕಾರ್ಯದರ್ಶಿ ವೆಂಕಟೇಶ ಕೋಣಿ, ನಾಗರತ್ನ ನಾಡ, ಕಟ್ಟಡ ಕಾರ್ಮಿಕರ ಕಾರ್ಮಿಕರ ಸಂಘದ ಅಧ್ಯಕ್ಷ ರಾಜು ದೇವಾಡಿಗ, ಹೋರಾಟ ಸಮಿತಿ ಸಂಚಾಲಕಿ ಸಿಂಗಾರಿ, ಜೆ. ಹುಸೈನರ್ ಉಪಸ್ಥಿತರಿದ್ದರು. ನಿವೇಶನ ರಹಿತರ ಹೋರಾಟ ಸಮಿತಿಯ ಸಂಚಾಲಕ ಪ್ರಭಾಕರ ಅಚಾರ್ಯ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ನಾವುಂದ ಗ್ರಾಮ ಸಮಿತಿ ಆಯ್ಕೆ

ನಾವುಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡ ನಿವೇಶನ ರಹಿತರು ಭೂಮಿಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ನಾವುಂದ ಗ್ರಾಮದ – ಶಾರದ ಕಲ್ಯಾಣ ಮಂಟಪದಲ್ಲಿ ಜರಗಿದ ನಿವೇಶನ ರಹಿತರ ಬೃಹತ್ ಸಮಾವೇಶದಲ್ಲಿ – ಕೃಷಿಕೂಲಿಕಾರರ ಸಂಘ–ನಾವುಂದ ಗ್ರಾಮ ಸಮಿತಿಗೆ ಪ್ರಭಾಕರ ಆಚಾರ್ಯ (ಅಧ್ಯಕ್ಷ) ಸಿಂಗಾರಿ ಮಸ್ಕಿ ನಾವುಂದ (ಕಾರ್ಯದರ್ಶಿ) ಕೆ. ಮಹಮ್ಮದ್ ಇಲಿಯಾಸ್ ವಕೀಲರು, ಜೆ.ಹುಸೈನರ್ (ಸದಸ್ಯರು) ಇವರು ಸರ್ವಾನುಮತದಿಂದ ಆಯ್ಕೆಯಾದರು.

ಮರವಂತೆ : ನಿವೇಶನ ರಹಿತರಿಂದ ಪಂಚಾಯತ್ ಮುತ್ತಿಗೆ ಹೋರಾಟ

ಕ.ಪ್ರಾ.ಕೃ.ಕೂಲಿಕಾರರ ಸಂಘ ಕುಂದಾಪುರದ ಮರವಂತೆ ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಹೋರಾಟ ಸಮಿತಿಯ ನೇತೃತ್ವದಲ್ಲಿ ಬಡ ನಿವೇಶನ ರಹಿತರರಿಂದ ಸ್ವೀಕರಿಸಿದ ಅರ್ಜಿಗಳನ್ನು ನಿವೇಶನ ಮಂಜೂರು ಮಾಡಲು ಒತ್ತಾಯಿಸಿ ಮರವಂತೆ ಗ್ರಾಮ ಪಂಚಾಯತ್ ಕಛೇರಿ ಎದುರು ನಿವೇಶನ ರಹಿತರ ಬೃಹತ್ ಸಮಾವೇಶ ಜರಗಿತು.

ಸಮಾವೇಶವನ್ನು ಕೃಷಿ ಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ ಉದ್ಘಾಟಿಸಿ ಮಾತನಾಡುತ್ತಾ ಮನೆ ನಿವೇಶನ ರಹಿತರ ಸಮಸ್ಯೆ ನಗರ ಪ್ರದೇಶಗಳಲ್ಲಿಯೂ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿಯೂ ಗಂಭೀರವಾಗುತ್ತಿದೆ. ಸರಕಾರಗಳು ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮನೆ ಇಲ್ಲದವರಿಗೆ ಮನೆಗಳನ್ನು ಒದಗಿಸುವ ಭರವಸೆಗಳನ್ನು ನೀಡುತ್ತಿರುತ್ತವೆ. ಎಲ್ಲಾ ವಸತಿಹೀನರನ್ನು ಗ್ರಾಮಗಳಲ್ಲಿ ಮತ್ತು ನಗರಗಳಲ್ಲಿ ಸಂಘಟಿಸಿ ಕೃಷಿ ಕೂಲಿಕಾರರ ಸಂಘವು ಹೋರಾಟಗಳನ್ನು ಹಂತಹಂತವಾಗಿ ತೀವ್ರಗೊಳಿಸುತ್ತದೆ ಎಂದು ಹೇಳಿದರು.

ಕೃಷಿ ಕೂಲಿಕಾರರ ಸಂಘದ ತಾಲೂಕು ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾಡಿದರು. ಬದ್ಧತೆ ಮತ್ತು ಸಂಘಟನಾತ್ಮಕ ಒತ್ತಾಯ ಹಕ್ಕೊತ್ತಾಯ ಹಾಗೂ ಹೋರಾಟದ ಮೂಲಕ ಮಾತ್ರ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಹೇಳಿದರು. ಕೋಟೇಶ್ವರ ಗ್ರಾಮಪಂಚಾಯತ್ ಮಾಜಿ ಅಧ್ಯಕ್ಷ ಹಾಗೂ ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ ಕರಿಯ ದೇವಾಡಿಗ, ಸಿಐಟಿಯು ಕಾರ್ಮಿಕ ಸಂಘದ ಅಧ್ಯಕ್ಷ ಎಚ್.ನರಸಿಂಹ, ಡಿವೈಎಫ್ಐ ಮುಖಂಡ ಸುಬ್ರಹ್ಮಣ ಉಪಸ್ಥಿತರಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಸ್ಥಳೀಯ ಪಂಚಾಯತ್ ಸದಸ್ಯ ಹೋರಾಟ ಸಮಿತಿ ಸಂಚಾಲಕ ಮನ್ಸೂರ್ ಇಬ್ರಾಹಿಂ ವಹಿಸಿದ್ದರು.

ಇದೇ ಸಂದರ್ಭದಲ್ಲಿ ನಿವೇಶನ ರಹಿತರಿಂದ ಸ್ವೀಕರಿಸಿದ ಒಟ್ಟು 487 ಅರ್ಜಿಗಳನ್ನು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ

ಪುಟ 10 ಕ್ಕೆ



ಭೂಮಿಗಾಗಿ ಹೋರಾಟ: ಉಡುಪಿ ಜಿಲ್ಲೆಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರ



ವರದಿ : ವಾ. ಉಚ್ಚಿಲ್

ಅಕ್ರಮ ಭೂಮಿಯನ್ನು ಸಕ್ರಮ ಮಾಡುವಂತೆ, ನಿವೇಶನ ರಹಿತರಿಗೆ ನಿವೇಶನ ವಿತರಿಸುವಂತೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿಯ ಆಶ್ರಯದಲ್ಲಿ ತಾಲೂಕು ಕಚೇರಿ ಎದುರು ಅಕ್ಟೋಬರ್ 27, 2014 ರಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭವಾಗಿದೆ.

ಮುಷ್ಕರ ನಿರತರನ್ನು ಉದ್ದೇಶಿಸಿ ಮಾನತಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜು, ಅಕ್ರಮ ಭೂಮಿ ಸಕ್ರಮ ಮಾಡುವಂತೆ ಮತ್ತು ಬಡವರಿಗೆ ಉಚಿತ ನಿವೇಶನ ನೀಡುವಂತೆ ಆಗ್ರಹಿಸಿ ಮೂರು ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ, ಸರ್ಕಾರ ಬೇಡಿಕೆಗಳಿಗೆ ಸ್ಪಂದಿಸಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡವರು, ಕೂಲಿ ಕಾರ್ಮಿಕರು ಮತ್ತು ಬಡರೈತರ ಪರವಾದ ನಿಲುವು ತೆಗೆದು ಕೊಳ್ಳುತ್ತಿಲ್ಲ. ಬಗರ್ ಹುಕುಂ ಸೇರಿದಂತೆ ಎಲ್ಲ ರೀತಿಯ ಅಕ್ರಮ ಸಾಗುವಳಿ ಭೂಮಿಯನ್ನು ಮಂಜೂರು ಮಾಡಬೇಕೆಂದು ಆಗ್ರಹಿಸಿದರು.

ಎರಡೂ ಸರ್ಕಾರಗಳು ಬಹುರಾಷ್ಟ್ರೀಯ ಕಂಪೆನಿಗಳ ಪರವಾಗಿ ಕೆಲಸ ಮಾಡುತ್ತಿವೆ. ಸ್ವದೇಶೀ ಮಂತ್ರ ಜಪಿಸುವ ಬಿಜೆಪಿ ಸರ್ಕಾರ ಅಮೇರಿಕಾ, ಜಪಾನ್ ದೇಶಗಳ ಬಂಡವಾಳದಿಂದ ಅಭಿವೃದ್ಧಿ ಮಾಡುವ ಕನಸು ಕಾಣುತ್ತಿದೆ. ದೇಶದ ಅಭಿವೃದ್ಧಿಯಾಗಬೇಕಾದರೆ ಬಡವರು, ರೈತರು, ಕೂಲಿಕಾರ್ಮಿಕರ ಪರವಾದ ನಿಲುವು ಕೈಗೊಳ್ಳಬೇಕು. ಬಡವರಿಗೆ ಕನಿಷ್ಟ 5 ಗುಂಟೆ ನಿವೇಶನ ನೀಡಿದರೆ ಮನೆ ಕಟ್ಟಿಕೊಂಡು ಉಳಿದ ಜಾಗದಲ್ಲಿ ಕೃಷಿ ಹೈನುಗಾರಿಕೆ, ಮೀನುಗಾರಿಕೆ ಮಾಡುತ್ತಾರೆ. ಇದರಿಂದ ರಾಷ್ಟ್ರೀಯ ಉತ್ಪನ್ನ ಗಣನೀಯವಾಗಿ ಹೆಚ್ಚಳವಾಗುತ್ತದೆ ಎಂದು ಅವರು ಪ್ರತಿಪಾದಿಸಿದರು.

ಅನಿರ್ದಿಷ್ಟಾವಧಿ ಮುಷ್ಕರ ಎರಡನೆ ದಿನಕ್ಕೆ ಮುಂದುವರಿದಿದ್ದಾಗ, ಪ್ರತಿಭಟನಾಕಾರರನ್ನುದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದ ಸ್ವಾಮಿ ಮಾತನಾಡಿದರು. ಆಹಾರ, ಶಿಕ್ಷಣ, ವಸತಿ ಮೂಲಭೂತ ಅಗತ್ಯಗಳಾಗಿದ್ದು ಇವನ್ನು ಒದಗಿಸಿ ಕೊಡುವುದು ಸರ್ಕಾರದ ಕರ್ತವ್ಯ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಬಗ್ಗೆ ನಿರ್ಲಕ್ಷ್ಯ ವಹಿಸಿವೆ. ಅವರ ಗಮನ ವಿದೇಶಿ ಕಾರ್ಪರೇಟ್ ಕಂಪೆನಿಗಳ ಮೇಲಿವೆ. ದೊಡ್ಡ ಕಂಪೆನಿಗಳಿಗೆ ಉಚಿತ ಭೂಮಿ, ನೀರು ಒದಗಿಸಿಕೊಟ್ಟು ಕೆಂಪು ಹಾಸಿನ ಸ್ವಾಗತ ನೀಡುತ್ತಿವೆ. ಅವರು ಈ ದೇಶವನ್ನು ಉದ್ಧಾರ ಮಾಡುತ್ತಾರೆ ಎಂಬ ಭಾವನೆ ಇದಕ್ಕೆ ಕಾರಣ ಎಂದರು. ರಾಜ್ಯದ ಬೇರೆ ತಾಲೂಕುಗಳಿಗೆ ಹೋಲಿಸಿದರೆ, ಉಡುಪಿ ಮತ್ತು ಕುಂದಾಪುರ ತಾಲೂಕಿನಲ್ಲಿ ನಿವೇಶನ ನೀಡುವ ಕೆಲಸ ಪ್ರಗತಿಯಲ್ಲಿದೆ. ನಿವೇಶನ ರಹಿತರ ಪಟ್ಟಿ ತಯಾರಿಸಲಾಗಿದೆ. ಆದರೂ ನಿವೇಶನಾಕಾಂಕ್ಷಿಗಳು ಸ್ ಂ ವ್ ್ಮ ನಿ ರ್ ಕ್ ಊ ಡ್ ದ್ ಂ. ಅಧಿಕಾರಿಗಳ ಮೇಲೆ ಒತ್ತಡ ಹೇರಿ ನಿವೇಶನ ಪಡೆದು ಕೊಳ್ಳಬೇಕು. ಹೋರಾಟ ನಿಲ್ಲಿಸಿದರೆ ಸರ್ಕಾರಕ್ಕೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕೂ ಧರಣಿ ನಿಲ್ಲಿಸಬಾರದು ಎಂದು ಅವರು ಕರೆ ನೀಡಿದರು.

ಧರಣಿ ಮುಷ್ಕರ ಮೂರನೇ ದಿನಕ್ಕೂ ಮುಂದುವರಿದಿದ್ದು, ಉಡುಪಿ ತಾಲೂಕು ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಎಚ್.ವಿಠಲ, ಕಾರ್ಯದರ್ಶಿ ಕೆ.ಲಕ್ಷ್ಮಣ್ ಮತ್ತಿತರರು ಧರಣಿ ಮುಷ್ಕರದ ನೇತೃತ್ವ ವಹಿಸಿದ್ದರು. ಸಿಪಿಐ(ಎಂ) ಪಕ್ಷದ ಉಡುಪಿ ಜಿಲ್ಲಾ ಮುಖಂಡರಾದ ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ ಕೂಡಾ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಕುಂದಾಪುರದಲ್ಲಿ ವಸತಿ ರಹಿತರಿಂದ 2 ದಿನಗಳ ಮುಷ್ಕರ:

ಕುಂದಾಪುರ ಪುರಸಭೆ ಹಾಗೂ ಕುಂದಾಪುರ ತಾಲೂಕಿನ ಗ್ರಾಮ ಪಂಚಾಯತ್‌ಗಳಿಗೆ ವಸತಿ ರಹಿತರಿಗೆ ವಸತಿ ಒದಗಿಸಬೇಕು, ನಿವೇಶನ ರಹಿತರಿಗೆ ನಿವೇಶನ ಕಾದಿರಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ಅಕ್ಟೋಬರ್ 28 ರಿಂದ ಪ್ರಾರಂಭವಾಗಿದ್ದ ಅನಿರ್ದಿಷ್ಟಾವಧಿ ಮುಷ್ಕರ, ತಾಲೂಕಿನ ಅಧಿಕಾರಿಗಳು ಪ್ರತಿಭಟನಾಕಾರ ಸಂಘಟನೆಗಳೊಂದಿಗೆ ನಡೆಸಿದ ಮಾತುಕತೆಯ ಆಧಾರದಲ್ಲಿ ಎರಡನೇ ದಿನಕ್ಕೆ ಕೊನೆಗೊಂಡಿತು.

ವಿವಿಧ ಗ್ರಾಮ ಪಂಚಾಯತ್‌ಗಳಲ್ಲಿ ನೀಡಿರುವ ಅರ್ಜಿಗಳನ್ನು ನವಂಬರ್ 15ರೊಳಗೆ ಪರಿಶೀಲನೆ ಮಾಡಿ ಅಂತಿಮ ಪಟ್ಟಿ ಸಂಘಟನೆಗಳಿಗೆ ಒದಗಿಸಲಾಗುವುದೆಂಬ ಭರವಸೆ ಮೇರೆಗೆ ಅಕ್ಟೋಬರ್ 29 ಕ್ಕೆ ಮುಷ್ಕರವನ್ನು ಕೊನೆಗೊಳಿಸಲಾಯಿತು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದ ಸ್ವಾಮಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಯು. ಬಸವರಾಜು, ದ.ಕ.ಜಿಲ್ಲಾ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಯಾದವ ಶೆಟ್ಟಿ, ಉಡುಪಿ ಜಿಲ್ಲಾ ಪ್ರಾಂತ ಕೃಷಿಕೂಲಿಕಾರರ ಸಂಘದ ಅ ಧ್ಯಕ್ಷ ಯು. ದಾಸ್ ಭಂಡಾರಿ, ತಾಲೂಕು ಸಮಿತಿ ಕಾರ್ಯದರ್ಶಿ ವೆಂಕಟೇಶ್ ಕೋಣಿ, ಅಧ್ಯಕ್ಷ ರಾಜೀವ ಪಡು–ಕೋಣೆ, ಸಿಐಟಿಯು ಜಿಲ್ಲಾ ಮುಖಂಡರುಗಳಾದ ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ, ಮಹಾಬಲ ವಡೇರಹೋಬಳಿ, ಎಚ್.ನರಸಿಂಹ, ಸುರೇಶ್ ಕಲ್ಲಾಗರ, ನಾಗರತ್ನ ಗೌಡ ಮತ್ತಿತರರು ಧರಣಿ ಮುಷ್ಕರದಲ್ಲಿ ಭಾಗವಹಿಸಿದ್ದರು. ಮುಷ್ಕರವು ನಿರ್ದಿಷ್ಟ ಫಲಿತಾಂಶದೊಂದಿಗೆ ಅಂತ್ಯಗೊಂಡಿರುವುದು ವಸತಿ ರಹಿತರಿಗೆ ಸಂತೋಷ ಸಂಭ್ರಮಗಳಿಗೆ ಎಡೆ ಮಾಡಿದೆ.

ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಒತ್ತಾಯಿಸಿ ಡಿವೈಎಫ್ಐ ಕಾಲ್ನಡಿಗೆ ಜಾಥಾ:

ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಹಾಗೂ ಸರ್ಕಾರೀ ಆಸ್ಪತ್ರೆಗಳನ್ನು ಬಲಪಡಿಸಲು ಒತ್ತಾಯಿಸಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕಾರ್ಯಕರ್ತರು ಅಕ್ಟೋಬರ್ 29 ರಂದು ಮಂಗಳೂರಿನಲ್ಲಿ ಕಾಲ್ನಡಿಗೆ ಜಾಥಾ ಮೂಲಕ ಪ್ರತಿಭಟಿಸಿದರು. ಜಾಥಾವು ಪಳ್ನೀರಿನ ಯುನಿಟಿ ಆಸ್ಪತ್ರೆಯಿಂದ ಆರಂಭವಾಗಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವಾಗಿ ರೂಪುಗೊಂಡಿತು. ನೂರಾರು ಯುವಕರು ಭಾಗವಹಿಸಿದ್ದರು.



ಜಾಥಾವನ್ನು ಉದ್ಘಾಟನೆ ಮಾಡಿ ಅಖಿಲ ಭಾರತ ವಿಚಾರವಾದಿ ಸಂಘದ ಅಧ್ಯಕ್ಷರಾದ ಪ್ರೊ.ನರೇಂದ್ರ ನಾಯಕ್ ಮಾತನಾಡಿದರು. ಮಂಗಳೂರಿನಲ್ಲಿ ಪರಿಣಿತ ವೈದ್ಯರು ಸರಕಾರೀ ಆಸ್ಪತ್ರೆಗಳಿಗೆ ಭೇಟಿ ನೀಡಿ ಉಚಿತ ಸೇವೆ ನೀಡುವ ಕಾಲವೊಂದಿತ್ತು. ಇವತ್ತು ಪರಿಸ್ಥಿತಿ ಬದಲಾಗಿದ್ದು, ವೈದ್ಯರು ಜನರನ್ನು ಸರಕಾರಿ ಆಸ್ಪತ್ರೆಯಿಂದ ಹೊರಬರಲು ಬಯಸುತ್ತಿದ್ದು, ಅವರು





ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಪ್ಪುಹಣವನ್ನು ವಾಪಾಸು ತರುವ ಪ್ರಧಾನ ಮಂತ್ರಿಗಳ ಪೊಳ್ಳು ಅಬ್ಬರ



ದೇಶದ ಸರ್ವೋಚ್ಚ ನ್ಯಾಯಾಲಯದಿಂದ ಅಭೂತಪೂರ್ವ ಟಿಪ್ಪಣಿಗಳು ಮೋದಿ ಸರಕಾರ ವಿದೇಶಗಳಲ್ಲಿ ಕಪ್ಪು ಹಣ ಪೇರಿಸಿಟ್ಟವರನ್ನು ರಕ್ಷಿಸಲು ನಾಚಿಕೆಯಿಲ್ಲದೆ ಹೆಣಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ 'ರಕ್ಷಣೆ' ಚುನಾವಣಾ ಪ್ರಚಾರದ ವೇಳೆಯಲ್ಲಿ ಅಮೂಲ್ಯ ಹಣಕಾಸು ಮತ್ತು ಭೌತಿಕ ಬೆಂಬಲ ನೀಡಿದವರಿಗೆ "ಋಣಸಂದಾಯ"ದ ಪ್ಯಾಕೇಜ್'ನ ಭಾಗವಾಗಿರಬಹುದೇನೋ! ಆದರೆ ಇಂತಹ ಟೊಳ್ಳುತನದ ನಡುವೆಯೇ ಅವರ 'ವೋಟ್ ಬ್ಯಾಂಕ್ ರಾಜಕೀಯ'ದ ನಿಜ ಅಜೆಂಡಾ ಸಾಗಿಯೇ ಸಾಗಿದೆ. ಅದು ಯಶಸ್ವಿಯಾಗಲು ಬಿಡಬಾರದು.

ಸೀತಾರಾಮ್ ಯೆಚೂರಿ

ಒಂದಾದ ಮೇಲೊಂದರಂತೆ, ಪ್ರಧಾನ ಮಂತ್ರಿ ಮೋದಿಯವರು ಒಂದು ಕಾರ್ಪೊರೇಟ್ ಜೆಟ್‌ನಲ್ಲಿ ದೇಶಾದ್ಯಂತ ಹಾರಾಡುತ್ತ ಮಾಡಿದ ಸುಂಟರಗಾಳಿಯಂತಹ ಪ್ರಚಾರದಲ್ಲಿ ಕೊಟ್ಟ ಚುನಾವಣಾ ವಚನಗಳೆಲ್ಲ ಸಂಪೂರ್ಣ ಟೊಳ್ಳು, ಬಂಡ್ವಾಳವಿಲ್ಲದ ಬಡಾಯಿ ಎಂದು ಸಾಬೀತಾಗುತ್ತಿದೆ. ಈ ಹಿಂದೆ ನಾವು 'ಆರ್ಥಿಕ ಪವಾಡ'ಗಳು, 'ಅಚ್ಛೇ ದಿನ್ ಆನೇವಾಲೇ ಹೈಂ' ಇತ್ಯಾದಿಗಳ ಸ್ವರೂಪಗಳನ್ನು ಬಯಲು ಮಾಡಿದ್ದೆವು. ಈಗ, 'ವಿದೇಶಿ ಬ್ಯಾಂಕುಗಳಲ್ಲಿ, ಹಣಕಾಸು ಆಶ್ರಯಧಾಮಗಳಲ್ಲಿ ಪೇರಿಸಿಟ್ಟಿರುವ ಕಾನೂನುಬಾಹಿರ ಕಪ್ಪು ಹಣವನ್ನು ತನ್ನ ಸರಕಾರ ದೇಶಕ್ಕೆ ವಾಪಾಸು ತಂದು ಜನಗಳ ಬದುಕನ್ನು ಉತ್ತಮಪಡಿಸಲು ಬಳಸುತ್ತದೆ ಎಂಬ ಪ್ರಧಾನ ಮಂತ್ರಿಗಳ ಬಡಾಯಿಯ ಸರದಿ.

ಸುಪ್ರಿಂ ಕೋರ್ಟ್, ತಾನು ಕಳೆದ ಐದು ವರ್ಷಗಳಿಂದ ವಿಚಾರಣೆ ಮಾಡುತ್ತಿದ್ದ ಕಪ್ಪು ಹಣ ಕುರಿತಾದ ಕೇಸಿನಲ್ಲಿ ಕೇಳಿದ ಮಾಹಿತಿಗೆ ಪ್ರತಿಯಾಗಿ ಮೂರು ಹೆಸರುಗಳನ್ನು ಮುಂದಿಟ್ಟಾಗ ಮೋದಿ ಸರಕಾರಕ್ಕೆ ಛೀಮಾರಿ ಹಾಕಿತು. ಇವು ಹಿಂದೆ ಯುಪಿಎ–2 ಸರಕಾರ ಬಹಿರಂಗ ಪಡಿಸಿದ ಹೆಸರುಗಳೇ. ಅಕ್ಟೋಬರ್ 28ರಂದು ಸರ್ವೋಚ್ಚ ನ್ಯಾಯಾಲಯ ಅಕ್ಟೋಬರ್ 29ರೊಳಗೆ ವಿದೇಶಗಳಲ್ಲಿ ಪೇರಿಸಿಡಲಾಗಿದೆ ಎಂಬ ಆಪಾದನೆಯ ಮೇಲೆ ತನಿಖೆ ಮಾಡುತ್ತಿರುವ ಎಲ್ಲ ಹೆಸರುಗಳನ್ನು ತಿಳಿಸಬೇಕು ಎಂದು ಕೇಂದ್ರ ಸರಕಾರಕ್ಕೆ 'ಆದೇಶ' ನೀಡಿತು, ಮತ್ತು ಸರಕಾರ 'ಈ ಮಂದಿಗೆ ರಕ್ಷಣಾ ಛತ್ರ'ವನ್ನು ಹಿಡಿದಿದೆ' ಏಕೆ ಎಂದು ಪ್ರಶ್ನಿಸಿತು.

ಆಶ್ಚರ್ಯ ತಂದ ಆದೇಶ

ಕಳೆದ ಐದು ವರ್ಷಗಳಿಂದ ವಿಚಾರಣೆ ನಡೆಸುತ್ತಿರುವ ಕೇಸಿನಲ್ಲಿ ನಡುವೆ ಪ್ರವೇಶಿಸಿದ ಭಾರತದ ಮುಖ್ಯ ನ್ಯಾಯಾಧೀಶರಾದ ಹೆ.ಎಲ್. ದತ್ತು ಒಂದು ಮೊಹರಾದ ಲಕೋಟೆಯಲ್ಲಿ ವಿದೇಶಿ ಸರಕಾರಗಳಿಂದ ಪಡೆದ ಎಲ್ಲ ಹೆಸರುಗಳ ಪಟ್ಟಿಯನ್ನು, ಆದೇಶಗಳೊಂದಿಗೆ ಇರುವ ಸಂಧಿಗಳು ಯಾವ ಸ್ವರೂಪದಲ್ಲೆ ಇದ್ದರೂ, ಅಕ್ಟೋಬರ್ 29ರೊಳಗೆ ಹಸ್ತಾಂತರಿಸಬೇಕು ಎಂದು ಸರಕಾರ–ಕ್ಕೆ ನಿರ್ದೇಶಿಸಿದರು. ನ್ಯಾಯಾಲಯದ ಆದೇಶ ಒಂದು ಆಶ್ಚರ್ಯವನ್ನೇ ತಂದಿತು, ಏಕೆಂದರೆ ಅದು ಹೆಸರುಗಳನ್ನು ಪ್ರಕಟಪಡಿಸುವುದನ್ನು ಸೀಮಿತಗೊಳಿಸಬೇಕೆಂಬ ಸರಕಾರದ ಒಂದು ಹೊಸ ಅರ್ಜಿಯ ವಿಚಾರಣೆಯನ್ನು ನಡೆಸುತ್ತಿತ್ತು.

"ನಮಗೆ ಎರಡು ಅಥವ ಮೂರು ಹೆಸರುಗಳನ್ನು ಕೊಡಬೇಡಿ, ಬದಲಿಗೆ ಎಲ್ಲ ಹೆಸರುಗಳನ್ನು ಕೊಡಿ. "ಸಮಸ್ತ ಪಟ್ಟಿಯನ್ನು....ನೀವು ಜರ್ಮನಿ, ಫ್ರಾನ್ಸ್, ಸ್ವಿಝರ್ಲೆಂಡ್ ಮತ್ತಿತರ ದೇಶಗಳಿಂದ ಏನೆಲ್ಲ ಪಡೆದಿರುವಿರೋ ಅವೆಲ್ಲವುಗಳ ಪಟ್ಟಿಯನ್ನು ಕೊಡಿ. ನೀವು ಪ್ರಕಟಪಡಿಸಿದ್ದು ನೀರೊಳಗೆ ಅಡಗಿರುವ ಹಿಮಗಡ್ಡೆಯ ಒಂದು ಮೇಲ್ತುದಿ ಮಾತ್ರವಿರಬಹುದು. ಇದೀಗ ಮೊದಲ ಹೆಜ್ಜೆಯಾಗುತ್ತದೆ– ಪ್ರತಿಯೊಂದನ್ನೂ ಪ್ರಕಟಗೊಳಿಸಿ. ನಾವು ಈ ಪ್ರಶ್ನೆಯನ್ನು ಸಂಪೂರ್ಣವಾಗಿ ನಿಮ್ಮ(ಸರಕಾರದ) ಕೈಗಳಿಗೆ ಬಿಡುವುದು ಸಾಧ್ಯವಿಲ್ಲ" ಎಂದು ನ್ಯಾಯಪೀಠ ಹೇಳಿತ್ತು. ಈ ಪೀಠದಲ್ಲಿ ಮುಖ್ಯ ನ್ಯಾಯಾಧೀಶರಲ್ಲದೆ ನ್ಯಾಯಮೂರ್ತಿಗಳಾದ ರಂಜನಾ ಪಿ ದೇಸಾಯಿ ಮತ್ತು ಮದನ್ ಬಿ ಲೋಕುರ್ ಇದ್ದರು.

ಹೀಗೆ ಒತ್ತಾಯಕ್ಕೆ ಒಳಗಾದ ಮೋದಿ ಸರಕಾರ ಜಿನೇವಾದ ಹೆಚ್‌ಎಸ್‌ಬಿಸಿ ಬ್ಯಾಂಕಿನ 627 ಭಾರತೀಯ ಖಾತೇದಾರರ ಹೆಸರುಗಳ ಒಂದು ಪಟ್ಟಿಯನ್ನು ಸಲ್ಲಿಸಿತು. ಬೇರೆ ದೇಶಗಳೊಂದಿಗೆ 'ದುಪ್ಪಟ್ಟು ತೆರಿಗೆ ತಪ್ಪಿಸುವ ಸಂಧಿ' (ಡಿಟಿಎಟಿ) ಗಳಿಂದಾಗಿ ಭಾರತ ತೆರಿಗೆದಾರರ ಮಾಹಿತಿಗಳನ್ನು ಸಂಬಂಧಪಟ್ಟ ತೆರಿಗೆ ಅಧಿಕಾರಿಗಳನ್ನು ಬಿಟ್ಟು ಬೇರೆ ಯಾರೊಂದಿಗೂ ಅಥವ ನ್ಯಾಯಾಲಯಗಳೊಂದಿಗೂ ಹಂಚಿಕೊಳ್ಳುವಂತಿಲ್ಲ, ಭಾರತ ತಾನು ಮಾಹಿತಿ ಪಡೆದವರ ಹೆಸರುಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವಂತಿಲ್ಲ, ಮತ್ತು ಯಾರ ವಿರುದ್ಧ ವಿಚಾರಣೆ ನಡೆಸಬಹುದಾದ ಮಾಹಿತಿ ದೊರಕಿಲ್ಲವೋ ಅಂತವರ ಹೆಸರುಗಳನ್ನು ತಿಳಿಸುವಂತಿಲ್ಲ ಎಂಬ ನೆಪವನ್ನು ನೀಡಲು ಯತ್ನಿಸಿದಾಗಲೂ ಸರ್ವೋಚ್ಚ ನ್ಯಾಯಾಲಯ ಸರಕಾರಕ್ಕೆ ಛೀಮಾರಿ ಹಾಕಿತು.

ಈ ಯಾವ ಶರತ್ತುಗಳೂ ಸರಕಾರ ಈ ಮಾಹಿತಿಯನ್ನು ಮೊಹರಾದ ಲಕೋಟೆಯಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ರಚಿಸಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ)ಕ್ಕೆ ನೀಡುವುದನ್ನು ನಿಷೇಧಿಸುವುದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯ ಪಟ್ಟಿತು. ಇದರಿಂದಾಗಿ ಸರಕಾರ ಸಲ್ಲಿಸಲೇ ಬೇಕಾಗಿ ಬಂದ 627 ಹೆಸರುಗಳಿರುವ ಮೊಹರಾದ ಲಕೋಟೆಯನ್ನು ಮುಖ್ಯ ನ್ಯಾಯಾಧೀಶರ ನೇತೃತ್ವದ ಪೀಠ ತೆರೆಯಲಿಲ್ಲ. ಅದನ್ನು ಎಸ್‌ಐಟಿಯ ಅಧ್ಯಕ್ಷರಿಗೆ(ಇವರೂ ಒಬ್ಬ ಸುಪ್ರಿಂ ಕೋರ್ಟ್ ನ್ಯಾಯಾಧೀಶರಾಗಿದ್ದವರು) ರವಾನಿಸಲಾಯಿತು.

"ಏಕೆ ಈ ರಕ್ಷಣಾ ಛತ್ರ?"

ತನಿಖೆಯ ವಿಧಾನವನ್ನು ಮತ್ತು ಹೆಸರುಗಳನ್ನು ಪ್ರಕಟಿಸುವುದನ್ನು ಸರ್ವೋಚ್ಚ ನ್ಯಾಯಾಲಯ ನಿರ್ಧರಿಸುತ್ತದೆ ಎಂದು ನಿಸ್ಸಂಧಿಗ್ಧವಾಗಿ ಹೇಳುತ್ತ, ಅದು, ತನಿಖೆಯ ರೀತಿ ಮತ್ತು ವಿಧಾನವನ್ನು ಸರಕಾರ ಆಯ್ಕೆ ಮಾಡಬೇಕಾಗಿಲ್ಲ, ಅದು ಮಾಡಬೇಕಾದ್ದು ಎಲ್ಲವನ್ನೂ ನ್ಯಾಯಾಲಯದ ಮುಂದೆ ಇಡುವುದಷ್ಟೇ, ನ್ಯಾಯಾಲಯ ತನಿಖೆ ನಡೆಸಲು ಸಿಬಿಐ ಯನ್ನೂ ತರಬಹುದು ಎಂದು ಹೇಳಿತು. ಈ ಪೀಠ 2011ರಲ್ಲಿ ವಿದೇಶಿ ಸರಕಾರಗಳಿಂದ ಬಂದಿರುವ ಮಾಹಿತಿಗಳನ್ನು ಸಂಪೂರ್ಣವಾಗಿ ತಿಳಿಸಬೇಕೆಂದು ಆದೇಶ ನೀಡಿತ್ತು, ಮತ್ತು ಅದರಿಂದಾಗಿ ಈ ಕೇಸು ಅದರ ತಾರ್ಕಿಕ ಅಂತ್ಯ ತಲುಪುವಂತೆ ಮಾಡುವ ಹೊಣೆಯನ್ನು ಅದು ತೆಗೆದು ಕೊಳ್ಳುತ್ತದೆ ಎಂದು ನ್ಯಾಯಪೀಠ ಹೇಳಿತು.

"ನೀವು (ಸರಕಾರ) ಏಕೆ ತನಿಖೆ ಮಾಡಬೇಕು? ತನಿಖೆ ಮಾಡುವ ಕಷ್ಟವನ್ನು ನೀವು ತಗೊಳ್ಳಬೇಕಾಗಿಲ್ಲ. ಈ ಜನಗಳಿಗೆ ನೀವೇಕೆ ಒಂದು ರಕ್ಷಣಾ ಛತ್ರವನ್ನು ಹಿಡಿಯಬೇಕು? ನೀವು ಎಲ್ಲ ಮಾಹಿತಿಗಳನ್ನು ನಮಗೆ ರವಾನಿಸಿದರಷ್ಟೇ ಸಾಕು, ನಾವು ನಿರ್ಧರಿಸುತ್ತೇವೆ. ನಾವು ಸಿಬಿಐನ್ನು ಕೂಡ ತನಿಖೆ ಮಾಡಲು ಕೇಳಬಹುದು. ನಾವೇನು ಅಸಹಾಯಕರಲ್ಲ. ನಾವು 2011ರಲ್ಲಿ ಮೂಲ ಆದೇಶವನ್ನು ನೀಡಿದ್ದೇವೆ ಮತ್ತು ಈಗಲೂ ಹೊಣೆಯನ್ನು ವಹಿಸುತ್ತೇವೆ" ಎಂದು ನ್ಯಾಯಾಲಯ ಹೇಳಿತು.

ಅಟಾರ್ನಿ ಜನರಲ್, ಡಿಟಿಎಟಿಯ ಶರತ್ತುಗಳಿಂದಾಗಿ ಇಂತಹ ಮಾಹಿತಿಯನ್ನು ಸಾರ್ವಜನಿಕಗೊಳಿಸಲು ಸಾಧ್ಯವಿಲ್ಲವಾದ್ದರಿಂದ ನ್ಯಾಯಾಲಯದ ಆದೇಶವನ್ನು ಮಾರ್ಪಡಿಸಬೇಕು ಎಂದು ವಾದಿಸಿದಾಗ ನ್ಯಾಯಾಲಯ ತನ್ನ ಆದೇಶವನ್ನು ಮಾರ್ಪಡಿಸಿಕೊಳ್ಳುವ ಮೋದಿ ಸರಕಾರದ ಪ್ರಯತ್ನದ ಬಗ್ಗೆ ಬಲವಾದ ಅಸಂತೋಷವನ್ನು ವ್ಯಕ್ತಪಡಿಸಿತು. "ನೀವು ಈ ವಿಷಯದ ಮೇಲೆ ಮತ್ತೆ ವಾದ ಮಾಡಲು ಯತ್ನಿಸುತ್ತಿದ್ದೀರಿ, ಇದಕ್ಕೆ ಅವಕಾಶವಿಲ್ಲ. ನಾವು ನಮ್ಮ ಆದೇಶದಲ್ಲಿ ಒಂದೇ ಒಂದು ಪದವನ್ನೂ ಬದಲಿಸುವುದಿಲ್ಲ. ಆದೇಶವನ್ನು ಒಂದು ಬಹಿರಂಗ ನ್ಯಾಯಾಲಯದಲ್ಲಿ ನೀಡಿರುವಾಗ ಮತ್ತು (ಆಗಿನ) ಸರಕಾರ ಅದನ್ನು ಸ್ವೀಕರಿಸಿರುವಾಗ, ತಿಂಗಳುಗಳ ನಂತರ, ಕೇಂದ್ರದ ಹೊಸ ಆಡಳಿತ ಅದನ್ನು ಮಾರ್ಪಡಿಸಲು ಕೇಳುವಂತಿಲ್ಲ" ಎಂದು ಅದು ಹೇಳಿತು.

ಮೋದಿ ಸರಕಾರ ಯಾರನ್ನೋ, ಅಥವ ಯಾವದೋ ಹಿತಾಸಕ್ತಿಯನ್ನು ಕಾಪಾಡಲು ಪ್ರಯತ್ನಿಸುತ್ತಿದೆ ಎಂದು ಸ್ಪಷ್ಟ ಸಂಕೇತ ನೀಡಿದ ಸರ್ವೋಚ್ಚ ನ್ಯಾಯಾಲಯ " ನೀವು ಈ ಜನಗಳ ಬಗ್ಗೆ ಇಷ್ಟೊಂದು ಆಸಕ್ತಿ, ಜಾಗರೂಕತೆ ವಹಿಸಬೇಕಾಗಿಲ್ಲ. ಏನು ಮಾಡಬೇಕೆಂದು ನಮಗೆ ತಿಳಿದಿದೆ" ಎಂದಿತು. "ಈ ದೇಶದ ಹಣ ಬೇರೆ ದೇಶಗಳಿಗೆ ಹೋಗುವುದು ನಮಗೆ ಇಷ್ಟವಿಲ್ಲ. ಇದನ್ನೆಲ್ಲ ನೀವು ಈಗಾಗಲೇ ವಾದಿಸಿದ್ದೀರಿ, ಮತ್ತು ನ್ಯಾಯಾಲಯ ಎಲ್ಲವನ್ನೂ ತಿಳಿಸಬೇಕು ಎಂದು ಹೇಳಿಯಾಗಿದೆ. ಗೋಪನೀಯತೆ ಮುರಿದರೂ ಎಲ್ಲ ಮಾಹಿತಿಯನ್ನು ಕೊಡಿ ಎಂದು ನ್ಯಾಯಾಲಯ ಕೇಳಬಹುದು" ಎಂದ ನ್ಯಾಯಾಲಯ ಮುಂದುವರೆದು " ನಮಗೆ ಎಲ್ಲ ಹೆಸರುಗಳು ಬೇಕು, ಒಂದು ಅಥವ ಎರಡು ಅಥವ ಮೂರು ಅಲ್ಲ. ನಮಗೆ ಸಮಸ್ತ ಮಾಹಿತಿ ಕೊಡಿ" ಎಂದು ಆದೇಶಿಸಿತು.

"ಋಣಸಂದಾಯ"ದ ಭಾಗ?

ದೇಶದ ಸರ್ವೋಚ್ಚ ನ್ಯಾಯಾಲಯದಿಂದ ಈ ಎಲ್ಲ ಅಭೂತಪೂರ್ವಟಿಪ್ಪಣಿಗಳು ಮೋದಿ ಸರಕಾರ ವಿದೇಶಗಳಲ್ಲಿ ಕಪ್ಪು ಹಣ ಪೇರಿಸಿಟ್ಟವರನ್ನು ರಕ್ಷಿಸಲು ನಾಚಿಕೆಯಿಲ್ಲದೆ ಹೆಣಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಭಾರತದ ಕಾರ್ಪೊರೇಟ್ ಕುಳಗಳು ಚುನಾವಣಾ ಪ್ರಚಾರದ ವೇಳೆಯಲ್ಲೂ, ಆನಂತರವೂ ಮೋದಿಯವರನ್ನು ಎತ್ತಿ ಹಿಡಿಯಲು, ಅವರ ಭಟ್ಟಂಗಿಗಳಾಗಲು ಎಂತಹ ಕಾತುರವನ್ನು, ಹುಮ್ಮಸ್ಸನ್ನು ಪ್ರದರ್ಶಿಸಿದರು ಎಂಬುದನ್ನು ಇಡೀ ದೇಶ ಕಂಡಿದೆ. ಅವರು ಹಿಂದೆಂದೂ ಕಾಣದ ರೀತಿಯಲ್ಲಿ ಚುನಾವಣಾ ಪ್ರಚಾರಕ್ಕೆ ಉದಾರವಾಗಿ ಹಣಕಾಸು ಒದಗಿಸಿದರು. ಬಹುಶಃ ವಿದೇಶಗಳಲ್ಲಿ ಕಪ್ಪುಹಣವನ್ನು ಬಚ್ಚಿಟ್ಟವರಿಗೆ ಇಂತಹ 'ರಕ್ಷಣೆ' ಚುನಾವಣಾ ಪ್ರಚಾರದ ವೇಳೆಯಲ್ಲಿ ಅಮೂಲ್ಯ ಹಣಕಾಸು ಮತ್ತು ಭೌತಿಕ ಬೆಂಬಲ ನೀಡಿದವರಿಗೆ "ಋಣಸಂದಾಯ ಮಾಡುವ ಸಮಯದ ಪ್ಯಾಕೇಜ್'ನ ಭಾಗವಾಗಿರಬಹುದೇನೋ!

ಇದೆಲ್ಲ ಮೋದಿ ಮತ್ತು ಬಿಜೆಪಿ ಚುನಾವಣಾ ಪ್ರಚಾರದಲ್ಲಿ ನೀಡಿದ ದೊಡ್ಡ–ದೊಡ್ಡ ಭರವಸೆಗಳಿಗೆ ತದ್ವಿರುದ್ಧವಾದದ್ದು. ವಿದೇಶಿ ಬ್ಯಾಂಕುಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ಹಿಂದಕ್ಕೆ ತರುವುದು ಅವರ ಅತಿ ದೊಡ್ಡ ಚುನಾವಣಾ ಭರವಸೆಗಳಲ್ಲಿ ಒಂದಾಗಿತ್ತು. ಮಾಧ್ಯಮ ವರದಿಗಳಿಂದ ನೆನಪಿಸಿಕೊಳ್ಳಬಹುದಾದ ಪ್ರಧಾನ ಮಂತ್ರಿಗಳ ಭರವಸೆಗಳ ಒಂದು ಪಟ್ಟಿಯನ್ನು ನೋಡಿ:


◇ "ವಿದೇಶಿ ಬ್ಯಾಂಕ್ ಖಾತೆಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ಹಿಂದಕ್ಕೆ ತಂದರೆ ಭಾರತದ ಬಡವರಿಗೆ ಹಂಚಿದರೆ ಪ್ರತಿಯೊಬ್ಬ ಬಡವನ ಜೇಬಿಗೆ 3ಲಕ್ಷ ರೂ.ಗಳು ಸೇರುತ್ತವೆ ಎಂದು ಜನ ಹೇಳುತ್ತಾರೆ."

"ನೀವು ಆಶೀರ್ವದಿಸಿದರೆ, ನನಗೆ ಅವಕಾಶ ನೀಡಿದರೆ ನಾನು ಎಲ್ಲ ಕಪ್ಪುಹಣವನ್ನು ವಾಪಾಸು ತರಲು ನಿರ್ಧರಿಸಿದ್ದೇನೆ".

◇ "ನಾವು ಕಪ್ಪು ಹಣವನ್ನು ವಾಪಾಸು ತಂದಾಗ ಅದನ್ನು ನಿಯಮಿತ ಸಂಬಳದಾರರಿಗೆ ಕೊಡುತ್ತೇವೆ. ನಾವು ಅವರ ದೇಶಪ್ರೇಮವನ್ನು ಗೌರವಿಸಬೇಕು. ಕಪ್ಪು ಹಣವನ್ನು ತರುವ ವರೆಗೆ ಇಂತಹ ಕಳ್ಳತನ ಮುಂದುವರೆಯುತ್ತಲೇ ಇರುತ್ತದೆ. ಆದ್ದರಿಂದ ಹೊಸ ಕಳ್ಳತನಗಳನ್ನು, ಮತ್ತು ಇಂತಹವುಗಳನ್ನು ನಿಲ್ಲಿಸಲು, ಎಲ್ಲರಿಗೂ ಒಂದು ಪಾಟ ಕಲಿಸಲು ಎಲ್ಲ ಕಪ್ಪುಹಣವನ್ನು ಹಿಂದಕ್ಕೆ ತರಲೇಬೇಕು."

◇ "ನಾನು ವಿದೇಶಿ ಬ್ಯಾಂಕುಗಳಲ್ಲಿ ತುಂಬಿಸಿಟ್ಟ ಪ್ರತಿಯೊಂದು ರೂಪಾಯಿಯನ್ನು, ಯಾವುದೇ ರೀತಿಯಲ್ಲಿ ಹಿಂದಕ್ಕೆ ತರುತ್ತೇನೆ. ಮತ್ತು ಅದು

ಪುಟ 15 ಕ್ಕೆ



ಸಿಪಿಐ(ಎಂ)ನ ೫೦ನೇ ವರ್ಷಾಚರಣೆ





ರಾಷ್ಟ್ರ ರಾಜಕಾರಣದಲ್ಲಿ ಶೋಷಿತ ಜನವಿಭಾಗಗಳ ದನಿಯಾಗಿ ಹಾಗೂ ದುಡಿಯುವ ವರ್ಗದ ಪಕ್ಷವಾಗಿ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿರುವ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ವು ಸ್ಥಾಪನೆಗೊಂಡು 50 ವರುಷಗಳಾಗುತ್ತಿವೆ. ಈ ಮಹತ್ವದ ಸಂದರ್ಭದಲ್ಲಿ ಸಿಪಿಐ(ಎಂ) ಸ್ಥಾಪನೆಗೊಂಡ ಚಾರಿತ್ರಿಕ ಸನ್ನಿವೇಶ ಮತ್ತು ಬೆಳೆದು ಬಂದ ಚಾರಿತ್ರಿಕ ಪ್ರಕ್ರಿಯೆಗಳ ಕುರಿತು ಒಂದು ಚಿತ್ರಣ ನೀಡುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳ ಲೇಖನ.

– ಪ್ರಕಾಶ್ ಕಾರಟ್ –
ಕನ್ನಡಕ್ಕೆ : ಕೆ.ಎಂ. ನಾಗರಾಜ್

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಉದಯವಾಗಿ 50 ವರ್ಷಗಳು ಸಂದಿವೆ. ಈಗ 50ನೇ ವರ್ಷಾಚರಣೆ ನಡೆಯುತ್ತಿದೆ. 1964ರ ಅಕ್ಟೋಬರ್ 31ರಿಂದ ನವೆಂಬರ್ 7 ರವರೆಗೆ ಕೊಲ್ಕತಾದಲ್ಲಿ ನಡೆದ ಪಕ್ಷದ ಏಳನೇ ಮಹಾಧಿವೇಶನದಲ್ಲಿ ರಚನೆಯಾದ ಪಕ್ಷವು ಈ ಅವಧಿಯಲ್ಲಿ ಅನೇಕ ವಿಷಮ ಪರಿಸ್ಥಿತಿಗಳನ್ನು ಎದುರಿಸಿಯೂ ಗಣನೀಯವಾದ ಮುನ್ನಡೆ ಸಾಧಿಸಿದೆ. ಈ ಸಂದರ್ಭದಲ್ಲಿ, ಪಕ್ಷ ಮತ್ತು ಕಮ್ಯೂನಿಸ್ಟ್ ಚಳುವಳಿಗೆ ದುಡಿದು ಹುತಾತ್ಮರಾದ ಸಾವಿರಾರು ಸಂಗಾತಿಗಳಿಗೆ ನಮ್ಮ ಗೌರವ ಸಲ್ಲುತ್ತದೆ.

ರಾಜಕೀಯ ಕಾರಣಗಳ ಮೇಲೆ ದೇಶದಿಂದ ಹೊರ ಹೋದ ಒಂದು ಕಮ್ಯೂನಿಸ್ಟ್ ಗುಂಪು ರಶ್ಯಾದ ತಾಷ್ಕೆಂಟ್‌ನಲ್ಲಿ 1920ರಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಹುಟ್ಟು ಹಾಕಿತು. ಪಕ್ಷವನ್ನು ಕಮ್ಯೂನಿಸ್ಟ್ ಅಂತರರಾಷ್ಟ್ರೀಯ (ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್) ಮಾನ್ಯ ಮಾಡಿತ್ತು. ತದನಂತರ, ದೇಶದ ಬೇರೆ ಬೇರೆ ಭಾಗಗಳಲ್ಲಿ ಸಣ್ಣ ಸಣ್ಣ ಕಮ್ಯೂನಿಸ್ಟ್ ಗುಂಪುಗಳು ಹುಟ್ಟಿಕೊಂಡವು. ಮೀರತ್ ಪಿತೂರಿ ಮೊಕದ್ದಮೆ ಆಪಾದಿತರ ಬಿಡುಗಡೆಯ ನಂತರ 1934 ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ಒಂದು ಸಂಘಟಿತ ಪಕ್ಷವಾಗಿ ಭಾರತ ಕಮ್ಯೂನಿಸ್ಟ್ ಪಕ್ಷ ಕೆಲಸ ಮಾಡಲಾರಂಭಿಸಿತು.

ಸಿಪಿಐ(ಎಂ)ನ ರಚನೆಯು ಸ್ವಾತಂತ್ರ್ಯಾನಂತರ ದೇಶದಲ್ಲಿ ಕ್ರಾಂತಿ ಮಾಡಲು ಅಗತ್ಯವಾದ ಒಂದು ಕಾರ್ಯವ್ಯೂಹ ಅಂಗೀಕರಿಸುವ ಬಗ್ಗೆ ಭಾರತ ಕಮ್ಯೂನಿಸ್ಟ್ ಪಕ್ಷದೊಳಗೆ ನಡೆದ ಸುದೀರ್ಘವಾದ ಹೋರಾಟದ ಫಲ. ಒಂದು ದಶಕದಷ್ಟು ಕಾಲ ನಡೆದ ಈ ಹೋರಾಟದ ಕಾರಣದಿಂದಾಗಿಯೇ ಅವಿಭಜಿತ ಪಕ್ಷಕ್ಕೆ ಸರಿಯಾದ ಒಂದು ಕಾರ್ಯಕ್ರಮ ಅಂಗೀಕರಿಸಲು ಸಾಧ್ಯವಾಗಿರಲಿಲ್ಲ.

ಪಕ್ಷದ ರಾಷ್ಟ್ರೀಯ ಮಂಡಳಿಯ 32 ಜನ ಸದಸ್ಯರು ಹೊರನಡೆದು 1964ರ ಎಪ್ರಿಲ್‌ನಲ್ಲಿ ಪಕ್ಷವು ಇಭ್ಭಾಗವಾದಾಗ ಅದನ್ನು ರಶ್ಯಾ-ಚೈನಾಗಳ ನಡುವೆ ಇದ್ದ ಭಿನ್ನಾಭಿಪ್ರಾಯಗಳ ಆಧಾರದ ಮೇಲೆ ಉಂಟಾದ ಒಡಕು ಎಂದು ವ್ಯಾಪಕವಾಗಿ ತಿಳಿಯಲಾಗಿತ್ತು. ಆಗಿನ ಕಾಂಗ್ರೆಸ್ ಸರ್ಕಾರವು, ಸಿಪಿಐ(ಎಂ) ಒಂದು 'ಬೀಜಿಂಗ್-ಪರ'ವಾದ ಬಂಡಾಯಗಾರರ ಗುಂಪೆಂದು ಪಕ್ಷಕ್ಕೆ ಹಣೆಪಟ್ಟಿ ಹಚ್ಚಿತ್ತು. ಇಂತಹ ಗೊಂದಲಗಳಿಗೆ ಅಲ್ಪ ಸ್ವಲ್ಪ ಕಾರಣವೂ ಇತ್ತು. 1960ರ ದಶಕದ ಮಧ್ಯ ಭಾಗದ ನಂತರ ಚೈನಾದ ಕಮ್ಯೂನಿಸ್ಟ್ ಪಕ್ಷದ ಕರೆಯ ಮೇರೆಗೆ, ಅನೇಕ ದೇಶಗಳಲ್ಲಿ, ಕೆಲವು ಗುಂಪುಗಳು ಆಯಾ ದೇಶಗಳಲ್ಲಿನ ಕಮ್ಯೂನಿಸ್ಟ್ ಪಕ್ಷಗಳಿಂದ ಹೊರ ಬಂದು ತಮ್ಮದೇ ಪಕ್ಷ ರಚಿಸಿಕೊಂಡವು. ಇಂತಹ ಪಕ್ಷಗಳ ಪೈಕಿ ಗಣನೀಯ ರಾಜಕೀಯ ಪ್ರಭಾವ ಅಥವಾ ಜನ ಬೆಂಬಲ ಪಡೆದ ಪಕ್ಷಗಳ ಸಂಖ್ಯೆ ಬಹಳ ಕಡಿಮೆ.

ಸಿಪಿಐ(ಎಂ) ನ ನವರತ್ನಗಳು – ಪ್ರಪ್ರಥಮ ಪಾಲಿಟ್‌ಬ್ಯೂರೋದ 9 ಜನ ಸದಸ್ಯರು



ಆದರೆ, ಭಾರತದಲ್ಲಿ ಪರಿಸ್ಥಿತಿ ಬೇರೆಯೇ ಇತ್ತು. ಭಾರತ ಕಮ್ಯೂನಿಸ್ಟ್ ಪಕ್ಷ ವಿಭಜನೆಯಾಗುತ್ತಿದ್ದ ಸಮಯಕ್ಕೆ ರಶ್ಯಾದ ಕಮ್ಯೂನಿಸ್ಟ್ ಪಕ್ಷ ಮತ್ತು ಚೈನಾದ ಕಮ್ಯೂನಿಸ್ಟ್ ಪಕ್ಷಗಳ ನಡುವಿನ ಬಿರುಕೂ ಸಹ ಹೆಚ್ಚಾಗತೊಡಗಿತು. ಆದ-ರೆ ಭಾರತದಲ್ಲಿ ಪಕ್ಷ ವಿಭಜನೆಯಾದದ್ದು ಈ ಕಾರಣದಿಂದಲ್ಲ. ಭಾರತದ ಪ್ರಭುತ್ವದ ಸ್ವರೂಪ, ಆಳುವ ವರ್ಗಗಳ ಗುಣಲಕ್ಷಣಗಳು ಮತ್ತು ಪಕ್ಷವು ಅನುಸರಿಬೇಕಾದ ಕಾರ್ಯವ್ಯೂಹದಂತಹ ಕೆಲವು ಮೂಲಭೂತ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಡೆದ ಸುದೀರ್ಘವಾದ ಆಂತರಿಕ ಹೋರಾಟಗಳು ಸಿಪಿಐ(ಎಂ)ನ ರಚನೆಯಾಗುವಲ್ಲಿ ಪರ್ಯವಸಾನಗೊಂಡವು. ಹಾಗಾಗಿ, ಪಕ್ಷವು 1964 ರ ಅಕ್ಟೋಬರ್-ನವೆಂಬರ್‌ನಲ್ಲಿ ನಡೆದ ಏಳನೇ ಮಹಾಧಿವೇಶನದಲ್ಲಿ ತನ್ನ ಕಾರ್ಯಕ್ರಮವನ್ನು ಅಂಗೀಕರಿಸಿತು.

★★★★

ಪಕ್ಷದ ಏಳನೇ ಮಹಾಧಿವೇಶನವು ಅಂಗೀಕರಿಸಿದ ಕಾರ್ಯಕ್ರಮವು ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದ ಮೇಲೆ ಭಾರತೀಯ ಸಮಾಜವನ್ನು ಮತ್ತು ಅದರ ವರ್ಗ ಸಂರಚನೆಯನ್ನು ವಿಶ್ಲೇಷಣೆಗೊಳಪಡಿಸಿ, ಪ್ರಪ್ರಥಮ ಬಾರಿಗೆ ಭಾರತದ ಕ್ರಾಂತಿಗೆ ಕಾರ್ಯವ್ಯೂಹಾತ್ಮಕ ಗುರಿಯನ್ನು ನಿಗದಿಗೊಳಿಸಿತು. ಭಾರತದ ಪ್ರಭುತ್ವದ ಗುಣಸ್ವರೂಪದ ಕುರಿತು ಅದು 'ಹಿರೆ ಬಂಡವಾಳಶಾಹಿಗಳ ನೇತೃತ್ವದ ಬಂಡವಾಳಶಾಹಿ-ಭೂ ಮಾಲಕರ ಸಖ್ಯತೆಯ ಹಿಡಿತದಲ್ಲಿರುವ ಪ್ರಭುತ್ವ' ಎಂದು ಸ್ಪಷ್ಟ ರೀತಿಯಲ್ಲಿ ಸಾರಿತು. ಆ ಮೂಲಕ ಕಾರ್ಯತಂತ್ರವನ್ನು ರೂಪಿಸುವ ನಿಟ್ಟಿನಲ್ಲಿ ಅತ್ಯಂತ ಪ್ರಮುಖವಾದ ವಿಷಯವೊಂದರ ಮೇಲೆ ಉಳಿದಿದ್ದ ಗೊಂದಲಗಳ ಮಂಜನ್ನು ದೂರ ಸರಿಸಿತು.

ಭಾರತದ ಕ್ರಾಂತಿಯ ಹಂತ, ಪ್ರಭುತ್ವದ ಗುಣಸ್ವರೂಪ ಮತ್ತು ಜನತಾ ಪ್ರಜಾಪ್ರಭುತ್ವ ಕ್ರಾಂತಿಗೆ ಅಗತ್ಯವಾದ ವರ್ಗ ಮೈತ್ರಿ ಈ ಕುರಿತು ಕಾರ್ಯಕ್ರಮದ ವಿಶ್ಲೇಷಣೆಯು ಪ್ರಯೋಗ ಮತ್ತು ಕಾಲದ ಪರೀಕ್ಷೆಯನ್ನು ಗೆದ್ದು ನಿಂತಿದೆ. 2001ರಲ್ಲಿ ಸಮಕಾಲಿಕವಾದ ಕೆಲವು ಕಿರು ಬದಲಾವಣೆಗಳನ್ನು ಹೊರತುಪಡಿಸಿದರೆ, ಏಳನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ಕಾರ್ಯಕ್ರಮವು ಇಡೀ ಐದು ದಶಕಗಳ ಕಾಲ ಸುಸಂಗತವಾಗಿ ಉಳಿದಿರುವುದೇ ಅಲ್ಲದೆ ಕಾಲದ ಪರೀಕ್ಷೆಯನ್ನೂ ಗೆದ್ದಿದೆ. ಈ ಕಾರ್ಯಕ್ರಮದ ನೆಲೆಯಲ್ಲಿ ಸಿಪಿಐ(ಎಂ) ದೇಶದ ಮುಂಚೂಣಿ ಎಡ ಪಕ್ಷವಾಗಿ ಬೆಳೆದಿದೆ. ಅದರ ಹತ್ತು ಲಕ್ಷಕ್ಕಿಂತ ಹೆಚ್ಚಿನ ಸದಸ್ಯರು ಕೆಲಸ ಮಾಡುತ್ತಿರುವ ಸಾಮೂಹಿಕ ಸಂಘಟನೆಗಳ ಒಟ್ಟು ಸದಸ್ಯ ಸಂಖ್ಯಾ ಬಲ ಎಪ್ಪತ್ತು ಲಕ್ಷಕ್ಕಿಂತ ಮಿಗಿಲಾಗಿದೆ.

→



ಸಿಪಿಐ(ಎಂ) ನ 'ಕಾರ್ಯಕ್ರಮ'ವನ್ನು ರೂಪಿಸುವಲ್ಲಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸಿದ ಕಾಂ. ಎಂ. ಬಸವಪುನ್ನಯ್ಯ.



ಕಾಂ. ಪಿ. ಸುಂದರಯ್ಯ – ಸಿಪಿಐ(ಎಂ) ನ ಪಕ್ಷದ ಪ್ರಥಮ ಪ್ರಧಾನ ಕಾರ್ಯದರ್ಶಿ

→

★★★★

ಸಿಪಿಐ(ಎಂ) ಪಕ್ಷವು ತನ್ನ ಸೈದ್ಧಾಂತಿಕ ನಿಲುವುಗಳನ್ನು ಪಕ್ಷದ ರಚನೆಯ ಕೂಡಲೇ ರೂಪಿಸಿತ್ತು. 1960ರ ದಶಕದ ಆರಂಭದಲ್ಲಿ ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಒಳಗೆ ತೀವ್ರವಾದ ಸೈದ್ಧಾಂತಿಕ ಚರ್ಚೆ ಮತ್ತು ತಿಕ್ಕಾಟಗಳು ನಡೆದವು. ಹೊಸ ಯುಗದ ಹೂರಣವೇನು? ಅದರ ಮುಖ್ಯವಾದ ಸಾಮಾಜಿಕ ವೈರುಧ್ಯಗಳೇನು? ಎರಡು ಸಾಮಾಜಿಕ ವ್ಯವಸ್ಥೆಗಳ ನಡುವಿನ ಶಾಂತಿಯುತ ಸಹಬಾಳ್ವೆ ಮತ್ತು ಬಂಡವಾಳಶಾಹಿ ವ್ಯವಸ್ಥೆ ಶಾಂತಿಯುತವಾಗಿ ಸಮಾಜವಾದಕ್ಕೆ ಮಾರ್ಪಾಡಾಗುವ ಬಗ್ಗೆ ರಶ್ಯಾದ ಕಮ್ಯೂನಿಸ್ಟ್ ಪಕ್ಷ ಮತ್ತು ಚೈನಾದ ಕಮ್ಯೂನಿಸ್ಟ್ ಪಕ್ಷಗಳ ನಡುವೆ ತೀವ್ರ ರಾಜಕೀಯ ವಾದ ಪ್ರತಿವಾದಗಳು (ವ್ಯಾಖ್ಯಾನ–ಪ್ರತಿವ್ಯಾಖ್ಯಾನಗಳು) ಪರಸ್ಪರ ವಿರುದ್ಧ ಬಣಗಳಾಗಿ ನಡೆದವು.

1964ರಲ್ಲಿ ಜರುಗಿದ ಏಳನೇ ಮಹಾಧಿವೇಶನದಲ್ಲಿ ಪಕ್ಷ ರಚನೆಯಾದ ಬೆನ್ನ ಹಿಂದೆಯೇ ಪಕ್ಷದ ಎಲ್ಲಾ ಮುಖಂಡರನ್ನು ಸರ್ಕಾರ ಜೈಲಿಗೆ ಹಾಕಿತು. ಆದ್ದರಿಂದ, ಅನೇಕ ಸೈದ್ಧಾಂತಿಕ ಪ್ರಶ್ನೆಗಳ ಬಗ್ಗೆ ಪಕ್ಷ ತನ್ನ ನಿಲುವನ್ನು 1968ರವರೆಗೂ ನಿರೂಪಿಸಲಾಗಿರಲಿಲ್ಲ. ಇದ–ರಿಂದಾಗಿ ಕೆಲವು ವಲಯಗಳಲ್ಲಿ ಸಿಪಿಐ(ಎಂ) ಚೈನಾ ಕಮ್ಯೂನಿಸ್ಟ್ ಪಕ್ಷದ ನಿಲುವನ್ನು ಅನುಸರಿಸುತ್ತದೆಂಬ ತಪ್ಪು ಗ್ರಹಿಕೆಯೂ ಇತ್ತು. ಸ್ಪಷ್ಟೀಕರಣದಲ್ಲಿ ಆದ ವಿಳಂಬದಿಂದಾಗಿ ದೇಶದ ಕಮ್ಯೂನಿಸ್ಟ್ ಚಳುವಳಿಯಲ್ಲಿ ಕೆಲವು ಸಂಕುಚಿತ (ಸೆಕ್ಟೇರಿಯನ್) ಎಡ ಪಂಥವಾದಿ ಗುಂಪುಗಳು ತಲೆದೋರಿದವು. ಇದರಿಂದ ಪಕ್ಷಕ್ಕೆ ಹಾನಿಯಾಯಿತು.

ಸಿಪಿಐ(ಎಂ), ಪಕ್ಷದೊಳಗೆ ವ್ಯಾಪಕವಾಗಿ ಚರ್ಚಿಸಿದ ನಂತರ 1968ರ ಬರ್ದ್ವಾನ್ ಪ್ಲೀನಮ್‌ನಲ್ಲಿ ಸೈದ್ಧಾಂತಿಕ ನಿಲುವುಗಳನ್ನು ಅಂಗೀಕರಿಸಿತು. ಈ ದೇಶದ ಕಮ್ಯೂನಿಸ್ಟ್ ಚಳುವಳಿಯ ಒಳಗೆ ಮನೆಮಾಡಿದ್ದ ಮತ್ತು ಅಂತರ ರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಲ್ಲಿಯೂ ಇದ್ದ ಬಲ ಪರಿಷ್ಕರಣವಾದ ಹಾಗೂ ಸಂಕುಚಿತ(ಸೆಕ್ಟೇರಿಯನ್) ಎಡಪಂಥವಾದಿಗಳಿಂದ ಸಿಪಿಐ(ಎಂ) ಐತಿಹಾಸಿಕ ಬೇರ್ಪಡೆ ಸಾಧಿಸಿ ದೂರಸರಿಯಿತು. ರಶ್ಯಾ ಮತ್ತು ಚೈನಾದ ಕಮ್ಯೂನಿಸ್ಟ್ ಪಕ್ಷಗಳ ಸೈದ್ಧಾಂತಿಕ ನಿಲುವುಗಳಿಂದ ದೂರವುಳಿದು, ಕೆಲವು ಪ್ರಶ್ನೆಗಳಲ್ಲಿ ಅದನ್ನು ವಿಮರ್ಶಿಸುವ ಮೂಲಕ ತಾಳ್ಮೆಗೆಡದೆ ತನ್ನ ಸ್ವ–ಂತಿಕೆ ಮತ್ತು ಸ್ವಾತಂತ್ರ್ಯವನ್ನು ಕಾಪಾಡಿಕೊಂಡಿತು. ತನ್ನ ವಿಶಿಷ್ಟತೆಯನ್ನೂ ಮೆರೆಯಿತು.

ಮರಿ ಹಕ್ಕಿಯಂತಿದ್ದ ಅವಿಭಜಿತ ಕಮ್ಯೂನಿಸ್ಟ್ ಪಕ್ಷವು ತನ್ನ ಸಿದ್ಧಾಂತ ಮತ್ತು ಕಾರ್ಯಾಚರಣೆಗೆ ರಶ್ಯಾದ ಕಮ್ಯೂನಿಸ್ಟ್ ಪಕ್ಷದ ಮೇಲೆ ಅವಲಂಬಿತವಾಗಿತ್ತು. ಇದು ಸ್ವಾತಂತ್ರ್ಯಾನಂತರವೂ ಮುಂದುವರೆದಿತ್ತು. (ಸ್ವಾತಂತ್ರ್ಯಪೂರ್ವದಲ್ಲಿ 'ಕಮ್ಯೂನಿಸ್ಟ್ ಅಂತರರಾಷ್ಟ್ರೀಯ'ದ ಸೂಚನೆಯಂತೆ ಇಂಗ್ಲೆಂಡ್‌ನ ಕಮ್ಯೂನಿಸ್ಟ್ ಪಕ್ಷವು ಈ ಕೆಲಸಕ್ಕೆ ಮಧ್ಯವರ್ತಿಯಾಗಿತ್ತು.) ಅರವತ್ತರ ದಶಕದಲ್ಲಿ ತಲೆದೋರಿದ ಕೆಲವು ಸಂಕುಚಿತ ಎಡ ಪಂಥವಾದಿ ಗುಂಪುಗಳಿಗೆ ಚೈನಾ ಕಮ್ಯೂನಿಸ್ಟ್ ಪಕ್ಷ ಪೋಷಣೆ ನೀಡಿತು. ಈ ಅವಲಂಬನೆಯನ್ನು ತುಂಡರಿಸಿಕೊಂಡು ಸಿಪಿಐ(ಎಂ) ಹೊರಬಂದಿತು. ಇದು ಸಾಧ್ಯವಾದದ್ದು ತನ್ನ ಸ್ವಂತ ಬಲದ ಮೇಲೆ ಕಾರ್ಯಾಚರಣೆ ನಡೆಸಬೇಕೆಂಬ ದೃಢ ಸಂಕಲ್ಪದಿಂದಾಗಿ. ಇಂತಹ ಆಮೂಲಾಗ್ರ ಬದಲಾವಣೆ ಸಾಧ್ಯವಾದದ್ದು ಪಕ್ಷವು ಮಾರ್ಕ್ಸ್‌ವಾದ–ಲೆನಿನ್‌ವಾದಗಳ ತಿಳುವಳಿಕೆಗಳನ್ನು ಭಾರತದ ನಿರ್ದಿಷ್ಟ ಪರಿಸ್ಥಿತಿಗಳಿಗೆ ನಿರ್ದಿಷ್ಟವಾಗಿ ಅಳವಡಿಸಬೇಕೆಂಬ ಅದರ ಬದ್ಧತೆ ಮತ್ತು ಅಚಲ ವಿಶ್ವಾಸದಿಂದಾಗಿ. ಇದರ ಅರ್ಥವೆಂದರೆ ಬೇರೊಬ್ಬರಿಂದ ಎರವಲು ಪಡೆದ ತಿಳುವಳಿಕೆಯನ್ನು ಮತ್ತು ಬೇರೆ ದೇಶಗಳಲ್ಲಿ ಅನುಸರಿಸಿದ ಮಾದರಿ(ವಿಶೇಷವಾಗಿ, ಯಶಸ್ವಿಯಾಗಿ ಕ್ರಾಂತಿ ಮಾಡಿದ ದೇಶಗಳ ಮಾದರಿ)ಗಳನ್ನು ನಮ್ಮ ದೇಶದಲ್ಲಿ ಯಾಂತ್ರಿಕವಾಗಿ ಅಳವಡಿಸಲಾಗದು ಎಂಬುದು.



ಸೋವಿಯತ್ ಒಕ್ಕೂಟದ ಪತನವು ಭಾರತವೂ ಸೇರಿದಂತೆ ಪ್ರಪಂಚದ ಎಲ್ಲ ಕಮ್ಯೂನಿಸ್ಟ್ ಪಕ್ಷಗಳ ಮೇಲೆ ಮತ್ತು ಸಮಾಜವಾದದ ಬೆಳವಣಿಗೆಯ ಮೇಲೆ ಅಪಾರ ಕೆಡುಕು ಪರಿಣಾಮ ಬೀರಿದೆ. ಭಾರತದ ಕಮ್ಯೂನಿಸ್ಟ್ ಚಳುವಳಿಯ ಮೇಲೆ ಸಹ ಅದು ಪರಿಣಾಮ ಬೀರಿದೆ. ಅದರೆ ರಾಜಕೀಯ–ಸೈದ್ಧಾಂತಿಕ ಮತ್ತು ಸಂಘಟಾತ್ಮಕ ಮಟ್ಟದಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳ ಕಮ್ಯೂನಿಸ್ಟ್ ಪಕ್ಷಗಳ ಮೇಲೆ ಉಂಟು ಮಾಡಿದ ಅಡ್ಡ ಪರಿಣಾಮಗಳಷ್ಟು ತೀವ್ರವಾಗಿ ಸಿಪಿಐ(ಎಂ) ಪಕ್ಷವನ್ನು ತಟ್ಟಲಿಲ್ಲ. ಸಿಪಿಐ(ಎಂ) ಈ ನಿಟ್ಟಿನಲ್ಲಿ ಅತಿ ಕಡಿಮೆ ಪರಿಣಾಮಗಳಿಗೆ ಒಳಗಾಯಿತು. ಏಕೆಂದರೆ, ಪಕ್ಷವು ಸ್ವಂತವಾಗಿ ಮಾರ್ಕ್ಸ್‌ವಾದದ ತಿಳುವಳಿಕೆ ಪಡೆದಿತ್ತು. ಸೋವಿಯತ್ ವಿರೋಧಿ ನಿಲುವು ತಳೆಯದೆ, ಸಿದ್ಧಾಂತ ಮತ್ತು ಆಚರಣೆಗೆ ಸಂಬಂಧಿಸಿದಂತೆ ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ತಪ್ಪು ಒಪ್ಪು ನಿಲುವುಗಳನ್ನು ಯಾವುದೇ ದಾಕ್ಷಿಣ್ಯ–ಕ್ಕೆ ಒಳಗಾಗದೆ ಸಮಚಿತ್ತದ ವಿಮರ್ಶೆ ಮಾಡುತ್ತಿತ್ತು. ಸೋವಿಯತ್ ಒಕ್ಕೂಟ ಮತ್ತು ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಬಗ್ಗೆ ನಮ್ಮ ಪಕ್ಷವು ಕುರುಡು ನಂಬಿಕೆ ಇಟ್ಟಿರಲಿಲ್ಲ. ಆದ್ದರಿಂದ ಸೋವಿಯತ್ ಒಕ್ಕೂಟದ ಪತನದ ಅಡ್ಡ ಪರಿಣಾಗಳನ್ನುಎದುರಿಸಲು ಇತರರಿಗಿಂತಲೂ ಚೆನ್ನಾಗಿ ಸಜ್ಜಾಗಿತ್ತು. ಭಾರತದ ಶ್ರಮ ಜೀವಿಗಳಲ್ಲಿ ಮತ್ತು ಮಾರ್ಕ್ಸ್–ಲೆನಿನ್ ಸಿದ್ಧಾಂತಗಳಲ್ಲಿ ಆಳವಾದ ನಂಬಿಕೆ ಇಟ್ಟಿರುವ ಪಕ್ಷವು ಇಪ್ಪತ್ತನೇ ಶತಮಾನದಲ್ಲಿ ಸಮಾಜವಾದ ನಿರ್ಮಾಣದ ಅನುಭವಗಳನ್ನು ಪುನರ್‌ಮೌಲ್ಯಮಾಪನ ಮಾಡಿ ಇಪ್ಪತ್ತೊಂದನೇ ಶತಮಾನದಲ್ಲಿ ನವೀಕರಿಸಿದ ಸಮಾಜವಾದ ಕಟ್ಟಲು ತಾನು ನಂಬಿರುವ ಸಿದ್ಧಾಂತ ಮತ್ತು ಆಚರಣೆಗಳಲ್ಲಿ ಇಟ್ಟಿರುವ ವಿಶ್ವಾಸವನ್ನು ಪುನರುಚ್ಚರಿಸುತ್ತದೆ. ವಾಸ್ತವಿಕವಾಗಿ ಹೇಳುವುದಾದರೆ, 1991ರ ನಂತರ ಪಕ್ಷದ ಸದಸ್ಯ ಬಲ ಏರುತ್ತಿದೆ.



★★★★

ಪ್ರಜಾಪ್ರಭುತ್ವ ಕ್ರಾಂತಿಯ ತಿರುಳೇ ಕಾರ್ಷಿಕ ಕ್ರಾಂತಿ ಎಂದು ಸಿಪಿಐ(ಎಂ) ಕಾರ್ಯಕ್ರಮ ತಿಳಿಸುತ್ತದೆ. ಆದ್ದರಿಂದ, ಕಾರ್ಷಿಕ ಪ್ರಶ್ನೆ ಮತ್ತು ಭೂಮಿ ಸಮಸ್ಯೆಗಳು ಪಕ್ಷದ ಕಾರ್ಯಾಚರಣೆಯಲ್ಲಿ ಕೇಂದ್ರ ಸ್ಥಾನ ಪಡೆದಿವೆ. ಪಕ್ಷ ರಚನೆಯಾದ ಕಾಲದಿಂದಲೂ ಭೂಮಿಗೆ ಸಂಬಂಧಿಸಿದ ಹೋರಾಟಗಳನ್ನು ಮುಂದೊಯ್ಯಲು ಅಪಾರ ಶ್ರಮ ವಹಿಸಿದೆ. ಭೂ ಮಾಲಕತ್ವ, ಬೇನಾಮಿ ಜಮೀನು ವಶ, ಮಿತಿ ನಿಗದಿಗಿಂತ ಇರುವ ಹೆಚ್ಚುವರಿ ಜಮೀನಿನ ಹಂಚಿಕೆ, ಪಟ್ಟಾ, ಕೃಷಿ ಕಾರ್ಮಿಕರಿಗೆ ವಾಸ ಮಾಡಲು ಸೈಟು ಇಂತಹ ಅನೇಕ ಸಮಸ್ಯೆಗಳ ಮೇಲೆ ನಡೆಸಿದ ಅವಿರತ ಹೋರಾಟಗಳ ಫಲವಾಗಿ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಎಡಪಕ್ಷಗಳ ನೇತೃತ್ವದ ಸರ್ಕಾರಗಳು ರಚನೆಯಾದವು. ಈ ಸರ್ಕಾರಗಳು ಮಾತ್ರ ಅರ್ಥಪೂರ್ಣವಾಗಿ ಭೂ ಸುಧಾರಣೆ ಜಾರಿ ಮಾಡಿದವು ಮತ್ತು ಹೆಚ್ಚುವರಿ ಜಮೀನನ್ನು ಭೂ ಹೀನರಿಗೆ ಹಂಚಿ, ಗೇಣಿದಾರರಿಗೆ ಭದ್ರತೆ ಒದಗಿಸಿದವು.

ವಿಶೇಷವಾಗಿ, 1960 ಮತ್ತು 1970ರ ದಶಕಗಳಲ್ಲಿ ಭೂ ಹೋರಾಟದ ಅಲೆಗಳೇ ಎದ್ದವು. 1967–1970ರ ಅವಧಿಯಲ್ಲಿ ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಸಂಯುಕ್ತ ರಂಗದ ಸರ್ಕಾರಗಳಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ಸಿಪಿಐ(ಎಂ) ಭೂಮಿ ಪ್ರಶ್ನೆಗೆ ಪರಿಹಾರ ದೊರಕಿಸುವಲ್ಲಿ ಅವಿರತ ಶ್ರಮ ವಹಿಸಿತು. ಅದರ ಹಿಂದೆ ಪಕ್ಷ ನಡೆಸಿದ ಭಾರೀ ಹೋರಾಟಗಳ ಬೆಂಬಲವೂ ಇತ್ತು.

ಸಿಪಿಐ(ಎಂ) ಕಾರ್ಮಿಕ ವರ್ಗದ ಒಂದು

ಪುಟ 14 ಕ್ಕೆ

ನೌಕರರ ನೇಮಕಾತಿ ಅನುಮೋದನೆ-ಕನಿಷ್ಟ ಕೂಲಿಗಾಗಿ

ಗ್ರಾಮ ಪಂಚಾಯತ್ ನೌಕರರ ರಾಜ್ಯವ್ಯಾಪಿ ಚಳುವಳಿ ಮುನ್ನಡೆಯ ಕೆಲವು ಹೆಜ್ಜೆಗಳು.. ..

ಕರ್ನಾಟಕ ರಾಜ್ಯದಲ್ಲಿ ಗ್ರಾಮಪಂಚಾಯತ್ ನೌಕರರು ಸುದೀರ್ಘ ಕಾಲದಿಂದ ಚಳುವಳಿ ನಡೆಸುತ್ತಾ ಬರುತ್ತಿದ್ದಾರೆ. ತಮ್ಮ ಸೇವೆಯನ್ನು ಖಾಯಂ ಮಾಡಬೇಕು. ನ್ಯಾಯಬದ್ದ ಸಮಾನ ವೇತನ ನೀಡಬೇಕು ಎಂಬುದು ಅವರ ಬೇಡಿಕೆಯಾಗಿದೆ. ಆದರೆ ಎಷ್ಟೋ ನೌಕರರ ನೇಮಕಾತಿಗೆ ನೇಮಕಾತಿ ಆಗುವ ಹಂತದಲ್ಲಿ ಅನುಮೋದನೆ ಸಹ ಆಗಿಲ್ಲ. ಅಂತಹ ನೌಕರರಿಗೆ ಈ ಅನುಮೋದನೆಯನ್ನು ಗಳಿಸಿಕೊಳ್ಳುವುದು ಒಂದು ಪ್ರಾಥಮಿಕ ಹಂತದ ಯಶಸ್ಸು. ಹಲವು ಹಂತಗಳ ಹೋರಾಟದ ಫಲವಾಗಿ ರಾಜ್ಯ ಸರ್ಕಾರವು ನೌಕರರ ಅನುಮೋದನೆಗೆ ಆದೇಶ ನೀಡಿದೆ. ಆದರೆ ಆದೇಶದಲ್ಲಿ ಅನುಮೋದನೆಗೆ ಅಡ್ಡಿಯಾಗುವ ಷರತ್ತುಗಳು, ತಾಂತ್ರಿಕ ತೊಂದರೆಗಳು ಇದ್ದವು. ಆದರೆ ನಿರಂತರ ಚಳುವಳಿಯಿಂದ ಈ ಅಡೆತಡೆಯನ್ನು ಸಹ ಮೀರಿ ಹೋಗುವುದು ಸಾಧ್ಯವಾಗುತ್ತಿದೆ. ನೌಕರರ ಅನುಮೋದನೆಯ ಪ್ರಕ್ರಿಯೆಗೆ ಚಾಲನೆ ಬಂದಿದೆ. ತೀರಾ ಅತಂತ್ರ ನೌಕರರ ಬದುಕಿನ ದೃಷ್ಟಿಯಿಂದ ಇದು ಒಂದು ಹಂತದ ಸಾಧನೆಯಾಗಿದೆ. ಮುಂದೆಯೂ ಸಾಧಿಸಬೇಕಾದದ್ದು ಹಲವು ಇವೆ. ಅವನ್ನು ಹೋರಾಟದಿಂದಲೇ ಸಾಧಿಸಬೇಕಾಗಿದೆ. ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ(ಸಿಐಟಿಯು)ದ ನೇತೃತ್ವದಲ್ಲಿ ನಡೆಯುತ್ತಿರುವ ಈ ಆಂದೋಲನದ ಇತ್ತೀಚಿನ ಹಂತದ ಚಳುವಳಿ ಹಾಗೂ ಈ ಹೋರಾಟ ಹಾದು ಬಂದ ಹಾದಿಯ ಕುರಿತು ಒಂದು ಚಿತ್ರಣ ಇಲ್ಲಿದೆ.

ಒಂದು ಹಂತದಲ್ಲಿ ಗ್ರಾಮ ಪಂಚಾಯತ ವ್ಯವಸ್ಥೆ ಬಂದಾಗಿನಿಂದಲೂ ಕೆಲಸ ನಿರ್ವಹಿಸುತ್ತಿರುವ ನೌಕರರ ನೇಮಕಾತಿ ಆಕ್ರಮವೆಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದನ್ನು ನೋಡಿ ರಾಜ್ಯದ ಸಹಸ್ರಾರು ಪಂಚಾಯತ ನೌಕರರು ಕಂಗಾಲಾಗಿದ್ದರು. ಅನುಮೋದನೆ ವಿಷಯ ಎತ್ತಿದರೆ ಸಾಕು 'ಉಮಾದೇವಿ' ಪ್ರಕರಣ ಎಂದು ಒಂದು ಪ್ರಕರಣ ಅಡ್ಡ ತಂದು ಪಂಚಾಯತ ನೌಕರರನ್ನು ಹೆದರಿಸಲಾಗುತ್ತಿತ್ತು.

ಗ್ರಾಮ ಪಂಚಾಯತ್‌ನ ಎಲ್ಲ ನೌಕರರಿಗೂ ಏಕಕಾಲಕ್ಕೆ ಅನುಮೋದನೆ ನೀಡಬೇಕೆಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘ (ಸಿಐಟಿಯು) ಈ ವಿಷಯವನ್ನು ಎತ್ತಿ-ಕೊಂಡು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಿರಂತರ ಹೋರಾಟ ಮಾಡಿದ್ದರ ಫಲವಾಗಿ ರಾಜ್ಯ ಸರ್ಕಾರ ತನ್ನ ಆದೇಶವನ್ನು ಪರಿಶೀಲಿಸಿ, ಮೊದಲಿನ ತನ್ನ ಆದೇಶ ವಾಪಸ್ ಪಡೆದು ಪೂರ್ವಾನುಮತಿ ಪಡೆಯದೆ ಇರುವ ಎಲ್ಲ ಪಂಚಾಯತ ನೌಕರರ ನೇಮಕಾತಿಗೆ ಅನುಮೋದನೆ ನೀಡಬೇಕೆಂದು 10.09.2014 ರಂದು ಆದೇಶ ಹೊರಡಿಸಿತು. ಆದರೆ ಈ ಆದೇಶ ಅಡ್ಡ ಗೋಡೆ ಮೇಲೆ ದೀಪ ಇಟ್ಟ ಹಾಗೆ ('ನಿಯಮಾನುಸಾರ' ನೇಮಕಾತಿ ಎಂಬ ಸೂಚನೆ) ಇತ್ತು. ಇದನ್ನು ಪ್ರತಿಭಟಿಸಿ ಸಂಘಟನೆ ಮತ್ತೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ 20.09.2014 ರಂದು ಮತ್ತೊಂದು ತಿದ್ದೋಲೆ ಹೊರಡಿಸಿ ಎಲ್ಲಾ ಸಿಬ್ಬಂದಿಗಳ ಅನುಮೋದನೆ ಮಾಡಲು ಶ್ರಮವಹಿಸಿದ್ದು ಸಂಘಟನೆಗೆ ಆದ ದೊಡ್ಡ ಗೆಲವು. ಈಗ ಗ್ರಾಮ ಪಂಚಾಯತ್ ನೌಕರರ ಖಾಯಮಾತಿಗಾಗಿ ನೌಕರರ ಪಟ್ಟಿ ಕಳಿಸಿಕೊಡಲಾಗುತ್ತಿದೆ. ಈ ಪ್ರಕ್ರಿಯೆ ಆದಷ್ಟೂ ಬೇಗ ಪೂರ್ಣಗೊಳ್ಳಬೇಕಿದೆ.

ನೌಕರರ ದೀರ್ಘಕಾಲದ ಹೋರಾಟಕ್ಕೆ ಸಂದ ಜಯ

ಹಲವಾರು ವರ್ಷಗಳ ಹೋರಾಟದ ನಂತರ ಗ್ರಾಮ ಪಂಚಾಯತ್ ನೌಕರರನ್ನು ಖಾಯಂ ಮಾಡುವ ಕುರಿತು ರಾಜ್ಯ ಸರಕಾರವು ಇತ್ತಿಚೆಗೆ ಆದೇಶವನ್ನು ಸರ್ಕಾರ ಹೊರಡಿಸಿದೆ. ಬಿಲ್‌ಕಲೆಕ್ಟರ್, ಪಂಪ್ ಆಪರೇಟರ್, ಸ್ವಚ್ಛತಾಗಾರರು, ಜವಾನರು ಮಾಸಿಕ 50 ರೂ.ಗಳಿಂದ ಮಟ್ಟದಿಂದ ಹತ್ತಾರು ವರ್ಷಗಳಿಂದ ದುಡಿಯುತ್ತಾ ಬಂದಿದ್ದಾರೆ. ಕೆಲಸದ ಅಭದ್ರತೆ, ಕೆಲಸದಿಂದ ವಜಾ ಮಾಡುತ್ತಾರೆಂಬ ಭಯದಲ್ಲಿ ಸೇವೆ ಮಾಡುತ್ತಾ ಬಂದಿದ್ದಾರೆ. ಕಳೆದ ವರ್ಷ ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರು ಜೂನ್ 18, 2013 ರಂದು ಪ್ರತಿಭಟನೆಯ ಸಂದರ್ಭದಲ್ಲಿ ನೌಕರರ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದ್ದರು. 23.07.2013 ಸಂಘದ ಪದಾಧಿಕಾರಿಗಳ ಜೊತೆ ಸಭೆ ನಡೆಸಿ ಸಂಘದ ಕೋರಿಕೆಯಂತೆ 29.10.2013 ರಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಅಪಾರ ಕಾರ್ಯದರ್ಶಿ ಎಂ.ಎಸ್.ಸ್ವಾಮಿಯವರ ಅಧ್ಯಕ್ಷತೆಯಲ್ಲಿ 6 ಜನರ ಸಮಿತಿ ರಚಿಸಿ ಆದೇಶ ಹೊರಡಿಸಿದರು. ಸಮಿತಿಯ ಕಾರ್ಯ ವ್ಯಾಪ್ತಿಯನ್ನು ದಿ: 20.01.2014 ರಂದು ಗುರುತಿಸಲಾಯಿತು. ಈ ಕಾರ್ಯವ್ಯಾಪ್ತಿಯಲ್ಲಿ ನೌಕರರ ಅನುಮೋದನೆ ವೇತನ, ನಿವೃತ್ತಿ ವೇತನ, ಗ್ರಾಜುಯಿಟಿ, ಸೇವಾ ನಿಯಮಾವಳಿ ಸಂಬಳಕ್ಕೆ ಬೇಕಾಗುವ ಹಣಕಾಸು ಹೊಂದಾಣಿಕೆ ಮತ್ತಿತರ ವಿಷಯಗಳನ್ನು ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಡಿಸಲಾಯಿತು.



ಹಾಸನದಲ್ಲಿ ಪ್ರತಿಭಟನೆ

ಅಡೆತಡೆಗಳ ಹಿನ್ನೆಲೆ

ಇದೇ ಪ್ರಶ್ನೆಯ ಮೇಲೆ ಹಿಂದೆಯೂ ಸಂಘಟನೆಯು ನಿರಂತರವಾಗಿ ಚಳುವಳಿ ನಡೆಸುತ್ತ ಬಂದಿದೆ. ಆದರೆ ಕಾನೂನು ಇಲಾಖೆಯು 1993 ಕಾಯ್ದೆಯಲ್ಲಿ ಸರ್ಕಾರಕ್ಕೆ ಇಂತಹ ನೇಮಕಾತಿಗೆ ಅನುಮೋದನೆ ನೀಡುವ ಅಧಿಕಾರವಿಲ್ಲವೆಂದು ಎರಡು ಸಲ ಅಭಿಪ್ರಾಯ ನೀಡಿತ್ತು. ಮೈಸೂರು ಜಿಲ್ಲಾ ಪಂಚಾಯ್ತಿ ಮುಖ್ಯಕಾರ್ಯದರ್ಶಿಗಳು ಈ ವಿಷಯವಾಗಿ ಬರೆದ ಪತ್ರದ ಸಂಬಂಧ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ದಿ: 16.12.2012 ರಂದು 'ಸುಪ್ರಿಂ ಕೋರ್ಟ್ ತೀರ್ಪಿನನ್ವಯ ನೌಕರರಿಗೆ ಅನುಮೋದನೆ ನೀಡಲು ಅವಕಾಶವಿಲ್ಲ'ವೆಂದು ತಿಳಿಸಿತ್ತು. ಈ ಸರ್ಕಾರದ ಈ ಆದೇಶದಿಂದ ಇಡೀ ಗ್ರಾಮಪಂಚಾಯತ್ ನೌಕರರ ವರ್ಗವು ಅತಂತ್ರಕ್ಕೆ ಒಳಗಾಗಿತ್ತು.

ಆದರೆ ಪಂಚಾಯತ್ ನೌಕರರ ಸುದೀರ್ಘ ಸೇವೆಯನ್ನು ಪರಿಗಣಿಸಿದ ಎಂ.ಎಸ್.ಸ್ವಾಮಿ ನೇತೃತ್ವದ ಸಮಿತಿಯು ಭವಿಷ್ಯವರ್ತಿ ದಿನಾಂಕದಿಂದ ಅನುಮೋದನೆ ಮಾಡಲು ಶಿಫಾರಸ್ಸು ಮಾಡಿದೆ. ಜೊತೆಗೆ ವೇತನ ನಿಗದಿ ಮುಂತಾದವುಗಳಿಗೆ ಹಿಂದಿನ ಸೇವಾವಧಿಯನ್ನು 10 ವರ್ಷ ನೀಡಬೇಕೆಂದು ಶಿಫಾರಸ್ಸು ಮಾಡಿದೆ. (ಸಂಘವು ಪೂರ್ತಿ ಸೇವಾವಧಿ ನೀಡಬೇಕೆಂದು ಕೇಳಿದೆ.) ಆದರೆ ಸರಕಾರವು ಹಿಂದಿನ ಸೇವಾವಧಿಯನ್ನು ಆದೇಶದಲ್ಲಿ ಪರಿಗಣಿಸದೇ ಆದೇಶ ಮಾಡಿದೆ. ಇದರಿಂದ ತುಂಬಾ ಅನ್ಯಾಯವಾಗಿದೆ. ಹಿಂದಿನ ಪೂರ್ತಿ ಸೇವಾವಧಿ ಕೊಡಬೇಕು. ಅದಕ್ಕಾಗಿ ಜಿಲ್ಲಾ ಪಂಚಾಯತ್‌ಗಳೆದುರು ಜಿಲ್ಲೆಯ ಎಲ್ಲಾ ಗ್ರಾಮಪಂಚಾಯತ್ ನೌಕರರು ಹೋರಾಟ ನಡೆಸುತ್ತಿದ್ದಾರೆ.

'ಹೊಸ ಅಡೆ ತಡೆ ನಿವಾರಣೆ'

ಗ್ರಾಮ ಪಂಚಾಯತ್ ನೌಕರರ ನೇಮಕಾತಿ ಅನುಮೋದನೆ ಮಾಡಲು 'ನಿಯಮಾನುಸಾರ ಅರ್ಹತೆ ಮೀಸಲಾತಿ ಕಡ್ಡಾಯಗೊಳಿಸಿ' ಎಂದು ಸರಕಾರ ಆದೇಶಿಸಿ ಬಿಟ್ಟಿತ್ತು. ಹಾಗಾದಲ್ಲಿ ಹಲವಾರು ವರ್ಷಗಳಿಂದ ಇದೇ ವೃತ್ತಿಯನ್ನು ನಂಬಿಕೊಂಡು ಬದುಕು ರೂಪಿಸಿಕೊಂಡಿರುವ ಎಷ್ಟೋ ನೌಕರರ ನೇಮಕಾತಿ ಅನುಮೋದನೆ ಆಗದೇ ಅವರು ತೀವ್ರತೊಂದರೆಗೆ ಸಿಲುಕುತ್ತಿದ್ದರು. ಆದ್ದರಿಂದ ಸರ್ಕಾರದ ಆದೇಶದ ತಿದ್ದುಪಡಿಗೆ ಸರ್ಕಾರವನ್ನು ಚಳುವಳಿ ಒತ್ತಾಯಿಸಿತು. ಈ ಹಿನ್ನೆಲೆಯಲ್ಲಿ ಸರಕಾರವು ತನ್ನ ಆದೇಶವನ್ನು ತಿದ್ದುಪಡಿ ಮಾಡಿ ಮತ್ತೊಂದು ಆದೇಶ ಹೊರಡಿಸಿ ನಿಯಮದ ಷರತ್ತು ಕೈಬಿಟ್ಟಿತು. ಶೇ.40ರಷ್ಟು ಪ್ರಮಾಣದಲ್ಲಿ 'ಆದಾಯ ಮಿತಿ'ಯ ಆಧಾರದಲ್ಲಿ ಅಗತ್ಯಕ್ಕೆ ತಕ್ಕಂತೆ ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ಪಂಚಾಯತಿ ನೌಕರರಾಗಿ ಕೆಲಸ ಮಾಡುತ್ತಾ ಬಂದ ಈ ನೌಕರರ ನಡುವೆ ಬಡ ವಿಭಾಗದ ಸೂಕ್ತ ವಿದ್ಯಾರ್ಹತೆ ಇಲ್ಲದ ಸಿಬ್ಬಂದಿ ಗಣನೀಯ ಪ್ರಮಾಣದಲ್ಲಿ ಇದ್ದಾರೆ. ಶೈಕ್ಷಣಿಕ ಅರ್ಹತೆ ಇಲ್ಲದಿದ್ದರೂ ಗ್ರಾಮೀಣ ಪಂಚಾಯತ್ ನೌಕಕರ ಇಲ್ಲಿಯವರೆಗಿನ ಸೇವೆಯೇ ಒಂದು ಅರ್ಹತೆಯಾಗಿದೆ. ಆದ್ದ-ರಿಂದ ಅವರ ನೇಮಕಾತಿಯನ್ನು ಅನುಮೋದನೆ ಆಗಬೇಕಾದದ್ದು ನ್ಯಾಯವಾಗಿದೆ.

1994 ರ ಆದೇಶದ ಪ್ರಕಾರ ನೇಮಕಾತಿ ನಿಯಮಗಳಲ್ಲಿ 'ಗ್ರಾಮ ಪಂಚಾಯತಿಗೊಬ್ಬ ಪಂಪ್ ಆಪರೇಟರ್' ಇದ್ದದ್ದನ್ನು 'ಪ್ರತಿ ಸ್ಥಾವರಕೊಬ್ಬ ಪಂಪ್ ಆಪರೇಟರ್' ಎಂದು ಬದಲಾಯಿಸುವಲ್ಲಿ ಸಂಘವು ಯಶಸ್ವಿಯಾಗಿದೆ. ಎಲ್ಲಾ ಸ್ವಚ್ಛತಾಗಾರರನ್ನು ಖಾಯಂ ಮಾಡಬೇಕಿದೆ.

ಡಾಟಾ ಎಂಟ್ರಿ ಆಪರೇಟರ್

ಕಳೆದ 7–8 ವರ್ಷಗಳಿಂದ ಕಂಪ್ಯೂಟರ್ ಆಪರೇಟರ್‌ಗಳು ಹೊರ ಗುತ್ತಿಗೆಯಲ್ಲಿ ದುಡಿಯುತ್ತಿದ್ದಾರೆ. ಇವರು ಗ್ರಾಮ ಪಂಚಾಯತ್‌ಗಳಲ್ಲಿ ಕಂಪ್ಯೂಟರ್ ಆಪರೇಟರ್ ಹುದ್ದೆ ಮಂಜೂರಾತಿ ಇಲ್ಲದೇ ಇರುವುದರಿಂದ ತೀವ್ರ ತೊಂದರೆಗೆ ಒಳಗಾಗಿದ್ದರು. ಹೊಸ ಹುದ್ದೆ ಸೃಷ್ಠಿ ಮಾಬೇಕೆಂದು ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದಾಗ ಹೊರಗುತ್ತಿಗೆಯಡಿ ನೇಮಕ ಮಾಡಿಕೊಳ್ಳಲು ಹಣಕಾಸು ಅನುಮತಿ ನೀಡಿತ್ತು. ಕಂಪ್ಯೂಟರ್ ಆಪರೇಟರ್‌ಗಳು ಎರಡು ಸಲ ಪ್ರತ್ಯೇಕವಾಗಿ ಹೋರಾಟ ನಡೆಸಿ ಇಲಾಖಾ ಅಧಿಕಾರಿಗಳು ಹಾಗೂ ಸಚಿವರ ಜೊತೆ ಮಾತುಕತೆ ನಡೆಸಲಾಗಿದೆ. ಎಂ.ಎಸ್. ಸ್ವಾಮಿ ಸಮಿತಿ ಮುಂದುಗಡೆ ಈಗಾಗಲೇ ಮಂಜೂರಾದ ಗ್ರಾಮಪಂಚಾಯತ್‌ಗೊಂದು ಹುದ್ದೆ ಮಂಜೂರಾಗಿದ್ದ ಗುಮಾಸ್ತರು ಮತ್ತು ಟೈಪಿಸ್ಟ್ ಹುದ್ದೆ ಬದಲಾವಣೆ ಮಾಡಬೇಕೆಂದು ಸಂಘವು ಕೋರಿದೆ. ಅದರಂತೆ 5,628 ಹುದ್ದೆಗಳನ್ನು ಹಣಕಾಸು ಇಲಾಖೆ ಮಂಜೂರಾತಿ ಇಲ್ಲದೆ ಸೃಜಿಸಲು ಸಾಧ್ಯವಾಗಿದೆ. ಮೂರು ವರ್ಷ ಸೇವೆ ಸಲ್ಲಿಸಿದ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಗ್ರಾಮಪಂಚಾಯತ್ ನೌಕರರನ್ನಾಗಿ ನೇಮಿಸಲು ಹೋರಾಟ ಮುಂದುವರಿಯಲಿದೆ.

ನಿವೃತ್ತಿ ವೇತನ: ಗ್ರಾಮಪಂಚಾಯತ್ ನೌಕರರಿಗೆ ಕಾರ್ಮಿಕ ಆರೋಗ್ಯ ವಿಮೆ, ನಿವೃತ್ತಿ ವೇತನ, ಸರಕಾರ ಮಂಜೂರು ಮಾಡಿದ ಸೌಲಭ್ಯಗಳನ್ನು ಜಾರಿಗೊಳಿಸಲು ಪ್ರಯತ್ನ ಹಾಗೂ ಹೋರಾಟ ಅಗತ್ಯವಾಗಿದೆ.

ವೇತನ ಶ್ರೇಣಿ: ಈಗಾಗಲೇ ನಿಗದಿಪಡಿಸಿದ ವೇತನ ಪಡೆಯಲು 407.33 ಕೋಟಿ ರೂ.ಗಳ ಅಗತ್ಯವಿದೆ. ಆದರೆ ಗ್ರಾಮ ಪಂಚಾಯತ್ ನೌಕರರ ವೇತನಕ್ಕಾಗಿ ಸರ್ಕಾರ 246 ಕೋಟಿ ರೂ.ಗಳನ್ನು ಮಾತ್ರ ನೀಡುತ್ತಿದೆ. ಪೂರ್ತಿ ಸಂಬಳ ಸಿಗಲು ಇನ್ನೂ 168 ಕೋಟಿ ಅಗತ್ಯವಿದೆ. ಅಗತ್ಯವಿದ್ದ ಹಣ ಪೂರೈಸಲು ಎಂ.ಎಸ್.ಸ್ವಾಮಿ ಸಮಿತಿ ಶಿಫಾರಸ್ಸು ಮಾಡಿದೆ. ಈ 168 ಕೋಟಿ ಸಿಕ್ಕಾಗ ಮಾತ್ರ ಸಿಬ್ಬಂದಿ ಸಂಬಳ ಸಿಗಲು ಸಾಧ್ಯವಾಗುತ್ತದೆ. ಈಗಾಗಲೇ ಎಷ್ಟೋ ಕಡೆಗಳಲ್ಲಿ 6 ತಿಂಗಳಿಂದ 1 ವರ್ಷದ ವರೆಗೆ ಸಂಬಳವಿಲ್ಲದೆ ನೌಕರರು ದುಡಿಯುತ್ತಿದ್ದಾ-ರೆ. ಹೊಸ ಅನುದಾನ ಪಡೆಯಲು ಹೋರಾಟ ಅನಿವಾರ್ಯವಾಗಿದೆ.

ಹೊಸ ಹುದ್ದೆಗಳ ಸೃಷ್ಠಿ

ಈಗಿರುವ ಬಿಲ್ ಕಲೆಕ್ಟರ್‌ಗಳ ಮೇಲೆ ಕೆಲಸದ ಒತ್ತಡ ಹೆಚ್ಚಿದೆ. ರಾಜ್ಯದಲ್ಲಿ 6,044 ಹೊಸ ಬಿಲ್ ಕಲೆಕ್ಟರ್ ಹುದ್ದೆಗಳನ್ನು ಸೃಷ್ಠಿ ಮಾಡಲು ಎಂ.ಎಸ್.ಸ್ವಾಮಿ ವರದಿ ಶಿಫಾರಸ್ಸು ಮಾಡಿದೆ. ಈ ಹುದ್ದೆಗಳ ಸೃಷ್ಟಿ ಮಾಡಲು ಹಣಕಾಸು

➡

→

ಇಲಾಖೆಯ ಒಪ್ಪಿಗೆ ಪಡೆಯುವ ಅಗತ್ಯವಿದೆ. ಜೊತೆಗೆ ಎಸ್‌ಎಸ್‌ಎಲ್‌ಸಿ ಪಾಸಾದ ಪಂಪ್ ಆಪರೇಟರ್‌ಗಳನ್ನು ಬಿಲ್ ಕಲೆಕ್ಟರ್ ಹುದ್ದೆಗೆ ಬಡ್ತಿ ನೀಡಲು ಸಂಘಟನೆ ಬೇಡಿಕೆಯಿಟ್ಟು ಹೋರಾಟ ನಡೆಸಿದೆ. ಈ ಸಂಬಂಧ ಮುಂದೆ ರಾಜ್ಯಾದ್ಯಂತ ಹೋರಾಟ ನಡೆಸಬೇಕಾಗಿದೆ. 2,818 ಸ್ವಚ್ಛತೆಗಾರ ಹುದ್ದೆಯನ್ನು ಸೃಷ್ಟಿ ಮಾಡಲು ಎಂ.ಎಸ್.ಸ್ವಾಮಿ ಸಮಿತಿ ಶಿಫಾರಸ್ಸು ಮಾಡಿದೆ.

ಲೋಕ ನೌಕರರು :

ಗ್ರಾಮ ಪಂಚಾಯತ್ ನೌಕರರನ್ನು ಲೋಕನೌಕರರೆಂದು ಪರಿಗಣಿಸಿ ಶಿಸ್ತು ಪ್ರಾಧಿಕಾರ ಎಂದು ವರದಿ ಶಿಫಾರಸ್ಸು ಮಾಡಿದೆ. ಇದ-ರಿಂದ ಕೆಲಸದ ಭದ್ರತೆಯನ್ನು ಇನ್ನಷ್ಟು ದೃಢ ಪಡಿಸಿದಂತಾಗಿದೆ. ಈ ಎಲ್ಲಾ ವಿಷಯಗಳನ್ನು ಒಳಗೊಂಡ ಎಂ.ಎಸ್. ಸ್ವಾಮಿ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲು ಸರ್ಕಾರವನ್ನು ಸಂಘವು ಒತ್ತಾಯಿಸಿದೆ.

ನೇಮಕಾತಿ ಪ್ರಾಧಿಕಾರ :

ಎಂ.ಎಸ್. ಸ್ವಾಮಿಯವರ ವರದಿಯ ಪ್ರಕಾರ ಮೊದಲು ಗ್ರಾಮಪಂಚಾಯತ್‌ಗಳು ನೇಮಕಾತಿ ಪ್ರಾಧಿಕಾರದ ಅಧಿಕಾರ ಹೊಂದಿದ್ದವು. ಇದ-ರಿಂದಾಗಿ ನೇಮಕಾತಿ ಬೇಕಾಬಿಟ್ಟಿಯಾಗಿ ಆಗಿದೆ. ಅದು ಈ ಸಮಸ್ಯೆಯ ಉಲ್ಬಣಕ್ಕೆ ಕಾರಣವಾಗಿದೆ. ಇದನ್ನು ಮನಗಂಡು ನೇಮಕಾತಿ ಪ್ರಾಧಿಕಾರವನ್ನು ಈಗಿನ ಸರ್ಕಾರದ ಆದೇಶದ ಪ್ರಕಾರ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ನೇತೃತ್ವದ ಸಮಿತಿಗೆ ವಹಿಸಿರುವುದರಿಂದ ಇದಕ್ಕೆ ಕಡಿವಾಣ ಬೀಳಲಿದೆ ಮತ್ತು ಬಡ್ತಿ ಮತ್ತಿತರ ನೌಕರರ ಸಮಸ್ಯೆ ನಿವಾರಣೆಗೆ ಇದರಿಂದ ಸಾಧ್ಯವಾಗಲಿದೆ. ಆದ್ದರಿಂದ ಇದನ್ನು ಜಾರಿಗೊಳಿಸಲು ಸಂಘವು ಒತ್ತಾಯಿಸಿದೆ. ಈ ವಿಷಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಸಚಿವರು ಸಕಾರಾತ್ಮಕ ನಿಲುವು ತಾಳಿದರೂ ಹಲವಾರು ಹಲವಾರು ಅಡೆ-ತಡೆಗಳನ್ನು ಎದುರಿಸಬೇಕಾಗಿದೆ. ●

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಎದುರು ಅನಿರ್ದಿಷ್ಟ ಕಾಲ ಧರಣಿ



ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ನೌಕರರು 15 ಅಕ್ಟೋಬರ್ 2014 ರಂದು ತಮ್ಮ ಸೇವೆಯನ್ನು ಕಾಯಂಗೊಳಿಸಬೇಕೆಂದು ಒತ್ತಾಯಿಸಿ ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಕಛೇರಿ ಎದುರು ಅನಿರ್ಧಿಷ್ಟ ಕಾಲ ದರಣಿ ನಡೆಸಿದರು. ಅದೇ ದಿನ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆ ನಡೆಯುತ್ತಿದ್ದರಿಂದ ಲೋಕಸಭಾ ಸದಸ್ಯರು, ಶಾಸಕರುಗಳು ಸಹ ಸಭೆಯಲ್ಲಿ ಹಾಜರಿದ್ದರು. ಪಂಚಾಯ್ತಿ ಅಧ್ಯಕ್ಷರಾದ ರಾಮಚಂದ್ರ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಬೆಟ್ಟಸ್ವಾಮಿಯವರು ಮನವಿ ಸ್ವೀಕರಿಸಿ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವುದಾಗಿ ತಿಳಿಸಿದರಾದರೂ ನೌಕರರು ಬೇಡಿಕೆಗಳ ತುರ್ತು ಈಡೇರಿಕೆಗೆ ಒತ್ತಾಯಿಸಿ ಧರಣಿ ಮುಂದುವರಿಸಿದರು. ಇದರ ಪರಿಣಾಮವಾಗಿ ಅಧ್ಯಕ್ಷರು ಸಂಜೆ ಮತ್ತೆ ಬಂದು ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ತೀರ್ಮಾನಿಸಲಾಗಿದೆ. ಒಂದು ವಾರದೊಳಗೆ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು. ಅವರ ಖಚಿತ ಭರವಸೆ ನಂತರ ಸಂಘದ ಸಭೆಯು ಜಿಲ್ಲಾ ಅಧ್ಯಕ್ಷರಾದ ಗೋಪಾಲಕೃಷ್ಣ ಅರಳಹಳ್ಳಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನೌಕರರು ಹೋರಾಟವನ್ನು ತಾತ್ಕಾಲಿಕವಾಗಿ ಮುಂದೂಡಿ ತೀರ್ಮಾನ ಕೈಗೊಂಡರು.

ಸಂಘಟನೆಯ ಅ ಧ್ಯಕ್ಷರಾದ ಗೋಪಾಲಕೃಷ್ಣ ಅರಳಹಳ್ಳಿ, ಪ್ರಧಾನ ಕಾರ್ಯದರ್ಶಿ ಅಶ್ವಥ್‌ನಾರಾಯಣ್. ಎಸ್, (ಹುರುಳಿಚಿಕ್ಕನಹಳ್ಳಿ),

ಉಪಾಧ್ಯಕ್ಷರುಗಳಾದ ಗಣಪತಿಹೆಗಡೆ (ಹೆಸರಘಟ್ಟ), ಡಿ.ಎ.ಶ್ರೀನಿವಾಸಯ್ಯ (ದೊಡ್ಡಜಾಲ), ಹನುಮಂತರಾಯಪ್ಪ (ದಾಸನಪುರ), ರವಿಚಂದ್ರ(ಅಗರ), ಕೆಂಪಣ್ಣ(ಹುರುಳಿಚಿಕ್ಕನಹಳ್ಳಿ), ವೆಂಕಟರಾಮ(ಕೆ.ಗೊಲ್ಲಹಳ್ಳಿ), ಮಾದೇಶ್(ಆನೆಕಲ್ ಸಿಐಟಿಯು),ರಾಮಯ್ಯ(ವಣಕನಹಳ್ಳಿ),ಸಂಘಟನಾ ಕಾರ್ಯದರ್ಶಿ ನರಸಿಂಹಮೂರ್ತಿ (ಹೆಸರಘಟ್ಟ), ಖಜಾಂಜಿ ಎಸ್.ಕೃಷ್ಣಮೂರ್ತಿ(ಸೋಮನಹಳ್ಳಿ), ಸಹ ಕಾರ್ಯದರ್ಶಿಗಳಾದ ಹನುಮರಾಜ್ (ಕಸಘಟ್ಟಪುರ), ಲೋಕೇಶ್‌ಗೌಡ (ಚುಂಚನಕುಪ್ಪೆ), ಪಿ.ಸೋಮಣ್ಣ (ಮಾರೆನಹಳ್ಳಿ), ಹರೀಶ್ (ಮಾದಾವರ), ದಾಸಪ್ಪ (ಸೋಮನಹಳ್ಳಿ), ರೇಣುಕಾಪ್ರಸಾದ್ (ಚುಂಚನಕುಪ್ಪೆ), ಕೃಷ್ಣಮೂರ್ತಿ (ಮಾದಾವರ), ನವೀನ್ ಕುಮಾರ್ (ಮಾರೇನಹಳ್ಳಿ), ವಿಜಯಲಕ್ಷ್ಮಿ (ಆಲೂರು), ನಾರಾಯಣ (ಸಮಂದೂರು), ಸೂರ್ಯನಾರಾಯಣ(ಚೋಳ ನಾಯಕನಹಳ್ಳಿ) ಮುಂತಾದವರು ಚಳುವಳಿಯ ನೇತೃತ್ವ ವಹಿಸಿದ್ದರು. ●

ಬೆಳಗಾವಿಯಲ್ಲಿ ಹೋರಾಟ ಜಿಲ್ಲಾ ಪಂಚಾಯತ ಮುತ್ತಿಗೆ



ಸರ್ಕಾರದ ಆದೇಶ ಕೂಡಲೇ ಜಾರಿ ಮಾಡಲು 29.10.2014 ರಂದು ಬೆಳಗಾವಿ ಜಿಲ್ಲಾ ಪಂಚಾಯತ ಕಚೇರಿ ಮುತ್ತಿಗೆ ಹಾಕಿ ಗ್ರಾಮಪಂಚಾಯತ್ ನೌಕರರೆಲ್ಲರಿಗೂ ಅನುಮೋದನೆ, ಎಲ್ಲರಿಗೂ ವೇತನ ನೀಡಲು ಒತ್ತಾಯಿಸಲಾಯಿತು.

ನಿರಂತರ ಹೋರಾಟ ಮಾಡಿದ್ದರಿಂದ ಇವತ್ತು ಅತಂತ್ರ ಸ್ಥಿತಿಯಲ್ಲಿದ್ದ ಗ್ರಾಮ ಪಂಚಾಯತ ನೌಕರರಿಗೆ ಅನುಮೋದನೆ ನೀಡಲು ಸರ್ಕಾರ ಆದೇಶ ಹೊರಡಿಸಿದೆ. ಈ ಆದೇಶ ಜಿಲ್ಲೆಯ ಅಧಿಕಾರಿಗಳು ನಿಧಾನಗತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕೂಡಲೆ ರಾಜ್ಯ ಸರ್ಕಾರದ ಆದೇಶದನ್ವಯ ಎಲ್ಲರಿಗೂ ಅನುಮೋದನೆ ನೀಡಬೇಕೆಂದು ಒತ್ತಾಯಿಸಿ ಸಂಘದ ರಾಜ್ಯ ಉಪಾಧ್ಯಕ್ಷರಾದ ವ್ಹಿ.ಪಿ. ಕುಲಕರ್ಣಿ ಜಿಲ್ಲಾ ಪಂಚಾಯತ ಎದುರು ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಗ್ರಾಮ ಪಂಚಾಯತ ನೌಕರರಿಗೆ ಕನಿಷ್ಠ ವೇತನ ನೀಡಬೇಕೆಂದು, ರಜೆ, ಸೇವಾ ಪುಸ್ತಕ ಇಡಬೇಕೆಂದು ಸರ್ಕಾರದ ಆದೇಶವಿದ್ದರೂ ಸ್ಥಳೀಯ ಸರ್ಕಾರಗಳು (ಗ್ರಾ.ಪಂ.ಗಳು) ಸರ್ಕಾರದ ಆದೇಶವಾಗಲಿ, ಜಿಲ್ಲಾ ಪಂಚಾಯತ ಆದೇಶವಾಗಲಿ ಪಾಲಿಸದೇ ಪಂಚಾಯತ ಸಿಬ್ಬಂದಿಗಳನ್ನು ಗುಲಾಮರಂತೆ ದುಡಿಸಿಕೊಳ್ಳುತ್ತಿವೆ. 'ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ' ಎಂಬಂತೆ 'ಸರ್ಕಾರ ಆದೇಶ ಕೊಟ್ಟರೂ, ಪಿ.ಡಿ.ಓ ವೇತನ ನೀಡುತ್ತಿಲ್ಲ'. ಆದ್ದರಿಂದ ಸರ್ಕಾರದ ಆದೇಶ, ಜಿಲ್ಲಾ ಪಂಚಾಯತನ ಆದೇಶ ಜಾರಿ ಮಾಡದೆ ಪಿ.ಡಿ.ಓ / ಕಾರ್ಯದರ್ಶಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಕಾರ್ಯದರ್ಶಿ ಗೈಬು ಜೈನೆಖಾನ ಹೇಳಿದರು.

ಸುಮಾರು 2500 ಜನ ಸೇರಿ ಜಿಲ್ಲಾ ಪಂಚಾಯತ ಮುತ್ತಿಗೆ ಹಾಕಿದ್ದು ನೋಡಿ ಪೊಲೀಸರು ಆತಂಕಗೊಂಡಿದ್ದರು. ಸಿಬ್ಬಂದಿಗಳು ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದರು. "ಸರ್ ನಮ್ಮ ಅನುಮೋದನೆ ಮಾಡಾಕ ಸಾವಿರ ರೂಪಾಯಿ ಕೇಳಾಕತ್ಯಾರ್, ನಮಗ ಮೊದಲ 10-12 ತಿಂಗಳಿಂದ ಪಗಾರ ಇಲ್ಲಾ.. ನಾವ ಎಲ್ಲಿಂದ ಕೊಡಬೇಕು." ಅಂತಾ ಒಬ್ಬ ಸಿಬ್ಬಂದಿ ಹೇಳುತ್ತಿದ್ದಂತೆ

ಇನ್ನೊಬ್ಬ ಸಿಬ್ಬಂದಿ ಬಂದು "ಸರ್ ನನಗೆ ಏನು ಹೇಳದ-ಕೇಳದ ಕೆಲಸದಿಂದ ತೆಗದಾರ. ಹೆಂಗಾರ ಮಾಡಿ ನನಗ ಕೆಲಸಾ ಕೊಡಸ್ರಿ" ಅಂತಾ ಗೋಳಾಡುತ್ತಿದ್ದ.

ಗೋಕಾಕ ತಾಲೂಕಿನ ಅರಭಾಂವಿ, ಹುಕ್ಕೇರಿ ತಾಲೂಕಿನ ದಡ್ಡಿ ಗ್ರಾಮ ಪಂಚಾಯತಗಳ ಕಸ ಗುಡಿಸುವ ದಲಿತ ಹೆಣ್ಣು ಮಕ್ಕಳು ಬಂದು ಸರ್ ನಾವು 15-16 ವರ್ಷಗಳಿಂದ 'ಕಸ್ ಗುಡಿಸುವ ಕೆಲಸ ಮಾಡಾಕತ್ತಿವಿ ನಮ್ದು ಅನುಮೋದನೆ ಮಾಡ್ರಿ ಅಂತಾ ನಮ್ಮ ಸಾಹೇಬಗ ಹೇಳಾಕ ಹೋದ್ರ ಪಂಚಾಯತನ್ಯಾಗ ನಿಮ್ಮ ಹೆಸರ.. ಇಲ್ಲಾ ಅಂತಾ ಹೇಳಿ (ಠರಾವು ಇಲ್ಲ) ನಿಮ್ಮ ಹೆಸರ ಕಳಸಾಕ ಆಗುದಿಲ್ಲ ಅಂತಾ ಹೇಳ್ಯಾನ್ರಿ. ಇಷ್ಟ ವರ್ಷ ದುಡಿದ ನಮಗೇನ ಫಲ ಸಿಕ್ಕಾಂಗ ಆತರಿ." ಅಂತಾ ಕಣ್ಣೀರು ಹಾಕುತ್ತಿದ್ದರು.

ಸಾಹೇಬ್ರ ಜೊತೆ ಮಾತನಾಡಿ ಇದನ್ನು ಸರಿಪಡಿಸೋಣ ಎಂದು ಸಂಘದ ಮುಖಂಡರು ಸಮಾಧಾನ ಹೇಳುತ್ತಿದ್ದರು. ಕೊನೆಗೆ ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಚಳುವಳಿಯ ಮುಖಂಡರನ್ನು ಕ-ರೆದು ಸಮಸ್ಯೆಗಳನ್ನು ಕೇಳಿದರು.

ಸರ್ಕಾರ ಆದೇಶದಂತೆ (10.09.2014, 20.09.2014) ಎಲ್ಲರಿಗೂ ಅನುಮೋದನೆ ನೀಡಬೇಕೆಂದು, 18-20 ತಿಂಗಳಿಂದ ವೇತನವಿಲ್ಲದೇ ದುಡಿಯುತ್ತಿರುವ ನೌಕರರಿಗೆ ತಾತ್ಕಾಲಿಕ ಪರಿಹಾರವಾಗಿ 13 ನೇ ಹಣಕಾಸಿನ ಮೊತ್ತದಲ್ಲಿ ಕನಿಷ್ಠ 6 ತಿಂಗಳ ವೇತನ ನೀಡಲು, 1.1.2014 ರ ಜೇಷ್ಠತಾ ಪಟ್ಟಿ ಹೊರಡಿಸಬೇಕೆಂದು ಹಾಗೂ ನೇರ ನೇಮಕಾತಿ ಕೋಟಾದಲ್ಲಿ ಶೇ. 50 ರಷ್ಟು ಬಡ್ತಿ ನೀಡಬೇಕೆಂದು ಮಾತುಕತೆ ನಡೆಸಲಾಯಿತು. ಇದನ್ನು ಕೇಳಿದ ಸಿಇಓ ರವರು ತಮ್ಮ ಎಲ್ಲ ವಿಷಯಗಳನ್ನು ಪರಿಶೀಲಿಸಿ ಕೂಡಲೆ ಕ್ರಮ ತೆಗೆದುಕೊಳ್ಳುವದಾಗಿ ಸ್ಥಳಕ್ಕೆ ಬಂದು ಹೇಳಿದ ಮೇಲೆ ಕಾರ್ಯಕ್ರಮ ವಾಪಸ್ಸ ಪಡೆಯಲಾಯಿತು.

ಗ್ರಾಮ ಪಂಚಾಯತಗಳಲ್ಲಿ "ಸರಿಯಾಗಿ ನೀರು ಬಿಟ್ಟಿಲ್ಲ, ಕರ ವಸೂಲಿ ಮಾಡಿಲ್ಲ, ಕಸ ಗುಡಿಸಿಲ್ಲ ಅಂತಾ ಸುಳ್ಳು ನೆಪ ಮಾಡಿ ನಾವು ಹೇಳಿದಾಂಗ ಕೇಳಿಲ್ಲಾ, ನಮ್ಮ ಆದೇಶ ಪಾಲನೆ ಮಾಡಿಲ್ಲ ಅಂತಾ ನಮಗ ನೋಟೀಸ ಕೊಟ್ಟ ಕೆಲಸದಿಂದ ತಗಿ-ತಾರ ಆದ್ರ, ನಮಗ ಪಗಾರ (ಕನಿಷ್ಠ ವೇತನ) ಕೊಡಬೇಕಂತ ಸರ್ಕಾರ ಆದೇಶ ಮಾಡೇತಿ. ಅದನ್ನ ಜಾರಿ ಮಾಡದ ಅಧಿಕಾರಿಗಳಿಗೆ ನೋಟೀಸ ಕೊಟ್ಟ ಯಾಕ ಕೆಲಸದಿಂದ ತೆಗೆಯುದಿಲ್ಲ?" ಅಂತಾ ಸಿಬ್ಬಂದಿಗಳು ಪ್ರಶ್ನೆ ಮಾಡುತ್ತಿದ್ದರು.

ವರದಿ - ಗೈಬು ಜೈನೆಖಾನ ■

ಪಟ್ರಮೆ–ಕೊಕ್ಕಡ ರಸ್ತೆಗಾಗಿ ಡಿವೈಎಫ್ಐ ಪ್ರತಿಭಟನೆ ಅಧಿಕಾರಿಗಳಿಗೆ ದಿಗ್ಬಂಧನ :

ಅದು ಮಹಾಮಾರಿ ಎಂಡೋಸಲ್ಫಾನ್ ಪೀಡಿತ ಗ್ರಾಮಗಳ ಪಟ್ರಮೆ–ಕೊಕ್ಕಡ ರಸ್ತೆ. ಸುಮಾರು 13 ಕಿ.ಮೀ. ದೂರವಿರುವ ಈ ರಸ್ತೆ ಕಳೆದ 5–6 ವರ್ಷಗಳಿಂದ ಸಂಪೂರ್ಣ ನಾದುರಸ್ತಿಯಲ್ಲಿದೆ. 1904ರಲ್ಲಿಯೇ ಈ ರಸ್ತೆ ಅಸ್ತಿತ್ವದಲ್ಲಿತ್ತು, 1956ರಲ್ಲಿಯೇ ಈ ರಸ್ತೆ ದಾಮರೀಕರಣಗೊಂಡಿತ್ತು ಎಂಬುದಕ್ಕೆ ಇತಿಹಾಸದ ದಾಖಲೆಗಳೇ ಸಾಕ್ಷಿ ಹೇಳುತ್ತಿದೆ. ಇಂತಹ ಇತಿಹಾಸದ ಪುಟಗಳಲ್ಲಿ ಸ್ಥಾನ ಪಡೆದಂತಹ ಈ ರಸ್ತೆ ಈಗ ಇತಿಹಾಸ ಪಳಿಯುಳಿಕೆಯಂತೆ ಗೋಚರಿಸುವಂತಾಗಿದೆ. ಈ ರಸ್ತೆಯ ಅಭಿವೃದ್ಧಿ (ಉಳಿವು)ಗಾಗಿ ಈ ಭಾಗದ ಜನ ಇದೀಗ ಹೋರಾಟಕ್ಕೆ ಇಳಿದಿದ್ದಾರೆ.

ಪಟ್ರಮೆ–ಕೊಕ್ಕಡ ರಸ್ತೆಯ ಅಗಲೀಕರಣ ಮತ್ತು ಮರು ಡಾಮರೀಕರಣಕ್ಕೆ ಆಗ್ರಹಿಸಿ ಕಳೆದ ನಾಲ್ಕೈದು ವರ್ಷಗಳಿಂದ ನಡೆದ ಎಲ್ಲಾ ಗ್ರಾಮ ಸಭೆಗಳಲ್ಲಿ ನಿರ್ಣಯ ಕೈಗೊಂಡು ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟರೂ ಯಾವುದೇ ಪ್ರಯೋಜನವಾಗಿಲ್ಲ. ಒಂದು ಬಾರಿ ರಸ್ತೆ ಅಭಿವೃದ್ಧಿಗಾಗಿ ಗ್ರಾಮಸಭೆಯನ್ನೇ ಬಹಿಷ್ಕರಿಸಿದ ಪ್ರಸಂಗವು ನಡೆದಿತ್ತು. ಆದರೂ ವಿಭಾಗದ ಜನಪ್ರತಿನಿಧಿಗಳು, ಅಧಿಕಾರಿಗಳು ಜನತೆಯ ಬೇಡಿಕೆಗೆ ಸ್ಪಂದಿಸಬೇಕೆಂಬ ಸಾಮಾನ್ಯ ಕಾಳಜಿಯನ್ನು ವಹಿಸದಿರುವುದು ಜನಪ್ರತಿನಿಧಿ, ಅಧಿಕಾರಿಗಳ ಬೇಜವಾಬ್ದಾರಿಗೆ ಸಾಕ್ಷಿ.

ಇದೀಗ ಡಿವೈಎಫ್ಐ ಪಟ್ರಮೆ ಗ್ರಾಮ ಸಮಿತಿ ನೇತೃತ್ವದಲ್ಲಿ ಈ ರಸ್ತೆಯ ಅಭಿವೃದ್ಧಿಗಾಗಿ ಗ್ರಾಮಸ್ಥರು ಬೃಹತ್ ವಾಹನ ಜಾಥಾ–ಜನ ಚಳುವಳಿ ನಡೆಸಿ ಬೆಳ್ತಂಗಡಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ ಇಂಜಿನೀಯರಿಂಗ್ ಉಪ ವಿಭಾಗ ಕಛೇರಿ ಎದುರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಡಿವೈಎಫ್ಐ ಕರ್ನಾಟಕ ರಾಜ್ಯಾ ಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ ಸ್ವಾತಂತ್ರ್ಯ ದೊರೆತು 68 ವರ್ಷ ಕಳೆದರೂ ಇನ್ನೂ ಕೂಡಾ ಜನತೆ ಮೂಲಭೂತ ಸೌಲಭ್ಯಕ್ಕಾಗಿ ಹೋರಾಟ ಮಾಡಬೇಕಾದುದು ದುರಂತವೇ ಸರಿ. ಎಂಡೋಪೀಡಿತ ಪಟ್ರಮೆ, ಕೊಕ್ಕಡದಂತಹ ಗ್ರಾಮೀಣ ಪ್ರದೇಶದ ರಸ್ತೆಗೆ ಡಾಮರೀಕರಣದ ಭಾಗ್ಯ ಬಾರದಿರುವುದು ನಮ್ಮ ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿ ಎಂದು ವಿಷಾಧಿಸಿದರು. ಅವರು ಕನಿಷ್ಠ ರಸ್ತೆಗೆ ಡಾಮರೀಕರಣ ಮಾಡಲಾಗದ ಸರಕಾರದಿಂದ ಇತರ ಯಾವ ಯೋಜನೆಗಳನ್ನು ನೀರೀಕ್ಷಿಸಬಹುದು? ಎಂದು ಪ್ರಶ್ನಿಸಿದರು. ಅಭಿವೃದ್ಧಿ ಎಂದರೆ ಕೇವಲ ನಗರ ಪ್ರದೇಶದ ಮೂಲೆ ಮೂಲೆಗೂ ಕಾಂಕ್ರೀಟಿಕರಣ ಅಲ್ಲ. ಗ್ರಾಮೀಣ ಪ್ರದೇಶದ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ ಎಂಬುದನ್ನು ಸರಕಾರ ತಿಳಿಯಬೇಕಾಗಿದೆ ಎಂದ ಅವರು ಸರಕಾರ ಕೇವಲ ಐಟಿ–ಬಿಟಿ ಉದ್ಯೋಗಿಗಳ ನೆಮ್ಮದಿಯನ್ನು ಕಾಣುತ್ತಿದೆ. ಹಳ್ಳಿಯ ಜನರೆಂದರೆ ಕಷ್ಟದ ಹಾದಿಯಲ್ಲಿಯೇ ಬದುಕಬೇಕು ಎಂಬ ಸರಕಾರದ ನೀತಿಯ ವಿರುದ್ದ ಡಿವೈಎಫ್ಐ ನಿರಂತರ ಹೋರಾಟ ಮಾಡಲಿದೆ ಎಂದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ, ನ್ಯಾಯವಾದಿ ಬಿ.ಎಂ. ಭಟ್ ಮಾತನಾಡಿ ಶತಮಾನದ ಇತಿಹಾಸ ಇರುವ ಈ ರಸ್ತೆ ಅಸ್ತಿಪಂಜರದಂತಾಗಿ ಅಸ್ತಿತ್ವ ಕಳೆದುಕೊಳ್ಳುವಂತಾಗಿದೆ. ಗ್ರಾಮದ ಜನರ ತೆರಿಗೆಯನ್ನು ಪಡೆದು ಆ ಗ್ರಾಮದ ಜನರಿಗೆ ವಂಚನೆ ಮಾಡುತ್ತಿದೆ. ಕಳೆದ 5 ವರ್ಷಗಳಿಂದ ಹೋರಾಟ, ಮನವಿ ನೀಡಿದರೂ ಈ ಬಗ್ಗೆ ಗಮನ ಹರಿಸದ ಅಧಿಕಾರಿಗಳು ಜನಪ್ರತಿನಿಧಿಗಳನ್ನು ಎಚ್ಚರಿಸುವ ಕಾರ್ಯ ಮಾಡುವ ಅಗತ್ಯವಿದ್ದು ಈ ಪ್ರತಿಭಟನೆ ಸಾಂಕೇತಿಕವಾಗಿ ನಡೆಯುತ್ತಿದ್ದು ಬೇಡಿಕೆ ಈಡೇರಿಸದಿದ್ದರೆ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದರು.



ಡಿವೈಎಫ್ಐ ಮುಖಂಡ ಶ್ಯಾಮರಾಜ ಮಾತನಾಡಿ ಕಳೆದ ಹಲವಾರು ಗ್ರಾಮ ಸಭೆಗಳಲ್ಲಿ ಈ ಭಾಗದ ರಸ್ತೆಯ ಅಭಿವೃದ್ಧಿ ಮಾಡಿಯೇ ಸಿದ್ದ ಎಂದು ಅಧಿಕಾರಿಗಳು ಹೇಳುತ್ತಲೇ ಬಂದಿದ್ದು ಸಭೆ ಮುಗಿದ ನಂತರ ಇದರ ಕಾಳಜಿಯೇ ಇಲ್ಲವಾಗಿದೆ. ಜನರನ್ನು ಮೋಸಗೊಳಿಸಲು ಒಮ್ಮೆ 6 ಕಿ.ಮೀ. ರಸ್ತೆಗೆ 220 ಲಕ್ಷ ಅಂದಾಜು ವೆಚ್ಚ ಪ್ರಸ್ತಾವನೆ ಕಳುಹಿಸಲಾಗಿದೆ. ಮತ್ತೊಮ್ಮೆ 12 ಕಿ.ಮೀ. ರಸ್ತೆಗೆ 220 ಲಕ್ಷ ಅಂದಾಜು ವೆಚ್ಚ ಪ್ರಸ್ತಾವನೆ ಕಳುಹಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದಾರೆ. 6 ಕಿ.ಮೀ. ಹಾಗೂ 12 ಕಿ.ಮೀ. ಒಂದೇ ಮೊತ್ತದ ಅಂದಾಜು ವೆಚ್ಚ ಕಳುಹಿಸುವ ಅಧಿಕಾರಿಗಳಿಗೆ ಸಾಮಾನ್ಯ ಪ್ರಜ್ಞೆಯೇ ಇಲ್ಲವೇ ಎಂದು ವ್ಯಂಗ್ಯವಾಡಿದ ಅವರು ಇವರಿಂದ ರಸ್ತೆ ಅಭಿವೃದ್ಧಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಇದೀಗ 8 ಕೋಟಿ ರೂ.ಗಳ ಅಂದಾಜು ವೆಚ್ಚ ಕಳುಹಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದಾರೆ. ರಸ್ತೆ ಅಭಿವೃದ್ಧಿಗೊಳಿಸದೇ ಪ್ರತಿಭಟನೆ ಹಿಂಪಡೆಯುದಿಲ್ಲ ಎಂದರು.

ಅಧಿಕಾರಿಗಳಿಗೆ ದಿಗ್ಬಂಧನ :

ಪ್ರತಿಭಟನಾಕಾರರ ಜೊತೆ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜೀನಿಯರ್ ಸಿ.ಆರ್. ನರೇಂದ್ರ ಮಾತುಕತೆ ನಡೆಸಿದರು. ಈ ಸಂದರ್ಭ ಮಾತನಾಡಿದ ಇಂಜಿನೀಯರ್ ಅನುದಾನ ಬಿಡುಗಡೆ ಜನಪ್ರತಿನಿಧಿ, ಸರಕಾರದ ಕೆಲಸ ಅನುದಾನ ಬಿಡುಗಡೆಗೊಂಡ ಬಳಿಕ ಅದನ್ನು ಕಾರ್ಯರೂಪಕ್ಕೆ ತರುವುದು ಮಾತ್ರ ನನ್ನ ಜವಾಬ್ದಾರಿ ಎಂದರು. ಅಧಿಕಾರಿಯ ಈ ಮಾತು ಪ್ರತಿಭಟನಾಕಾರರನ್ನು ತೀವ್ರವಾಗಿ ಕೆರಳಿಸಿತು. ಅಧಿಕಾರಿಯನ್ನು ತೀವ್ರವಾಗಿ ತರಾಟೆಗೆ ತೆಗೆದು–ಕೊಂಡ ಪ್ರತಿಭಟನಾಕಾರರು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನ ಸರಿಯಲ್ಲ. ಈ ರೀತಿಯ ಮಾತನ್ನು ಕಳೆದ ಐದಾರು ವರ್ಷಗಳಿಂದ ಕೇಳುತ್ತಿದ್ದೇವೆ. ರಸ್ತೆ ದಾಮರೀಕರಣದ ಬಗ್ಗೆ ಲಿಖಿತ ಭರವಸೆ ಸಿಗದೆ ಇಲ್ಲಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದು ಕಛೇರಿಯ ಜಗುಲಿಯಲ್ಲಿಯೇ ಪ್ರತಿಭಟನೆ ಮುಂದುವರಿಸಿದರು. ಈ ಸಂದರ್ಭ ಪೊಲೀಸರು ಮಧ್ಯಪ್ರವೇಶಿಸಿ ಸರಕಾರಿ ಕೆಲಸ ಕಾರ್ಯಗಳಿಗೆ ಅಡ್ಡಿ ಪಡಿಸಬಾರದು ಎಂದು ಈ ರೀತಿ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಬೇಕಾದೀತು ಎಂದು ಎಚ್ಚರಿಸಿದರೂ ಪ್ರತಿಭಟನಾಕಾರರು ಮಾತ್ರ ಪೊಲೀಸರ ಯಾವುದೇ ಮಾತನ್ನು ಕೇಳದೆ ಅಧಿಕಾರಿಗಳಿಗೆ ದಿಗ್ಬಂಧನ ವಿಧಿಸಿದರು. ಈ ಸಂದರ್ಭ ಪೊಲೀಸರೊಂದಿಗೆ ಮಾತಿನ ಚಕಮಕಿಯು ನಡೆಯಿತು.

ಪಟ್ರಮೆ–ಕೊಕ್ಕಡ ರಸ್ತೆ ಡಾಮರೀಕರಣಕ್ಕೆ 1 ಕೋಟಿ ಬಿಡುಗಡೆಗೊಳಿಸಿ ತಿಂಗಳೊಳಗೆ 2ಳಿ ಕಿಲೋಮೀಟರ್ ರಸ್ತೆ ಡಾಮರೀಕರಣಕ್ಕೆ ಕ್ರಮ ಕೈಗೊಳ್ಳಲಾಗುವುದು, ಮಿಕ್ಕುಳಿದ ಅನುದಾನವನ್ನು ಬಿಡುಗಡೆಗೆ ತಿಂಗಳೊಳಗೆ ಪ್ರಯತ್ನಿಸಲಾಗುವುದು, ನಾಳೆಯೇ 20 ಲಕ್ಷ ಬಿಡುಗಡೆಗೊಳಿಸಿ ರಸ್ತೆಯ ಗುಂಡಿ ಮುಚ್ಚಿ ಕೆಎಸ್ಆರ್‌ಟಿಸಿ ಬಸ್ ಓಡಾಟಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಸಿ.ಆರ್. ನರೇಂದ್ರ ಭರವಸೆ ನೀಡಿದ ಬಳಿಕ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಯಿತು.

ಡಿ. 3 ರಂದು ಹೆದ್ದಾರಿ ತಡೆ :

ಅಧಿಕಾರಿಗಳು ನೀಡಿದ ಭರವಸೆಯಂತೆ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಕೊಕ್ಕಡ, ಪಟ್ರಮೆ ಗ್ರಾಮಸ್ಥರು ಡಿಸೆಂಬರ್ 3ರಂದು ಗೋಳಿತೊಟ್ಟು ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟಿಸಬೇಕಾದೀತೆಂದು ಡಿವೈಎಫ್ಐ ಪಟ್ರಮೆ ಗ್ರಾಮ ಸಮಿತಿ ಅಧ್ಯಕ್ಷ ಧನಂಜಯ ಗೌಡ ಎಚ್ಚರಿಸಿದ್ದಾರೆ.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮುಖಂಡರುಗಳಾದ ಶಿವಕುಮಾರ್, ಶೇಖರ್ ಲ್ಯಾಲ, ಡಿವೈಎಫ್ಐ ಮುಖಂಡರುಗಳಾದ ಧನಂಜಯ ಗೌಡ, ಝಕಾರಿಯಾ, ಮುಹಮ್ಮದ್ ಅನಾಸ್, ಹರೀಶ್ ಪಟ್ರಮೆ, ಕೃಷ್ಣಪ್ಪ ಕಲ್ಲಾಜೆ, ಹನೀಫ್, ವಿಠಲ ಮಲೆಕುಡಿಯ, ಯುವರಾಜ ಹಾಗೂ ನೂರಾರು ಗ್ರಾಮಸ್ಥರು ಭಾಗವಹಿಸಿದ್ದರು.

ಪ್ರತಿಭಟನೆಗೆ ಮೊದಲು ಪಟ್ರಮೆ ವಿಷ್ಣುಮೂರ್ತಿ ದೇವಸ್ಥಾನದ ಬಳಿಯಿಂದ ನೂರಾರು ವಾಹನಗಳಲ್ಲಿ ಬೃಹತ್ ವಾಹನಜಾಥ ನಡೆಯಿತು. ●

ನಿವೇಶನ ರಹಿತರ ಸಮಾವೇಶ......

ಪುಟ 5 ರಿಂದ

ಪೂರ್ಣಿಮಾರವರಿಗೆ ಹಸ್ತಾಂತರಿಸಲಾಯಿತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮರವಂತೆ ಗ್ರಾಮ ಸಮಿತಿಗೆ ಮನ್ಸೂರ್ ಇಬ್ರಾಹಿಂ (ಅಧ್ಯಕ್ಷ) ವೆಂಟೇಶ ತೋಳಾರ್ (ಕಾರ್ಯದರ್ಶಿ), ಗ್ರೇಶನ್ ಕ್ರಾಸ್ತಾ, ಸುಶೀಲ, ಶಾರದ, ಬೇಬಿ, ಲಲಿತ, ಶ್ಯಾಮಲ, ಉದಯ ಮರವಂತೆ, ಶೇಖರ, ಸುಮತಿ, ಸದಾನಂದ (ಸದಸ್ಯರು) ಸರ್ವಾನುಮತದಿಂದ ಆಯ್ಕೆಯಾದರು.

ಕುಂಭಾಶಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ

ಅದೇ ರೀತಿ ಕುಂಭಾಶಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡ ನಿವೇಶನ ರಹಿತರು ಭೂಮಿಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಕುಂಭಾಶಿ ಗ್ರಾಮ ಪಂಚಾಯತ್ ಕಛೇರಿ ಎದುರು ಜರಗಿದ ನಿವೇಶನ ರಹಿತರ ಬೃಹತ್ ಸಮಾವೇಶದಲ್ಲಿ – ಕೃಷಿಕೂಲಿಕಾರರ ಸಂಘದ ಕುಂಭಾಶಿ ಗ್ರಾಮ ಸಮಿತಿಗೆ ಕಾಂಚನಮಾಲ ವಿನಾಯಕನಗರ (ಅಧ್ಯಕ್ಷೆ), ರಾಮಕೃಷ್ಣ ಹೇರಳೆ ಸ್ಥಳೀಯ ಗ್ರಾಮ ಪಂಚಾಯತ್ ಸದಸ್ಯೆ, ರಾಮದಾಸ ಆಚಾರಿ, ಗೋಪಾಲ ಪೂಜಾರಿ, ಮಾಧವ ಪೂಜಾರಿ, ಸುಮಂಗಲ ಸಂತೋಷ, ಅಕ್ಕಣಿ ಕೊರವಾಡಿ, ರೇಣುಕ ಶಂಕರ ಹನುಮಂತ ಪೂಜಾರಿ, ಯೋಗೀಶ ದತ್ತಾತ್ರೇಯ, ಕೃಷ್ಣ ಓಣಿಮನೆ, ಮೋಹನ, ಕೆ.ಕೃಷ್ಣ ಪೂಜಾರಿ, ಹಸೀನಾಬಿ, ವಜನ, ಗೀತಾ, ದಿನೇಶ, ಮಾಧವ, ಸವಿತಾ, ಸಂಶಾದ್ (ಸದಸ್ಯರು) ಇವರು ಸರ್ವಾನುಮತದಿಂದ ಆಯ್ಕೆಯಾದರು




ವರದಿ : ವೆಂಕಟೇಶ ಕೋಣಿ ●

ನರೇಗ ಮೇಲೆ ದಾಳಿ: ಗ್ರಾಮೀಣ ಬಡವರಿಗೆ ಕೆಲಸದ ಗ್ಯಾರಂಟಿ ನೀಡುವ ಕಾನೂನನ್ನು ಕಂಟ್ರಾಕ್ಟರುಗಳಿಗೆ ಕಮಿಶನ್‌ಗಳ ಗ್ಯಾರಂಟಿ ನೀಡುವ ಕಾನೂನಾಗಿ ಪರಿವರ್ತಿಸುವ ಹುನ್ನಾರ

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



ನಾಲ್ಕು ತಿಂಗಳ ಹಿಂದೆ ಹೊಸದಾಗಿ ಅಧಿಕಾರ ವಹಿಸಿಕೊಂಡ ಬಿಜೆಪಿ ಹಣಕಾಸು ಮಂತ್ರಿಗಳು ಸಂಸತ್ತಿಗೆ ಸಲ್ಲಿಸಿದ 'ಆರ್ಥಿಕ ಸರ್ವೇಕ್ಷಣೆ'ಯಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನ(ಎಂಜಿನರೇಗ) ಅಡಿಯಲ್ಲಿ 4.5 ಕೋಟಿ ಕುಟುಂಬಗಳಿಗೆ ವರ್ಷದಲ್ಲಿ ಸರಾಸರಿ 45 ದಿನಗಳ ಉದ್ಯೋಗವನ್ನು ಸರಾಸರಿ 132 ರೂ. ದಿನಗೂಲಿಯ ಮೇಲೆ ಒದಗಿಸಲಾಗಿದೆ ಎಂದು ತಿಳಿಸಿದರು,

ಇದು ಒಂದು ಗ್ರಾಮೀಣ ಕುಟುಂಬಕ್ಕೆ ಕನಿಷ್ಟ ಕೂಲಿ ಆಧಾರದಲ್ಲಿ ಕನಿಷ್ಟ 100ದಿನಗಳ ಕೆಲಸದ ಗ್ಯಾರಂಟಿ ಕೊಡುವ ಜಗತ್ತಿನ ಏಕೈಕ ಕಾನೂನು ಎಂಬ ಹೆಗ್ಗಳಿಕೆ ಹೊಂದಿದೆ. ಆದರೆ ಹೊಸ ಉದ್ಯೋಗಾವಕಾಶಗಳನ್ನು ನಿರ್ಮಿಸಿ 'ಒಳ್ಳೆಯ ದಿನ'ಗಳನ್ನು ತರುವ ಭರವಸೆ ನೀಡಿರುವ ಸರಕಾರ, ಈಗ ಆ ವಚನವನ್ನು ಅರ್ಧದಷ್ಟು ಮಾತ್ರ ಈಡೇರಿಸಿರುವ ಕಾನೂನನ್ನು ಪೂರ್ಣವಾಗಿ ಈಡೇರಿಸುವಂತೆ ಮಾಡುವ ಬದಲು ಅದನ್ನು ಮೊಟಕುಗೊಳಿಸಿ ದೇಶದ 200 ಅತಿ ಹಿಂದುಳಿದ ಜಿಲ್ಲೆಗಳಿಗೆ ಸೀಮಿತಗೊಳಿಸ ಹೊರಟಿದೆ. ಇದು ಸಿಪಿಐ(ಎಂ) ಮುಖಂಡರಾದ **ಬೃಂದಾ ಕಾರಟ್ ಹೇಳುವಂತೆ ಅದರ 'ಅಭಿವೃದ್ಧಿ' ಅಜೆಂಡಾದ ನಿಜ ಹೂರಣವನ್ನು ಬಯಲಿಗೆಳೆಯುತ್ತದೆ.**

ಈ ರೀತಿ ಬಡವರ ಪರವಾಗಿರುವ ಒಂದು ಕಾನೂನನ್ನು ಮೊಟಕುಗೊಳಿಸುವುದಷ್ಟೇ ಅಲ್ಲ, ಅದಕ್ಕೆ ಕಾನೂನಿನ ಪ್ರಕಾರ ಕೊಡಬೇಕಾದ ಹಣವನ್ನು ಅರ್ಧದಷ್ಟು ಇಳಿಸಲು, ಮತ್ತು ಈ ರೀತಿ ಕಡಿತ ಮಾಡಿದ ಹಣದಲ್ಲೂ ಕೂಲಿಗೆ ನೀಡುವ ಪ್ರಮಾಣವನ್ನು ಇನ್ನೂ 10ಶೇ.ದಷ್ಟು ಇಳಿಸಲು ಈ ಸರಕಾರ ನಿರ್ಧರಿಸಿದೆ.

ಮೊದಲ ದಾಳಿಯೆಂದರೆ ಈ ಕಾನೂನಿನ ಜಾರಿಗೆ ಕೇಂದ್ರ ಸರಕಾರ ಒದಗಿಸಬೇಕಾದ ಮೊತ್ತದಲ್ಲಿ ತೀವ್ರ ಕಡಿತ. 2013–14 ರಲ್ಲಿ ಈ ಕಾನೂನಿನ ಅಡಿಯಲ್ಲಿ 219.72 ಕೋಟಿ 'ವ್ಯಕ್ತಿದಿನ' (ಒಬ್ಬ ವ್ಯಕ್ತಿಗೆ ಇಂದು ದಿನದ ಕೆಲಸ) ಗಳಷ್ಟು ಉದ್ಯೋಗ ನಿರ್ಮಾಣವಾಗಿತ್ತು. 2014–15ರಲ್ಲಿ ಇದು 227 ಕೋಟಿ 'ವ್ಯಕ್ತಿದಿನ" ಆಗಬಹುದು ಎಂದು ಅಂದಾಜು ಮಾಡಲಾಗಿದೆ. ಅಂದರೆ ಇದಕ್ಕೆ ಕೇಂದ್ರ ಸರಕಾರ 61,000 ಕೋಟಿ ರೂ.ಗಳನ್ನು ಒದಗಿಸಬೇಕಾಗುತ್ತದೆ. ಅಲ್ಲದೆ ಕಳೆದ ವರ್ಷದ ಕೂಲಿ ಬಾಕಿ 3,000 ಕೋಟಿ ರೂ. ಸೇರಿ 64ಸಾವಿರ ಕೋಟಿ ರೂ. ಗಳನ್ನು ಕೊಡಬೇಕಾಗಿದೆ.

ಆದರೆ 'ಒಳ್ಳೆಯ ದಿನಗಳ' ಸರಕಾರದ ಬಜೆಟ್ ಒದಗಿಸಿರುವುದು ಕೇವಲ 33,500 ಕೋಟಿ ರೂ.ಗಳು ಅಂದರೆ ಸುಮಾರು 52ಶೇ. ದಷ್ಟು ಮಾತ್ರ. ಇದಕ್ಕನುಗುಣವಾಗಿ ರಾಜ್ಯಕ್ಕೆ ನೀಡುವ ಮೊತ್ತಗಳಲ್ಲಿ ತೀವ್ರ ಕಡಿತವಾಗಿದೆ.

ಉದಾಹರಣೆಗೆ **ಕರ್ನಾಟಕಕ್ಕೆ ನೀಡಿರುವ ಮೊತ್ತವನ್ನು 3,150 ಕೋಟಿ ರೂ.ಗಳಿಂದ 1,700 ಕೋಟಿ ರೂ.ಗಳಿಗೆ ಇಳಿಸಲಾಗುತ್ತಿದೆ,** ಹೀಗೆ ಮಾಡಬಾರದು, ಇದು ಒಂದು ಪಕ್ಷದ ಯೋಜನೆಯಲ್ಲ, ಸರಕಾರದ ಯೋಜನೆ ಎಂದು ನಮ್ಮ ರಾಜ್ಯದ ಪಂಚಾಯತೀ ರಾಜ್ಯ ಮಂತ್ರಿಗಳು ಟೀಕಿಸಿದ್ದಾರೆ.

ತ್ರಿಪುರಾ ಈ ಕಾನೂನನ್ನು ಅತ್ಯುತ್ತಮವಾಗಿ ಪಾಲಿಸುತ್ತಿರುವ ರಾಜ್ಯ ಎಂದು ಎಲ್ಲರೂ ಒಪ್ಪುತ್ತಿದ್ದಾರೆ. ಅದಕ್ಕೆ ನೀಡಬೇಕಾದ ಮೊತ್ತವನ್ನು 1,407 ಕೋಟಿ ರೂ.ಗಳಿಂದ ಕೇವಲ 660 ಕೋಟಿ ರೂ.ಗಳಿಗೆ ಕಡಿತ ಮಾಡಲಾಗಿದೆ, ಅಂದರೆ ಅರ್ಧದಷ್ಟೂ ಇಲ್ಲ. ಇಡೀ ದೇಶಕ್ಕೆ 48ಶೇ. ಕಡಿತ ಮಾಡಿದ್ದರೆ, ಬಡ ಬುಡಕಟ್ಟು ಜನಗಳೇ ಹೆಚ್ಚಾಗಿ ಇರುವ ಒಂದು ಪ್ರದೇಶಕ್ಕೆ 53ಶೇ. ಕಡಿತ! ಹೀಗಿದೆ 'ಒಳ್ಳೆಯ ದಿನಗಳ' ನ್ಯಾಯ!

ಹಿಂದಿನ ಯುಪಿಎ ಸರಕಾರ ಕೂಡ ತಾನೇ ತಂದ ಕಾನೂನಿಗೆ ಅಗತ್ಯವಾದ ಹಣನೀಡಿಕೆಯಲ್ಲಿ ಕಡಿತ ಮಾಡುತ್ತಾ ಬಂದಿದ್ದರೂ, ಮಿತಿ ಹಾಕಿರಲಿಲ್ಲ. ಹಣನೀಡಿಕೆಯನ್ನು ಮುಂದೂಡುತ್ತಾ ಬಂದಿತ್ತು. ಆದರೆ 'ನಿರ್ಣಾಯಕ' ಎಂದು ಹೊಗಳಿಸಿಕೊಳ್ಳುತ್ತಿರುವ ಸರಕಾರ ಇನ್ನೂ ಮುಂದೆ ಹೋಗಿ ಮಿತಿಯನ್ನೇ ಹಾಕಿದೆ.

ಇನ್ನು, **ಎರಡನೇ ದಾಳಿಯೆಂದರೆ, ಕೂಲಿಗೆ ನೀಡುವ ಅನುಪಾತವನ್ನು ಇಳಿಸಿ ಯಂತ್ರಗಳು ಮುಂತಾದ ಸಾಮಗ್ರಿಗಳಿಗೆ ಮಾಡಬಹುದಾದ ವೆಚ್ಚದ ಅನುಪಾತವನ್ನು ಹೆಚ್ಚಿಸುವುದು.** ಈ ಅಂಕಣದಲ್ಲಿ ಈ ಹಿಂದೆ ಹೇಳಿರುವಂತೆ, ಇದುವರೆಗೆ ಈ ಕಾನೂನಿನ ಅಡಿಯಲ್ಲಿ ಈ ಯೋಜನೆಗೆ ಮಾಡುವ ಖರ್ಚಿನಲ್ಲಿ 60ಶೇ.ದಷ್ಟು ಕೂಲಿಗೆ ಹೋಗಬೇಕು 40ಶೇ. ಮಾತ್ರ ಸಲಕರಣೆ–ಸಾಮಗ್ರಿಗಳಿಗೆ ಹೋಗಬೇಕು. ಬಿಜೆಪಿ ಸರಕಾರ ಅದನ್ನು 49ಶೇ.ಕ್ಕೆ ಏರಿಸಿ ಕೂಲಿಗೆ ನೀಡುವ ಪ್ರಮಾಣವನ್ನು 51ಶೇ.ಕ್ಕೆ ಇಳಿಸುತ್ತಿದೆ. ಅಂದರೆ ಒಟ್ಟು ಮೊತ್ತದಲ್ಲಿ 48ಶೇ. ಕಡಿತ ಮಾಡುವುದಲ್ಲದೆ, ಅದರಲ್ಲೂ ಕೂಲಿಗೆ ಸಿಗುವ ಮೊತ್ತದಲ್ಲಿ ಮತ್ತೆ 9ಶೇ. ಕಡಿತ ಮಾಡುತ್ತಿದೆ. ಅಂದರೆ ಉದ್ಯೋಗ ನಿರ್ಮಾಣದ ವಾಸ್ತವವಾಗಿ ಈಗ ಸಾಮಗ್ರಿ–ಸಲಕರಣೆಗಳಿಗೆ ಆಗುತ್ತಿರುವ ಸರಾಸರಿ ಖರ್ಚು 23 ಶೇ. ಮಾತ್ರ. ಆದರೂ ಇದರ ಅನುಪಾತವನ್ನು 40ಶೇ.ದಿಂದ 49ಶೇ. ಕ್ಕೆ ಏರಿಸುವ ಅಗತ್ಯವಾದರೂ ಏನು?

ಮುಖ್ಯವಾಗಿ, ಇದು ಯಂತ್ರಸಾಮಗ್ರಿಗಳ ಮೂಲಕ ಈ ಯೋಜನೆಯೊಳಕ್ಕೆ ಕಾಂಟ್ರಾಕ್ಟರುಗಳ ಪ್ರವೇಶಕ್ಕೆ ಅವಕಾಶ ನೀಡುವ ಹುನ್ನಾರ. ಈ ಮೂಲಕ 'ಸಾಧ್ಯವಿದ್ದಷ್ಟೂ ದೈಹಿಕ ಶ್ರಮವನ್ನೇ ಬಳಸಬೇಕು, ದೈಹಿಕ ಶ್ರಮವನ್ನು ಹೊರದಬ್ಬುವ ಯಂತ್ರಗಳ ಬಳಕೆಯನ್ನು ಮಾಡಬಾರದು' ಎಂಬ ಈ ಕಾನೂನಿನ ಅಂಶವನ್ನು ಬುಡಮೇಲು ಮಾಡಲಾಗುತ್ತಿದೆ.

ಅಂದರೆ ಕೆಲಸದ ಗ್ಯಾರಂಟಿ ನೀಡುವ ಈ ಕಾನೂನನ್ನು ಮೋದಿ ಸರಕಾರ ಕಂಟ್ರಾಕ್ಟರುಗಳಿಗೆ ಕಮಿಶನ್‌ಗಳ ಗ್ಯಾರಂಟಿ ನೀಡುವ ಕಾನೂನಾಗಿ ಪರಿವರ್ತಿಸುತ್ತಿದೆ ಎಂದು ಬೃಂದಾ ಕಾರಟ್ ಟಿಪ್ಪಣಿ ಮಾಡಿದ್ದಾರೆ.


ಇದಲ್ಲದೆ ಈ ಕಾನೂನಿನ ಇನ್ನೂ ಹಲವು ಅಂಶಗಳನ್ನು ಉಲ್ಲಂಘಿಸಲಾಗುತ್ತಿದೆ. **ಕೂಲಿ ಪಾವತಿಯಲ್ಲಿ ವಿಳಂಬ** ಅಂತವುಗಳಲ್ಲಿ ಒಂದು. 15 ದಿನಗಳ ಒಳಗೆ ಮಾಡಿದ ಕೆಲಸಕ್ಕೆ ಕೂಲಿ ನೀಡಬೇಕು ಎಂದಿದ್ದರೂ 60ಶೇ. ಸಂದರ್ಭಗಳಲ್ಲಿ ಕೂಲಿಯಲ್ಲಿ ವಿಳಂಬವಾಗುತ್ತಿದೆ, ಈ ವಿಳಂಬ 21 ದಿನಗಳಿಂದ ಹಿಡಿದು ಆರು ತಿಂಗಳ ವರೆಗೂ ಹೋಗುತ್ತದೆ. ಮೋದಿ ಸರಕಾರ ಈ ವಿಳಂವನ್ನೇನೋ 'ಖಂಡಿಸಿದೆ'. ಆದರೆ, ಸರಿಪಡಿಕೆ ಕ್ರಮ ತದ್ವಿರುದ್ಧ ದಿಕ್ಕಿನಲ್ಲಿ. ವಾಸ್ತವವಾಗಿ ಕೂಲಿ ವಿಳಂಬಕ್ಕೆ ಮುಖ್ಯ ಕಾರಣ ಕೇಂದ್ರ ಸರಕಾರ ಮೊತ್ತದ ವರ್ಗಾವಣೆಯಲ್ಲಿ ಮಾಡುತ್ತಿರುವ ವಿಳಂಬ.

ಅದನ್ನು ಸರಿಪಡಿಸುವ ಬದಲು ಈ ಸರಕಾರದ 'ಕಾರ್ಯಕ್ರಮ ಪರಾಮರ್ಶೆ ಸಮಿತಿ' ಕೈಗೊಂಡ ನಿರ್ಧಾರ ನೋಡಿ: "ಎನ್‌ರೇಗ ತಂತ್ರಾಂಶದಲ್ಲಿ 'ನಿಧಿ ವರ್ಗಾವಣೆ ಆದೇಶ'ವನ್ನು ಬ್ಯಾಂಕ್. ಅಂಚೆ ಕಚೇರಿಯಲ್ಲಿ ಹಣವಿಲ್ಲದಿದ್ದರೂ ಸಿದ್ಧಪಡಿಸಲು ಅವಕಾಶ ನೀಡಬೇಕು. ಇದರಿಂದ ಇಂತಹ ಆದೇಶಗಳ ಸಾಲು ಉಂಟಾಗಿ, ವಿಳಂಬಕ್ಕೆ ಪರಿಹಾರ ಲೆಕ್ಕ ಹಾಕುವುದು ನಿಲ್ಲುತ್ತದೆ."! ಅಂದರೆ ಕೂಲಿ ಮಾಡಿದವರ ಖಾತೆಗೆ ಪಾವತಿಯಾಗದಿದ್ದರೂ ಹಣ ವರ್ಗಾವಣೆ ಆದೇಶವಂತೂ ತಯಾರಾಗಿರುತ್ತದೆ!

ಹೀಗಿದೆ, ದೇಶದಲ್ಲಿ ಹೂಡಿಕೆದಾರಿಗೆ ಒಂದು ಒಳ್ಳೆಯ ವಾತಾವರಣ ಕಲ್ಪಿಸಲು ಧಾವಿಸಿದ ಸರಕಾರ ಹೀಗಿದೆ ಬಡ ಗ್ರಾಮೀಣ ಕೂಲಿಕಾರರ ಬದುಕಿನ ಬಗ್ಗೆ ತೋರಿಸಿರುವ ಕಾಳಜಿ!

ಉಳ್ಳವರ 'ಅಭಿವೃದ್ಧಿ'ಯಾದರೆ ಅದರ ಫಲಗಳು ಕೆಳಕ್ಕೆ ತೊಟ್ಟಿಕ್ಕಿ ಬಡವಿಭಾಗಗಳಿಗೂ ಅದರ ಪ್ರಯೋಜನ ದಕ್ಕುತ್ತದೆ ಎಂಬುದು ಮೋದಿ ಸರಕಾರ ಅನುಸರಿಸುತ್ತಿರುವ 'ಅಭಿವೃದ್ಧಿ' ಮಾದರಿ ಎಂಬುದು ಇದರಿಂದ ಮತ್ತಷ್ಟು ಸ್ಪಷ್ಟವಾಗುತ್ತದೆ.

ಇದು ಗ್ರಾಮೀಣ ಬಡವರ ಹಕ್ಕುಗಳು ಮತ್ತು ಬದುಕಿನ ಮೇಲೆ ಒಂದು ತೀವ್ರ ದಾಳಿ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಖಂಡಿಸಿದೆ. **ಈ ದಾಳಿಗಳನ್ನು ಪ್ರತಿರೋಧಿಸಲು ಡಿಸೆಂಬರ್ 2ರಂದು ದಿಲ್ಲಿಯಲ್ಲಿ ಬೃಹತ್ ಧರಣಿ ನಡೆಸಲು ಅದು ಕರೆ ನೀಡಿದೆ. ತ್ರಿಪುರಾದ ಮುಖ್ಯಮಂತ್ರಿಗಳು ಇದರ ನೇತೃತ್ವ ವಹಿಸುತ್ತಾರೆ.**



ಬಿಜೆಪಿಯ ಅಚ್ಛೇದಿನ್ ನಮ್ಮ ವರೆಗೂ ತೊಟ್ಟಿಕ್ಕಿ ಬರಬಹುದೇ?
–'ದಿ ಹಿಂದು'ನಲ್ಲಿ ಕೇಶವನ್

ಮತ್ತೆ ಖಾಸಗಿ ಸೂರೆಗೆ ಕಲ್ಲಿದ್ದಲಿನ ಇ–ಹರಾಜು

ದೇಶದ ಸರ್ವೋಚ್ಚ ನ್ಯಾಯಾಲಯ ನವ–ಉದಾರೀಕರಣದ ಎರಡು ದಶಕಗಳಲ್ಲಿ ಖಾಸಗಿಯವರಿಗೆ ಕಲ್ಲಿದ್ದಲು ಗಣಿಗಳ ನೀಡಿಕೆ ಕಾನೂನುಬಾಹಿರ ಎಂದು 214 ಬ್ಲಾಕುಗಳ ನೀಡಿಕೆಯನ್ನು ರದ್ದು ಮಾಡಿದಾಗ ವಿದ್ಯುತ್ ಉತ್ಪಾದನೆ, ರಸಗೊಬ್ಬರ ಮತ್ತು ಸಿಮೆಂಟ್ ವಲಯದ ಖಾಸಗಿಯವರಿಗೆ ಕೊಡಮಾಡಿದ ಈ ಬ್ಲಾಕುಗಳನ್ನು ಅವಕ್ಕೆ ನೀಡಿದ ಉದ್ದೇಶಕ್ಕೆ ಬಳಸದೆ ಬಂಡವಾಳ ಎತ್ತಲು ಮತ್ತು ಇತರ ಸಟ್ಟಾಕೋರ ವ್ಯವಹಾರಗಳಿಗೆ ಬಳಸಿದ್ದು ಕಂಡು ಬಂದಿತ್ತು. ಆದರೂ ಈಗ ಮೋದಿ ಸರಕಾರ ಕಲ್ಲಿದ್ದಲು ಕ್ಷೇತ್ರದಲ್ಲಿ ಈ ತೀರ್ಪಿನಿಂದ ಉಂಟಾಗಿರುವ 'ಅವ್ಯವಸ್ಥೆ'ಯನ್ನು ಸರಿಪಡಿಸುವ ಹೆಸರಿನಲ್ಲಿ ಮತ್ತೆ ಅದೇ ಖಾಸಗಿಯವರಿಗೆ ಇ–ಹರಾಜು ಮಾಡುವ ನಿರ್ಧಾರ ಮಾಡಿದೆ.

ಇದು 1973ರ ಕಲ್ಲಿದ್ದಲು ರಾಷ್ಟ್ರೀಕರಣ ಕಾನೂನನ್ನು ಸಂಪೂರ್ಣವಾಗಿ ನಿರರ್ಥಕಗೊಳಿಸುವ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಸರ್ವೋಚ್ಚ ನ್ಯಾಯಾಲಯ ಈಗ ದೃಢಪಡಿಸಿರುವಂತೆ, ಈ ಅಮೂಲ್ಯ ಸಂಪನ್ಮೂಲ ರಾಷ್ಟ್ರೀಯ ಆಸ್ತಿಯಾಗಿದ್ದು ದೇಶದ ವಿದ್ಯುತ್ ಶಕ್ತಿಯ ಅಗತ್ಯಗಳನ್ನು ಪೂರೈಸಲು ಅಗತ್ಯ ಎಂದು ಈ ಕಾನೂನನ್ನು ತರಲಾಗಿತ್ತು. ಈಗ ಈ ಇ–ಹರಾಜಿನಿಂದ ಆ ಗುರಿಯನ್ನು ಕೈಬಿಟ್ಟಂತಾಗುತ್ತದೆ. ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರದಿಂದ ಹಿಡಿದು ಎಲ್ಲ ಕೇಂದ್ರ ಸರಕಾರಗಳು ಈ ಕಾನೂನನ್ನು ದುರ್ಬಲಗೊಳಿಸುತ್ತ ಬಂದಿರುವುದರ ಪರಿಣಾಮಗಳನ್ನು ದೇಶ ಈಗಾಗಲೇ ಕಂಡಿದೆ.

ಇದೇನೇ ಇರಲಿ, 1973ರ ಕಾನೂನನ್ನು ರದ್ದು ಮಾಡುವ ಒಂದು ಶಾಸನವನ್ನು ಸಂಸತ್ತು ಅಂಗೀಕರಿಸದೆ ಇಂತಹ ಇ–ಹರಾಜನ್ನು ಕೈಗೊಳ್ಳುವುದು ಸಾಧ್ಯವಿಲ್ಲ. ಸರಕಾರ 1973ರ ಈ ಕಾನೂನನ್ನು ಪ್ರಾಮಾಣಿಕತೆಯಿಂದ ಜಾರಿಗೊಳಿಸಬೇಕು, ದೇಶದ ಎಲ್ಲ ಕಲ್ಲಿದ್ದಲು ಗಣಿಗಾರಿಕೆಯನ್ನು ಕೈಗೊಳ್ಳುವ ಅಧಿಕಾರವನ್ನು ಕೋಲ್ ಇಂಡಿಯಾ–ಕ್ಕೇ ನೀಡಬೇಕು, ಜನತೆಗೆ ವಿದ್ಯುತ್ ಒದಗಿಸಲು ಇವನ್ನು ಸಾರ್ವಜನಿಕ ವಲಯ ಮತ್ತು ರಾಜ್ಯ ವಿದ್ಯುತ್ ಮಂಡಳಿಗಳಿಗೆ ಹಂಚಿದ ನಂತರ ಉಳಿದವನ್ನು ಮಾತ್ರವೇ ಖಾಸಗಿಯವರಿಗೆ ಬಹಿರಂಗ ಮಾರುಕಟ್ಟೆಯಲ್ಲಿ ಮಾರಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

¢èvÀ®Ä¦zÀPÉÆÃªÀÄÄzsÀÄæ«ÃPÀgÀtzÀ¥ÀæAiÀÄvÀß 'ಅಭಿವೃದ್ಧಿ' ಅಜೆಂಡಾದ ಆಚೆ

ದೇಶದ ರಾಜಧಾನಿಯ ತ್ರಿಲೋಕಪುರಿ ಪ್ರದೇಶದಲ್ಲಿ ದೀಪಾವಳಿಯ ರಾತ್ರಿ ಕೆಲವು ಮಂದಿ ಹಬ್ಬಿಸಿದ ಸುಳ್ಳು ಸುದ್ದಿ ಪರಸ್ಪರ ಕಲ್ಲು–ಇಟ್ಟಿಗೆ ತೂರಾಟ ಮತ್ತು ಅಂತಿಮವಾಗಿ ಮೂರು ದಿನಗಳ ಕರ್ಫ್ಯೂವರೆಗೂ ಮುಟ್ಟಿತು. ಹಲವು ಅಂಗಡಿಗಳು ಬೆಂಕಿಗಾಹುತಿಯಾದವು.

ಈ ಪ್ರದೇಶಕ್ಕೆ ಭೇಟಿ ನೀಡಿದ ಸಿಪಿಐ(ಎಂ)–ಸಿಪಿಐ ಜಂಟಿ ನಿಯೋಗ ಕಂಡ ಪ್ರಕಾರ ಇದು ಬಿಜೆಪಿಯ ಒಂದು ಕೋಮು ಧ್ರುವೀಕರಣದ ಯೋಜಿತ ಪ್ರಯೋಗ. ನಿಯೋಗ ನೂರಕ್ಕೂ ಹೆಚ್ಚು ನಿವಾಸಿಗಳ ಜತೆ ಮಾತಾಡಿದ ಮೇಲೆ ಈ ತೀರ್ಮಾನಕ್ಕೆ ಬಂದಿದೆ. ಬ್ಲಾಕ್ 20 ಒಂದರಲ್ಲೇ 5 ಅಂಗಡಿಗಳು ಭಸ್ಮವಾಗಿರುವುದನ್ನು ನಿಯೋಗ ಕಂಡಿತು. ಇವೆಲ್ಲ ಅಲ್ಪಸಂಖ್ಯಾತ ಕೋಮಿನವರದಾಗಿರುವುದು ಕೇವಲ ಕಾಕತಾಳೀಯ ವಾಗಿರಲಿಕ್ಕಿಲ್ಲ.

ನಿಯೋಗ ಭೇಟಿ ಮಾಡಿದವರೆಲ್ಲರೂ, ಎರಡೂ ಕೋಮಿನವರೂ, ಈ ಗಲಭೆ ಭುಗಿಲೆನ್ನಲು ಕಾರಣರಾದ ಇಬ್ಬರನ್ನು ಗುರುತಿಸಿದ್ದಾರೆ, ಇಬ್ಬರೂ ಬಿಜೆಪಿಯವರೇ, ಒಬ್ಬಾತ ಬಿಜೆಪಿಯ ಮಾಜಿ ಶಾಸಕ ಸುನಿಲ್ ವೈದ್, ಮತ್ತೊಬ್ಬ ರಾಮ್ ಚರಣ್ ಗುಜರಾತಿ. ಬ್ಲಾಕ್ 28ರಲ್ಲಿ ಗಲಭೆಕೋರರು ಅಂಗಡಿಗಳ ಬೀಗ ಪಡೆದು ಲೂಟಿ ಮಾಡಿದರು ಎಂದು ಅಲ್ಲಿಯ ನಿವಾಸಿಗಳು ಹೇಳಿದರು.

ಪೋಲೀಸರು ಗಲಭೆ ಎಬ್ಬಿಸಿದವರೆಂದು 60 ಜನರನ್ನು ಬಂಧಿಸಿದ್ದಾರೆ. ಆ ಇಬ್ಬರು ಕಾರಣಕರ್ತರು ಎನ್ನಲಾದವರನ್ನು ಬಂಧಿಸಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.



ಮಾಧ್ಯಮಗಳಿಗೆ ಪ್ರಧಾನಿಗಳ ಶಾಭಾಸ್‌ಗಿರಿ!

"ನೀವು ಪೆನ್ನುಗಳನ್ನು ಪೊರಕೆಗಳಾಗಿ ಪರಿವರ್ತಿಸಿದ್ಧೀರಾ!'

ಕೃಪೆ: ಸತೀಶ್ ಆಚಾರ್ಯ

ಸಿಪಿಐ(ಎಂ)ನ 50ನೇ ವರ್ಷಾಚರಣೆ......

ಪುಟ 9 ರಿಂದ

ಪಕ್ಷವಾಗಿ, ಕಾರ್ಮಿಕ ವರ್ಗದ ಚಳುವಳಿಯನ್ನು ಬಲಪಡಿಸಲು ಮತ್ತು ಪ್ರಜಾಪ್ರಭುತ್ವ ಚಳುವಳಿಯನ್ನು ಮುಂದೊಯ್ಯಲು ಕಾರ್ಮಿಕರು ಒಂದು ಸಮರ್ಥವಾದ ರಾಜಕೀಯ ಶಕ್ತಿಯಾಗಿ ಬೆಳೆಯುವಂತೆ ಅವರನ್ನು ಸಂಘಟಿಸಲು ಸತತವಾಗಿ ಶ್ರಮಿಸಿದೆ. ಖಾಸಗೀಕರಣ ಹಾಗು ಕಾರ್ಮಿಕರ ಗುತ್ತಿಗೇಕರಣದ ವಿರುದ್ಧ ಮತ್ತು ಟ್ರೇಡ್‌ಯೂನಿಯನ್ ಹಕ್ಕುಗಳ ರಕ್ಷಣೆಗಾಗಿ ಪಕ್ಷವು ಹೋರಾಟ ನಡೆಸಿದೆ. ವರ್ಗ ಶೋಷಣೆ ಮತ್ತು ಸಾಮಾಜಿಕ ತುಳಿತಗಳು ಬೂರ್ಜ್ವಾ–ಭೂ ಮಾಲಕ ವ್ಯವಸ್ಥೆಯ ಅವಳಿ ಸ್ಥಂಭಗಳಾಗಿವೆ. ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಅಲ್ಪ ಸಂಖ್ಯಾತರ ಮೇಲೆ ನಡೆಯುತ್ತಿರುವ ಎಲ್ಲ ರೀತಿಯ ಸಾಮಾಜಿಕ ತುಳಿತಗಳ ವಿರುದ್ಧ ಪಕ್ಷವು ಎಡೆ ಬಿಡದೆ ಹೋರಾಟ ನಡೆಸುತ್ತಿದೆ.

★★★★

ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳು(ಸಂವಿಧಾನ ದತ್ತವಾದ, ಮಿತಿಗೊಳಪಟ್ಟ ಹಕ್ಕುಗಳೂ ಸೇರಿದಂತೆ) ಆಭಾದಿತವೇನಲ್ಲ. ಏಕೆಂದರೆ, ಆಳುವ ವರ್ಗಗಳು ತಮ್ಮ ಹಿತ–ಕ್ಕೆ ಧಕ್ಕೆ ಬಂದಾಗ ಮತ್ತು ಅನಿವಾರ್ಯವಾದಾಗ ಪ್ರಜಾಪ್ರಭುತ್ವದ ಮೇಲೆ ದಾಳಿ ಮಾಡುತ್ತವೆ. ಒಂದೇ ಪಕ್ಷದ ನಿರಂಕುಶಾಧಿಕಾರ ಇರುವಾಗ ಅದ–ರಿಂದ ಮುಂಬರುವ ಅಪಾಯವನ್ನು 1972ರಲ್ಲಿ ಜರುಗಿದ ತನ್ನ ಒಂಭತ್ತನೇ ಮಹಾಧಿವೇಶನದಲ್ಲಿ ಪ್ರಥಮವಾಗಿ ಗುರುತಿಸಿದ ಪಕ್ಷ ಸಿಪಿಐ(ಎಂ). ಪಶ್ಚಿಮ ಬಂಗಾಳದಲ್ಲಿ 1971 ರಿಂದ ಇಂದಿರಾ ಗಾಂಧಿಯವರ ಕುಮ್ಮಕ್ಕಿನಿಂದ ಮತ್ತು ರಾಜ್ಯದ ಆಡಳಿತ ಯಂತ್ರದ ದುರುಪಯೋಗದ ಮೂಲಕ ನಡೆಸುತ್ತಿದ್ದ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯ ಪರಿಣಾಮಗಳನ್ನು ಅನುಭವಿಸಿದ ಆಧಾರದ ಮೇಲೆ ಪಕ್ಷವು ಈ ನಿಸ್ಸಂಶಯವಾದ ಅಭಿಪ್ರಾಯ ವ್ಯಕ್ತಪಡಿಸಿತ್ತು. ಜೂನ್ 1975 ರಲ್ಲಿ ಆಂತರಿಕ ತುರ್ತುಪರಿಸ್ಥಿತಿ ಘೋಷಣೆಯಾಗುವ ಕಾಲದ ವರೆಗೂ ಪಕ್ಷವು ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವ ಹೋರಾಟಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿತ್ತು. ನಂತರ ತುರ್ತುಪರಿಸ್ಥಿತಿ ಆಡಳಿತವನ್ನು ವಿರೋಧಿಸಿತು. ಈ ಕಾರಣದ ಮೇಲೆ ಪಕ್ಷದ ನೂರಾರು ಮುಖಂಡರು ಮತ್ತು ಕಾರ್ಯಕರ್ತರನ್ನು ಬಂಧಿಸಲಾಯಿತು. ಆದರೆ, ಪಕ್ಷವು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳ ಜೊತೆಗೂಡಿ ಪ್ರತಿರೋಧ ಒಡ್ಡಿತು. ಆದ್ದರಿಂದ, ತುರ್ತುಪರಿಸ್ಥಿತಿ ಕೊನೆಗೊಂಡ ನಂತರ ಪಕ್ಷದ ಘನತೆ ಹೆಚ್ಚಿತು. ಪಶ್ಚಿಮ ಬಂಗಾಳದಲ್ಲಿ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯ ವಿರುದ್ಧ ಮತ್ತು ಅಖಿಲ ಭಾರತ ಮಟ್ಟದಲ್ಲಿ ತುರ್ತುಪರಿಸ್ಥಿತಿಯ ವಿರುದ್ಧ ಪಕ್ಷವು ರಾಜಿ ಇಲ್ಲದ ಹೋರಾಟ ಮಾಡಿದ ಪರಿಣಾಮವಾಗಿ 1977ರಲ್ಲಿ ಪಶ್ಚಿಮ ಬಂಗಾಳದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಮೂರನೆ ಎರಡರಷ್ಟು ಬಹುಮತ ಗಳಿಸಲು ಸಾಧ್ಯವಾಯಿತು.

ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿಯ ಹೆಚ್ಚಿನ ಪಾಲು ಸಿಪಿಐ(ಎಂ) ಮತ್ತು ಇತರ ಎಡಶಕ್ತಿಗಳ ಮೇಲೆ ದಟ್ಟವಾಗಿರುತ್ತದೆ. ಪಶ್ಚಿಮ ಬಂಗಾಳದ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯ ನಂತರ 1988 ರಿಂದ 1993ರ ವರೆಗಿನ ಅವಧಿಯಲ್ಲಿ ತ್ರಿಪುರಾದಲ್ಲಿ ಇದೇ ರೀತಿಯ ದಾಳಿ ನಡೆಯಿತು. ಪಶ್ಚಿಮ ಬಂಗಾಳದಲ್ಲಿ ಪುನಹ 2011 ರಿಂದ ವ್ಯಾಪಕವಾದ ದಾಳಿ ನಡೆಯುತ್ತಿದೆ. ಕೆಂಬಾವುಟ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗೆ ನಿಂತ ನೂರಾರು ಸಂಗಾತಿಗಳ ಪ್ರಾಣ ಹರಣವಾಗಿದೆ.

★★★★

ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡಿದ ಶ್ರೀಮಂತ ಅನುಭವ ಭಾರತದ ಕಮ್ಯೂನಿಸ್ಟ್ ಚಳುವಳಿಗೆ ಇದೆ. ಈ ದಿಶೆಯಲ್ಲಿ ಸಿಪಿಐ(ಎಂ) ತನ್ನದೇ ಆದ ಗಣನೀಯ ಕೊಡುಗೆ ನೀಡಿದೆ. ಪಾರ್ಲಿಮೆಂಟರಿ ವೇದಿಕೆಗಳಲ್ಲಿ ಮತ್ತು ರಾಜ್ಯ ಸರ್ಕಾರಗಳಲ್ಲಿ ಯಾವ ರೀತಿಯಲ್ಲಿ ಕೆಲಸ ಮಾಡಬೇಕೆಂಬ ಒಂದು ಸೃಜನಶೀಲ ಧೋರಣೆಯನ್ನು ಪಕ್ಷವು ತನ್ನ ರಚನೆಯ ಬಳಿಕ ರೂಪಿಸಿತ್ತು. ಪಕ್ಷದ ಕಾರ್ಯಕ್ರಮದಲ್ಲಿ ಈ ಬಗ್ಗೆ ಅಳವಡಿಸಿಕೊಳ್ಳಬೇಕಾದ ಕಾರ್ಯತಂತ್ರದ ನಿರ್ದೇಶನವಿದೆ. 1957ರಲ್ಲಿ ಕೇರಳದ ಪ್ರಥಮ ಕಮ್ಯೂನಿಸ್ಟ್ ಮಂತ್ರಿಮಂಡಲದ ಅನುಭವವೂ ಪಕ್ಷಕ್ಕೆ ಇದೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಪ್ರಬಲವಾಗಿರುವಂತಹ ಕಡೆಗಳಲ್ಲಿ ಮಾತ್ರ ಸಿಪಿಐ(ಎಂ) ರಾಜ್ಯ ಸರ್ಕಾರಗಳಲ್ಲಿ ಭಾಗವಹಿಸುತ್ತದೆ. ಸಿಪಿಐ(ಎಂ) ರಾಜ್ಯ ಸರ್ಕಾರಗಳಲ್ಲಿ ಭಾಗವಹಿಸುವಿಕೆಯನ್ನು ದೊಡ್ಡ ಹೋರಾಟಗಳನ್ನು ಮತ್ತು ಪ್ರಜಾಪ್ರಭುತ್ವ ಚಳುವಳಿಗಳನ್ನು ಬೆಳೆಸಲು ಮತ್ತು ಬೂರ್ಜ್ವಾ–ಭೂ ಮಾಲಕ ವ್ಯವಸ್ಥೆಯೊಳಗೆ ಜನರಿಗೆ ಸಾಧ್ಯವಿರುವ ಎಲ್ಲ ರೀತಿಯ ನೆರವು ಒದಗಿಸಲು ಸಹಾಯವಾಗುವ ಒಂದು ಸಾಧನವಾಗಿ ನೋಡುತ್ತದೆ. 1967–70ರ ಕಾಲಘಟ್ಟದಲ್ಲಿ ಕೇರಳ ಮತ್ತು ಪಶ್ಚಿಮ ಬಂಗಾಳದ ಸಂಯುಕ್ತ ರಂಗ ಸರ್ಕಾರಗಳ ರಚನೆಯಾದ ಸಂದರ್ಭದಲ್ಲಿ ಪಕ್ಷವು ತನ್ನ ಈ ತಿಳುವಳಿಕೆಯನ್ನು ಆಚರಣೆಗೆ ತಂದಿತ್ತು.

1977ರ ನಂತರ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗದ ಸರ್ಕಾರಗಳ ರಚನೆ ಮತ್ತು ಆಡಳಿತದ ಕಾರ್ಯೋದ್ದೇಶವು ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿಗಳನ್ನು ಬೆಳೆಸುವುದು ಮತ್ತು ಬೂರ್ಜ್ವಾ–ಭೂಮಾಲಕ ಸರ್ಕಾರಗಳ ನೀತಿಗಳಿಗೆ (ರಾಜ್ಯ ಸರ್ಕಾರದ ಮಿತಿಗಳಲ್ಲಿ)ಪರ್ಯಾಯವಾದ ನೀತಿಗಳನ್ನು ಜನರ ಮುಂದಿಡುವುದೇ ಅಗಿ–ತ್ತು. ಈ ಸರ್ಕಾರಗಳು, ಭೂ ಸುಧಾರಣಾ ವಲಯದಲ್ಲಿ ಮಾಡಿದ ಸಾಧನೆ, ಅಧಿಕಾರದ ವಿಕೇಂದ್ರೀಕರಣ, ಶ್ರಮ ಜೀವಿಗಳ ಹಕ್ಕುಗಳ ಬಲಪಡಿಸುವಿಕೆ ಮತ್ತು ಜಾತ್ಯತೀತತೆಯ ರಕ್ಷಣೆಯು ಎಡ ಮತ್ತು ಪ್ರಜಾಪ್ರಭುತ್ವ ಅಜೆ–ಂಡಾ ಮುಂದೊಯ್ಯಲು ತಮ್ಮ ಕೊಡುಗೆ ನೀಡಿವೆ.

★★★★

ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಕೆಲಸ ಮಾಡಿದುದರ ಜೊತೆಯಾಗಿ ಒಕ್ಕೂಟ (ಫೆಡರಲಿಸಂ) ವ್ಯವಸ್ಥೆಯ ಸಮರ್ಥಕನಾಗಿ ಸಿಪಿಐ(ಎಂ) ಹೋರಾಟ ಮಾಡಿದೆ. ರಾಷ್ಟ್ರೀಯ ಪ್ರಶ್ನೆ ಕುರಿತಂತೆ ಪಕ್ಷದ ತಿಳುವಳಿಕೆಯ ಪ್ರಕಾರ ಭಾರತವು ಒಂದು ಬಹು ರಾಷ್ಟ್ರೀಯ ದೇಶವಾಗಿದೆ. ಅನೇಕ ಭಾಷಾ ರಾಷ್ಟ್ರೀಯತೆಗಳು ದೇಶದ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ತಮಗೆ ಸಿಗಬೇಕಾದ ಪಾಲನ್ನು ಪಡೆಯಲು ಒಕ್ಕೂಟ ವ್ಯವಸ್ಥೆಯು ಅವಕಾಶ ಮಾಡಿಕೊಡುತ್ತದೆ. ಆದ್ದ–ರಿಂದ, ದೇಶದ ಐಕ್ಯತೆ ಬಲಗೊಳ್ಳಲು ಒಕ್ಕೂಟ ವ್ಯವಸ್ಥೆ ಅನಿವಾರ್ಯ. ಪ್ರಾಂತೀಯ, ಭಾಷಿಕ ಮತ್ತು ಜನಾಂಗೀಯ ಶಕ್ತಿಗಳ ವಿರುದ್ಧ ಹೋರಾಟ ಮಾಡಿರುವ ಸಿಪಿಐ(ಎಂ) ಜನತೆಯ ಐಕ್ಯತೆ ಮತ್ತು ಒಕ್ಕೂಟ ವ್ಯವಸ್ಥೆಯ ಪರವಾದ ಒಂದು ಸ್ಥಿರವಾದ ಶಕ್ತಿಯಾಗಿದೆ. 1980ರ ದಶಕದಲ್ಲಿ ದೇಶದ ಅನೇಕ ಭಾಗಗಳಲ್ಲಿ ಛಿದ್ರಕಾರಿ ಶಕ್ತಿಗಳು ಬಿರುಸಿನ ಚಟುವಟಿಕೆ ನಡೆಸುತ್ತಿದ್ದಾಗ ರಾಷ್ಟ್ರೀಯ ಐಕ್ಯತೆಗೆ ಉಂಟಾದ ಧಕ್ಕೆಯನ್ನು ಎದುರಿಸಲು ಸಿಪಿಐ(ಎಂ) ಧೃಢವಾದ ನಿಲುವು ತಳೆಯಿತು. ಪಂಜಾಬ್, ಅಸ್ಸಾಂ, ತ್ರಿಪುರಾ ಮತ್ತು ಜಮ್ಮು–ಕಾಶ್ಮೀರ ರಾಜ್ಯಗಳಲ್ಲಿ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟ ಮಾಡಿದ ಸಿಪಿಐ(ಎಂ)ನ ನೂರಾರು ಸಂಗಾತಿಗಳು ಹತ್ಯೆಗೀಡಾದರು. ಕೇಂದ್ರ–ರಾಜ್ಯಗಳ ಸಂಬಂಧಗಳ ಪುನಾರಚನೆ ಆಗಬೇಕೆಂದು ಸಿಪಿಐ(ಎಂ) ಶಕ್ತಿಮೀರಿ ಒತ್ತಾಯ ಮಾಡಿದೆ. ಈ ವಿಷಯವನ್ನು ಎಡ ನೇತೃತ್ವದ ಸರ್ಕಾರಗಳು ಸುಸಂಬದ್ಧವಾಗಿ ವ್ಯಕ್ತಪಡಿಸಿವೆ. ಕೇಂದ್ರ–ರಾಜ್ಯಗಳ ಸಂಬಂಧಗಳ ಬಗ್ಗೆ 1983ರಲ್ಲಿ ಶ್ರೀನಗರದಲ್ಲಿ ನಡೆದ 15 ಪಕ್ಷಗಳ ಆಪ್ತಾಲೋಚನೆಯ ಸಭೆಯಲ್ಲಿ ಎಲ್ಲ ಪಕ್ಷಗಳೂ ಒಂದು ಸಮಾನ ನಿಲುವು ತಳೆಯಲು ಸಿಪಿಐ(ಎಂ) ಪ್ರಮುಖ ಪಾತ್ರ ವಹಿಸಿತು.

★★★★

ಕೋಮುವಾದದ ವಿರುದ್ಧ ಸಿಪಿಐ(ಎಂ) ಅತ್ಯಂತ ಧೃಢವಾಗಿ ಮತ್ತು ಸ್ಥಿರವಾಗಿ ಹೋರಾಡಿದ ರಾಜಕೀಯ ಶಕ್ತಿಯಾಗಿದೆ. ಚಾರಿತ್ರಿಕವಾಗಿ, ಆಂಗ್ಲರ ಆಡಳಿತದ ವಿರುದ್ಧ ಹೋರಾಡುತ್ತಿದ್ದ ಜನರ ಐಕ್ಯತೆ ಮುರಿಯಲು ಮತೀಯ ಕೋಮುವಾದವನ್ನು ಒಂದು ಅಸ್ತ್ರವಾಗಿ ಉಪಯೋಗಿಸಲಾಗಿತ್ತು. ದೇಶದ ವಿಭಜನೆಯ ದಿನಗಳಲ್ಲಿ ಮತೀಯ ಉದ್ರಿಕ್ತತೆ ತಾಂಡವವಾಡುತ್ತಿದ್ದ ಹೊತ್ತಿನಲ್ಲೂ ಅದರ ಎದುರು ಧೃಢವಾಗಿ ನಿಂತದ್ದು ಕಮ್ಯೂನಿಸ್ಟರ ಹೆಮ್ಮೆಯ ಸಾಧನೆ. ಎಷ್ಟೇ ಸಣ್ಣ ಸಂಖ್ಯೆಯಾಗಿದ್ದರೂ, ಕಮ್ಯೂನಿಸ್ಟರು ಗಲಭೆಕೋರರನ್ನು ಎದುರಿಸಿ ಅವರ ಗುಂಪು ಹಿಂಸೆಗೆ ಗುರಿಯಾಗುತ್ತಿದ್ದವರನ್ನು ರಕ್ಷಿಸಿದರು. ನಂತರ, ಸ್ವತಂತ್ರ ಭಾರತದಲ್ಲಿ ಕೋಮು ಗಲಭೆಗಳು ನಡೆಯುತ್ತಿದ್ದ ಸಂದರ್ಭಗಳಲ್ಲಿ ಹಿಂಸೆಗೆ ಒಳಗಾಗುತ್ತಿದ್ದವರನ್ನು ಕಮ್ಯೂನಿಸ್ಟರು ರಕ್ಷಿಸಿದ್ದಾರೆ. ಅದೇ ಪರಂಪರೆಯಲ್ಲಿ ಕೇರಳದ ಸಿಪಿಐ(ಎಂ) ನಾಯಕ ಯು.ಕೆ. ಕುನ್ಹಿರಾಮನ್ 1968ರಲ್ಲಿ ದಾಳಿಗೊಳಗಾಗುತ್ತಿದ್ದ ತಲಸ್ಸೇರಿಯ ಮಸೀದಿಯ ರಕ್ಷಣೆ ಮಾಡಲು ಹೋದಾಗ ಹತ್ಯೆಗೀಡಾದರು. ಸಿಪಿಐ(ಎಂ) ಜಾತ್ಯತೀತತೆಗೆ ಬದ್ಧವಾಗಿದೆ. ಜಾತ್ಯತೀತತೆ ಎಂದರೆ ಮತಧರ್ಮಗಳು ಪ್ರಭುತ್ವ ಮತ್ತು ರಾಜಕೀಯದಿಂದ ದೂರ ಇರುವ ಪರಿಸ್ಥಿತಿ. ಬೂರ್ಜ್ವಾ ಪಕ್ಷಗಳು ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದಗಳನ್ನು ಓಲೈಸುತ್ತವೆ. ಸಿಪಿಐ(ಎಂ) ಇದಕ್ಕೆ ಹೊರತಾಗಿದೆ. ಅಲ್ಲದೆ ಕೋಮುವಾದಿ ಶಕ್ತಿಗಳು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದನ್ನು ತೀವ್ರವಾಗಿ ವಿರೋಧಿಸುತ್ತದೆ.



1980ರ ದಶಕದ ಕೊನೆಯ ಭಾಗದಲ್ಲಿ ಬಹುಸಂಖ್ಯಾತ ಕೋಮುವಾದದ ಬೆದರಿ–ಕೆ ತಲೆದೋರಿದಾಗ, ಆರ್‌ಎಸ್‌ಎಸ್–ಬಿಜೆಪಿ ಜೋಡಿ ಈ ಬೆದರಿಕೆಯನ್ನು ಪ್ರತಿನಿಧಿಸುತ್ತಿವೆ ಎಂದು ಸಿಪಿಐ(ಎಂ) ಹೇಳಿತು. ಹಿಂದುತ್ವ ಶಕ್ತಿಗಳಿಗೆ ತಡೆಯೊಡ್ಡಲು ಮತ್ತು ಅವರನ್ನು ರಾಜಕೀಯವಾಗಿ ಪ್ರತ್ಯೇಕಗೊಳಿಸಲು ಪಕ್ಷವು ಅತ್ಯಂತ ನಿಷ್ಠುರವಾಗಿ ಕೆಲಸ ಮಾಡಿದೆ. ಬಿಜೆಪಿ ಮೇಲೇರುತ್ತಿರುವುದು ಮತ್ತು ಅದು ಅಧಿಕಾರಕ್ಕೆ ಬಂದಿರುವುದು ಹಿರಿ ಬೂರ್ಜ್ವಾ ಹಾಗೂ ಕಾರ್ಪೋರೇಟ್‌ಗಳ ಹಿತಾಸಕ್ತಿಗಳ ಪೂರೈ–ಕೆಗೆ ಇಂಬು ಕೊಟ್ಟಂತಾಗಿದೆ. ಬಿಜೆಪಿ ನವ–ಉದಾರವಾದದ ಅಜೆಂಡಾ ಮುಂದುವರಿಸಲು ಬದ್ಧವಾಗಿದೆ ಎಂಬುದು ಅವರಿಗೆ ಗೊತ್ತಿದೆ. ಆದ್ದರಿಂದ, ನವ–ಉದಾರವಾದದ ನೀತಿಗಳ ವಿರುದ್ಧದ ಹೋರಾಟಕ್ಕೂ ಮತ್ತು ಬಹುಸಂಖ್ಯಾತ ಕೋಮುವಾದದ ವಿರುದ್ಧದ ಪ್ರತಿರೋಧಕ್ಕೂ ಪರಸ್ಪರ ಸಂಬಂಧ ಇದೆ ಎಂಬುದು ಸಿಪಿಐ(ಎಂ)ನ ಅಭಿಪ್ರಾಯ. ಇಡೀ ರಾಜಕೀಯ ಸಮುದಾಯದಲ್ಲಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಮಾತ್ರವೇ ಬಿಜೆಪಿ ಹಾಗೂ ಕೋಮುವಾದಿ ಶಕ್ತಿಗಳೊಂದಿಗೆ ಚುನಾವಣೆಗಳಲ್ಲಾಗಲಿ ಅಥವಾ ರಾಜಕೀಯ ಲಾಭಕ್ಕಾಗಲಿ ಎಂದೂ ರಾಜಿ ಮಾಡಿಕೊಂಡಿಲ್ಲ.

★★★★

ದೇಶವು ಅಭಿವೃದ್ಧಿ ಹೊಂದಲು ಒಂದು ಪರ್ಯಾಯ ಬೆಳವಣಿಗೆಯ(ಅಂದರೆ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನ್ಯಾಯ ಸಮ್ಮತವಾಗಿಯೂ ಹಾಗೂ ರಾಜಕೀಯವಾಗಿ ಪ್ರಜಾಸತ್ತಾತ್ಮಕವಾಗಿಯೂ ಇರುವ ಬೆಳವಣಿಗೆ) ಹಾದಿಯ ದಿಕ್ಕುಧೋರಣೆಯನ್ನು ಸಿಪಿಐ(ಎಂ) ಜನರ ಮುಂದೆ ಇಟ್ಟಿದೆ. ಇದೊಂದು ಮಹತ್ವಪೂರ್ಣ ಕೊಡುಗೆ ಎಂದರೆ ತಪ್ಪಲ್ಲ. ರಾಜಕೀಯ ಪರಿಭಾಷೆಯಲ್ಲಿ ಹೇಳುವುದಾದರೆ, ಕಳೆದ ಐವತ್ತು ವರ್ಷಗಳಲ್ಲಿ ಸಿಪಿಐ(ಎಂ) ಒಂದು ಪ್ರಭಾವಶಾಲಿ ಶಕ್ತಿಯಾಗಿ ಬೆಳೆದಿದೆ. ಭಾರತದ ರಾಜ್ಯಾಡಳಿತದ ವ್ಯವಸ್ಥೆಯಲ್ಲಿ ಉದ್ಭವಿಸಿದ ಎಲ್ಲ ಪ್ರಮುಖ ಚರ್ಚಾ ವಿಷಯಗಳ – ಜಾತ್ಯತೀತತೆ, ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆ (ಫೆಡರಲಿಸಂ) ಮುಂತಾದ ವಿಷಯಗಳ ಕಗ್ಗಂಟು ಬಿಡಿಸಲು ಸಿಪಿಐ(ಎಂ) ತನ್ನದೇ ಆದ ವೈಶಿಷ್ಟ್ಯಪೂರ್ಣ ಕೊಡುಗೆ ನೀಡಿದೆ.


ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಇತ್ತೀಚಿನ ಚುನಾವಣೆಗಳಲ್ಲಿ ಭಾರಿ ಸೋಲು ಅನುಭವಿಸಿವೆ. ಬಲ ಪಂಥೀಯ ಶಕ್ತಿಗಳ ದಾಳಿಯ ಪರಿಣಾಮವಾಗಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಬಿಜೆಪಿ ಸರ್ಕಾರವು ಕಾರ್ಪೋರೇಟ್‌ಗಳ ದೈತ್ಯ ಶಕ್ತಿ ಮತ್ತು ಹಿಂದುತ್ವ ಎಂಬ ಅವಳಿ ಜವಳಿ ಶಕ್ತಿಗಳನ್ನು ಪ್ರತಿನಿಧಿಸುತ್ತಿದೆ. ಜಾತ್ಯತೀತವಾಗಿರುವ ಪ್ರಜಾಪ್ರಭುತ್ವ, ಶ್ರಮ ಜೀವಿಗಳ ಹಕ್ಕಗಳು ಮತ್ತು ಪರ್ಯಾಯ ನೀತಿಗಳಿಗಾಗಿ ಹೋರಾಡಲು ಬಲಶಾಲಿಯಾದ ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳ ಅವಶ್ಯಕತೆ ಎದ್ದು ಕಾಣುತ್ತದೆ. ಪಕ್ಷವು ಈ ಸವಾಲನ್ನು ಶ್ರದ್ಧಾಪೂರ್ವಕವಾಗಿ ಸ್ವೀಕರಿಸುತ್ತದೆ. ಎಪ್ರಿಲ್ 2015ರಲ್ಲಿ ಜರುಗಲಿರುವ ಪಕ್ಷದ 21ನೇ ಮಹಾಧಿವೇಶನಕ್ಕೆ ಪೂರ್ವಭಾವಿ ಸಿದ್ಧತೆಯಾಗಿ ಕೇಂದ್ರ ಸಮಿತಿಯು (ಹಾಲಿ ಇರುವ) ಹೊಸ ರಾಜಕೀಯ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸುವಂತಹ ಒಂದು ತಾಜಾ ರಾಜಕೀಯ–ವ್ಯೂಹಾತ್ಮಕ ಹಾದಿ ನಿರೂಪಿಸಲು ತೊಡಗಿದೆ. ಎರಡು ದಶಕಗಳಿಗಿಂತಲೂ ಹೆಚ್ಚಿನ ಅವಧಿಯ ನವ–ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯಡಿಯಲ್ಲಿ ಭಾರತದ ಸಮಾಜ ಮತ್ತು ಅದರ ವರ್ಗಗಳಲ್ಲಿ ಆಗಿರುವ ಬದಲಾವಣೆಗಳನ್ನು ಗುರುತಿಸಲು ಕೇಂದ್ರ ಸಮಿತಿಯು ಒಂದು ನಿರ್ದಿಷ್ಟ ಅಧ್ಯಯನ ಕೈಗೊಳ್ಳಲಿದೆ. ಪಕ್ಷದ ಸಂಘಟನೆ ಮತ್ತು ಜನರ ನಡುವೆ ಪಕ್ಷವು ಕೈಗೊಳ್ಳಬೇಕಾದ ಕೆಲಸಗಳ ಬಗ್ಗೆ ಮಹಾಧಿವೇಶನವು ಒಂದು ಹೊಸ ಮಾರ್ಗದರ್ಶನ ನೀಡಲಿದೆ.

ನಮ್ಮ ಆಳುವ ವರ್ಗಗಳು ಅಳವಡಿಸಿಕೊಂಡಿರುವ ನವ–ಉದಾರವಾದಿ ಮಾದರಿಯಡಿಯಲ್ಲಿ ಪರರ ಭಕ್ಷಣೆ ಮಾಡುವ ಬಂಡವಾಳಶಾಹಿ ಪ್ರಕ್ರಿಯೆಗೆ ದೇಶವು ಮೂಕ ಸಾಕ್ಷಿಯಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳು ತೀವ್ರವಾಗಿ ಹೆಚ್ಚುತ್ತಿವೆ. ಪ್ರಪಂಚದ ಅತ್ಯಂತ ದೊಡ್ಡ ಶ್ರೀಮಂತರ ಪೈಕಿ ಕೆಲವರು ನಮ್ಮ ದೇಶದಲ್ಲಿದ್ದಾರೆ. ಅವರ ಜೊತೆಯಲ್ಲಿ ಅತ್ಯಂತ ದೊಡ್ಡ ಸಂಖ್ಯೆಯ ಬಡವರೂ ಇದ್ದಾ–ರೆ. ಸಮಾಜವಾದದೆಡೆಗೆ ಕೊಂಡೊಯ್ಯುವಂತಹ ಒಂದು ಪರ್ಯಾಯ ಮಾರ್ಗದ ಸಲುವಾಗಿನ ಹೋರಾಟವು ಸದಾ ಜಾರಿಯಲ್ಲಿರುವ ಒಂದು ಕಷ್ಟಸಾಧ್ಯವಾದ ಹೋರಾಟ.

ತನ್ನ ಅಸ್ತಿತ್ವದ 50 ವಸಂತಗಳನ್ನು ಸಿಪಿಐ(ಎಂ) ದಾಟಿರುವ ಈ ಸಂದರ್ಭದಲ್ಲಿ ಪಕ್ಷದ ಮುಂದಿರುವ ಗುರಿ ತಲುಪಲು ದಿಟ್ಟತನ ಮತ್ತು ಧೃಢ ನಿಶ್ಚಯದಿಂದ ನಮ್ಮನ್ನು ನಾವೇ ಸಮರ್ಪಿಸಿಕೊಳ್ಳೋಣ. ●

ಪ್ರಧಾನ ಮಂತ್ರಿಗಳ ಪೊಳ್ಳು ಅಬ್ಬರ......

ಪುಟ 7 ರಿಂದ



ದೇಶದ ಬಡವರ ಪುನರ್ವಸತಿಗೆ ಬಳಕೆಯಾಗುವಂತೆ ನೋಡಿಕೊಳ್ಳುತ್ತೇನೆ."

◆"ಎಲ್ ಕೆ ಅಡ್ವಾಣಿಯವರು ವಿದೇಶಿ ಬ್ಯಾಂಕುಗಳಲ್ಲಿ ಪೇರಿಸಿಟ್ಟ ಕಪ್ಪು ಹಣದ ಬಗ್ಗೆ ಜಾಗೃತಿ ಮೂಡಿಸಲು ಅವರ ವೃದ್ಧಾಪ್ಯದಲ್ಲೂ ಒಂದು ಯಾತ್ರೆ ಕೈಗೊಂಡರು. ಬಾಬಾ ರಾಂದೇವ್ ಕೂಡ ಈ ಪ್ರಶ್ನೆಯನ್ನು ಎತ್ತಿಕೊಂಡಿದ್ದಾರೆ, ಬಿಜೆಪಿ ಕೂಡ ಈ ಸಮರವನ್ನು ನಡೆಸುತ್ತಿದೆ, ಆದರೆ ಕಾಂಗ್ರೆಸ್ ಮಾತ್ರ ಈ ಸಮರಕ್ಕೆ ಹೆದರುತ್ತಿದೆ."

◆"ವಿದೇಶಿ ಬ್ಯಾಂಕುಗಳಲ್ಲಿ ಎಷ್ಟೊಂದು ಸಂಪತ್ತನ್ನು ತುಂಬಿಸಿಡಲಾಗಿದೆ. ಆದರೆ ಕೇಂದ್ರದಲ್ಲಿನ ಸರಕಾರ ಆ ಹಣವನ್ನು ವಾಪಾಸು ತರಲು ಏನೂ ಮಾಡಿಲ್ಲ. ಆದ್ದರಿಂದ ಕೇಂದ್ರ ಸರಕಾರವೂ ಏನನ್ನೋ ಮುಚ್ಚಿಡುತ್ತಿದೆ ಎಂಬ ಸಂದೇಹವಿದೆ. ಜನ ಹಸಿದಿದ್ದಾರೆ, ಆದರೆ ಸರಕಾರಕ್ಕೆ ಪರಿವೆಯೇ ಇಲ್ಲ."

ಅವಿಶ್ವಸನೀಯತೆಯ ಹಿಂದೆ

ಹೀಗಿವೆ, ಪ್ರಧಾನ ಮಂತ್ರಿಗಳ ಅಬ್ಬರದ ಮಾತುಗಳ ಮತ್ತು ವಾಸ್ತವತೆಯ ದಾಖಲೆಗಳು. ಈ ಸರಕಾರ ಎಷ್ಟರ ಮಟ್ಟಿಗೆ ತಾನಿತ್ತ ಚುನಾವಣಾ ಭರವಸೆಗಳನ್ನು ಈಡೇರಿಸುತ್ತದೆ ಎಂದು ನಂಬಲು ಸಾಧ್ಯ? ಇವೆಲ್ಲ ಶ್ರೀಯುತ ಮೋದಿಯವರ ಅಡಿಯಲ್ಲಿ ಸರಕಾರ ತಾನು ಇತ್ತ ಭರವಸೆಗಳನ್ನು ಪ್ರಾಮಾಣಿಕವಾಗಿ ಜಾರಿ ಮಾಡುತ್ತದೆ ಎಂದು ಜನ ನಂಬಿ ಮೈಮರೆಯುವಂತೆ ಮಾಡಲು ಮಾತ್ರ.

ಹೀಗೆ ತಾವಿತ್ತ ವಚನಗಳನ್ನು ಪಾಲಿಸದೇ ಇರುವಾಗಲೇ, ಅವರು ತಮ್ಮ ಹಿಂದೂ ಕೋಮುವಾದಿ ವೋಟ್ ಬ್ಯಾಂಕನ್ನು ಕ್ರೋಡೀಕರಿಸುವ ಏಕೈಕ ಮಾರ್ಗವಾಗಿ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ತಮ್ಮ ಬಚ್ಚಿಟ್ಟ ಅಜೆಂಡಾವನ್ನು ಅನುಸರಿಸುತ್ತಲೇ ಇದ್ದಾರೆ. ಇದು ನಮ್ಮ ಸಾಮಾಜಿಕ ಐಕ್ಯತೆ ಮತ್ತು ಸಮಗ್ರತೆಗೆ ಗಂಭೀರ ಬೆದರಿಕೆಗಳನ್ನು ಒಡ್ಡಿ ನಮ್ಮ ಆಧುನಿಕ ಭಾರತೀಯ ಗಣ-ತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಚಾರಿತ್ರ್ಯವನ್ನು ನಿರಾಕರಿಸಲೆಂದೇ ರೂಪಿಸಿರುವ ಅತ್ಯಂತ ಹೊಲಸು 'ವೋಟ್ ಬ್ಯಾಂಕ್ ರಾಜಕೀಯ'. ಇಂತಹ ದುಷ್ಟ ಅಜೆಂಡಾ ಯಶಸ್ವಿಯಾಗಲು ಬಿಡಬಾರದು. ಇದರಲ್ಲೇ ನಮ್ಮ ಶೋಷಿತ ಮತ್ತು ದಮನಕ್ಕೊಳಗಾಗಿರುವ ವಿಶಾಲ ಜನಸ್ತೋಮಗಳ ಭವಿಷ್ಯ ಅಡಗಿದೆ. ಈ ಜನಸ್ತೋಮಗಳ ಐಕ್ಯ ಹೋರಾಟಗಳ ಶಕ್ತಿಯೇ ಅವರ ಬದುಕಿನ ಪ್ರಸಕ್ತ ಶೋಚನೀಯ ಪರಿಸ್ಥಿತಿಯನ್ನು ಉತ್ತಮ ಪಡಿಸುವ ಏಕೈಕ ಭರವಸೆ. ●

ಈ ವಾರ ....

ಪುಟ 3 ರಿಂದ

ಸರಕಾರ ತಾನು ಎದುರಿಸುತ್ತಿರುವ ಆರ್ಥಿಕ ಮುಗ್ಗಟ್ಟಿನಲ್ಲಿ ಹಣವನ್ನು ಎಲ್ಲಿಂದ ಜೋಡಿಸುವರು, ಎಲ್ಲಿಂದ ತರುವರು (ಸ್ವಿಸ್‌ನಿಂದಲಾ ಅಥವಾ ಅಂಬಾನಿ, ವರ್ಲ್ಡ್ ಬ್ಯಾಂಕ್‌ನಿಂದಲಾ) ಯಾರಿಗೂ ಚಿಂತಿಸಲು, ಪ್ರಶ್ನಿಸಲೂ ಪುರುಷೊತ್ತಿಲ್ಲ! ಅಂದರೆ ಈ ಖಾತೆ ತೆರೆಯುವ ಈ ಯೋಜನೆ ನಿಜಕ್ಕೂ ತನ್ನ ಗುರಿ ಸಾಧಿಸೀತೇ? ಫಲ ಜನರಿಗೆ ದಕ್ಕೀತೇ? ಹಾಗೆ ನೋಡಿದರೆ ಯಾವ ಲೆಕ್ಕಕ್ಕೂ ಸಿಗದ ಇದು ಕನಸಿನ ಲೋಕದಲ್ಲಿ ಸೃಷ್ಟಿಸಿದ ಕಾಮನಬಿಲ್ಲು ಎನ್ನುವುದರಲ್ಲಿ ಅನುಮಾನವಿಲ್ಲ.

ಪಾರದರ್ಶಕವೆಲ್ಲಿ? ಪ್ರಾಮಾಣಿಕತೆಯೆಲ್ಲಿ?

ಮುಖ್ಯವಾಗಿ, ಈ ಯೋಜನೆಯ ಹಾರ-ಭಾರ ಹೊರುವುದು ನಮ್ಮ ಸಾರ್ವಜನಿಕ ಕ್ಷೇತ್ರದ ಹೆಮ್ಮೆಯ ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಜೀವ ವಿಮಾ ಕಂಪನಿಗಳು. ಇಂತಹುಗಳಿಗೆ ಅಪ್ಪಿ ತಪ್ಪಿಯೂ ಖಾಸಗಿಯವರು ಕಿರು ಬೆರಳನ್ನೂ ಚಾಚುವುದಿಲ್ಲ. ಅಂದರೆ ಇದರ ಭಾರ, ಲಾಭ-ನಷ್ಟದ ರಿಸ್ಕ್-ಹೊಣೆಗಾರಿಕೆಯೆಲ್ಲಾ ಸಾರ್ವಜನಿಕ ಸಂಸ್ಥೆಗಳ ಮೇಲೆ ಎಂದಾಯಿತು. ಆದರೆ ಈ ಸಂಸ್ಥೆಗಳನ್ನು ಬಲಪಡಿಸುವ ಬದಲು ಮೋಡಿ ಸರಕಾರ ಆ ಸಂಸ್ಥೆಗಳ ಕತ್ತನ್ನೇ ಕೊಯ್ಯಲು ಹೊರಟಿದೆ. ಈ ಸರಕಾರ ತನ್ನ ಮೊದಲ ಅಧಿವೇಶನದಲ್ಲೇ ವಿಮಾ ಕ್ಷೇತ್ರದಲ್ಲೇ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಶೇ. 26 ರಿಂದ ಶೇ.49ಕ್ಕೆ ಏರಿಸುವ ಮಸೂದೆಯನ್ನು ತಂದಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳನ್ನೂ ಇದೇ ರೀತಿ ಬುಡಮೇಲುಗೊಳಿಸಲು ಹಲವಾರು ಕುಂತಂತ್ರಗಳನ್ನು ನಡೆಸಿದೆ. ಅದಕ್ಕಾಗಿ ಮಸೂದೆ ತರಲು ಉತ್ಸುಕವಾಗಿದೆ. ಹೀಗಿರುವಾಗ ಸರಕಾರದ ಜನ್ ಧನ್ ಯೋಜನೆಯ ಬಗ್ಗೆ, ಅದು ಹೇಳುವ ಆರ್ಥಿಕ ಅಸ್ಪೃಶ್ಯತೆ, ಅಸಮಾನತೆ ನಿವಾರಣೆ ಮಾತುಗಳು ಅಪ್ರಮಾಣಿಕವಾಗಿವೆ.

ವಣಿಕರ ಬಾಯಲ್ಲಿ ಹೊರ ಬಂದ ಸತ್ಯ

ಆಗಸ್ಟ್ 28 ರಂದು ಖಾತೆ ತೆರೆಯುವ ಮೋದಿ ಕಾರ್ಯಕ್ರಮದ ಬಳಿಕ ಹೇಳಿಕೆ ನೀಡಿದ 'ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ'ಯ ಡೈರೆಕ್ಟರ್ ಜನರಲ್ ಚಂದ್ರಜಿತ್ ಬ್ಯಾನರ್ಜಿ 'ಆರ್ಥಿಕ ಒಳಗೊಳ್ಳುವಿಕೆ'ಯ ಈ ಯೋಜನೆಯನ್ನು ಬಡವರಿಗೆ 'ಪರಮಾಧಿಕಾರ' ನೀಡುವ ದೆಸೆಯಲ್ಲಿ ಪರಿಶೋಧನಾತ್ಮಕ, ಅಗತ್ಯವಾಗಿದ್ದ ಹೆಜ್ಜೆಯೆಂದು, 'ರಾಷ್ಟ್ರೀಯ ಸವಾಲ'ನ್ನು(?) ಸ್ವೀಕರಿಸುವ ಗಟ್ಟಿತನದ ಕ್ರಮವೆಂದು ಸ್ವಾಗತಿಸುತ್ತಾ 'ಇದು ಮುಂದುವರಿದು ಗ್ರಾಹಕನಿಗೆ ಸರಕಾರದ 'ಸಬ್ಸಿಡಿಯ ಫಲ'ವನ್ನು ನೇರವಾಗಿ ವರ್ಗಾಯಿಸಲು ಅವಕಾಶ ನೀಡುತ್ತದೆ ಹಾಗೂ ಸೋರಿಕೆಯನ್ನು ತಡೆಯುತ್ತದೆ' ಎಂದರು. ತನ್ನ ಹಿತಾಸಕ್ತಿ ಕಾಯುವಂತಹದ್ದಿಲ್ಲದೇ ವಣಿಕ ವಲಯ ಸ್ವಾಗತಿಸಿ ಹೊಗಳುವುದುಂಟೇ?

ನಿಜಕ್ಕೂ ಬಚ್ಚಿಟ್ಟದ್ದನ್ನು ಬ್ಯಾನರ್ಜಿ ಬಿಚ್ಚಿಟ್ಟರು, ಅದೆಂದರೆ ಜನ ಸಾಮಾನ್ಯರ ವಿವಿಧ ವಸ್ತುಗಳು, ಸೇವೆಗಳು ಹಾಗೂ ಯೋಜನೆಗಳಿಗೆ ನೀಡುವ ಸಬ್ಸಿಡಿ ಕಡಿತಗೊಳಿಸುವ ಹುನ್ನಾರದಂತೆ, ನೇರ ನಗದು ವರ್ಗಾವಣೆಯ ಹಣ ಒಂದಿಷ್ಟು ಕೊಡಲು ಈ ಖಾತೆ ಒಂದು ಕಾಲ ಮಿತಿಯವರೆಗೆ ಪೂರ್ಣವಾಗಿ ಬಳಕೆಯಾಗಲಿದೆ.

ಈ ಪ್ರಕಟಿತ ಯೋಜನೆಯೂ ಕೂಡ ಎರಡು ಹಂತಗಳಲ್ಲಿ (2014-15, 2015-16) ಜಾರಿಗೊಳಿಸುವ ಗುರಿ ಇದೆ. ಮೊದಲು ಖಾತೆಗಳು, ನಂತರ ಕಿರು ಆರ್ಥಿಕ ವ್ಯವಹಾರ, ನಂತರ ಅಸಂಘಟಿತರ ಪೆನ್ಷನ್‌ಯೋಜನೆ (ಸ್ವಾವಲಂಬನ್) ಜಾರಿ ಇತ್ಯಾದಿ ಎಂದು ಸರಕಾರ ತಿಳಿಸಿದೆ. ಆದರೆ ಇರುವುದೆಷ್ಟು? ಅವರಿಗೇ ಗೊತ್ತು.

ಗಳಿಕೆ ಮತ್ತು ಉಳಿಕೆಯ ಖಾತ್ರಿ

ನಿಜಕ್ಕೂ ಜನತೆಗೆ ಈ ಬ್ಯಾಂಕ್ ಮತ್ತು ಖಾತೆಯಿಂದ ಪ್ರಯೋಜನ ಆಗಬೇಕೆಂದರೆ ಮೂಲಭೂತವಾಗಿ ಸರಕಾರ ಹಣ ಗಳಿಕೆಯ ಅವಕಾಶಗಳನ್ನು ದೃಢ ಪಡಿಸಬೇಕು. ಅಂದರೆ ಉತ್ಪಾದನೆಯ ವ್ಯವಸ್ಥೆಯ ಬೆಳವಣಿಗೆ, ಉದ್ಯೋಗ, ಆದಾಯದ ಖಾತ್ರಿ ಮಾಡಬೇಕು. ಗಳಿಕೆ ಮತ್ತು ಉಳಿಕೆಯ ಅವಕಾಶಗಳೇ ಇಲ್ಲವಾದಲ್ಲಿ ಖಾತೆ ತೆರೆದರೇನು ಪ್ರಯೋಜನ?

ಹಿಂದೆ 2008 ರಲ್ಲಿ ರಂಗರಾಜನ್ ಸಮಿತಿಯು ದೇಶದ 256 ಜಿಲ್ಲೆಗಳಲ್ಲಿ ಶೇ.95ರಷ್ಟು ವಯಸ್ಕರಿಗೆ ಬ್ಯಾಂಕ್ ಖಾತೆಯೇ ಇಲ್ಲ, ಸಾಲ ಸೌಲಭ್ಯವೂ ಇಲ್ಲ ಎಂಬುದನ್ನು ಹೇಳಿತ್ತು. ಹಣಕಾಸು ಸು ಧಾರಣೆ-ಯೆಂದು ಬ್ಯಾಂಕ್‌ಗಳ ಮೂಲ ರಚನೆಯನ್ನೇ ಪುನರ್ ಸಂಘಟಿಸಬೇಕು ಎಂದೂ ತಿಳಿಸಿತ್ತು.

ನಿರ್ದೇಶಿತ ನೀತಿಗಳು

ಇವನ್ನು ಅನುಸರಿಸಿ ಹಿಂದಿನ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರಕಾರ ಗ್ಯಾಸ್ ಸಬ್ಸಿಡಿ, ಸಮಾಜ ಕಲ್ಯಾಣದ ಯೋಜನೆಗಳ ಮೊತ್ತವೆಂದು ನೇರ ನಗದು ವರ್ಗಾವಣೆಯ ಯೋಜನೆಯಂತೆ ಆಧಾರ ಕಾರ್ಡ್ ಅನುಸರಿಸಿ ಬ್ಯಾಂಕ್ ಖಾತೆ-ಗೆ ಜಮಾ ಮಾಡುವ ಪದ್ಧತಿ ತಂದಾಗ ಅದರ ವಿರುದ್ಧ ವ್ಯಾಪಕ ಟೀಕೆ ಬಂದಿದ್ದವು. ಮತ್ತು ಜಾರಿಯಲ್ಲಿಯೇ ಹಲವಾರು ಪ್ರಾಯೋಗಿಕ ಅಡ್ಡಿಗಳನ್ನು ಎದುರಿಸಬೇಕಾಗಿ ಬಂದು ಅದನ್ನು 2013 ಜನವರಿ 1 ರಂದು ನಿಲ್ಲಿಸಿತ್ತು. ಈಗ ಅಧಿಕಾರಕ್ಕೆ ಬಂದಿರುವ ಬಿಜೆಪಿಯ ಸರಕಾರ ಅದೇ ನೀತಿಯನ್ನು ಅತ್ಯಂತ ವ್ಯಾಪಕವಾಗಿ ನಿರ್ದಿಷ್ಟವಾಗಿ ಏನೋ ಹೊಸದನ್ನು ತರುತ್ತಿರುವಂತೆ ಎಲ್ಲರನ್ನೂ ಸೆಳೆಯುವ ತಂತ್ರಗಳಿಂದ ಅನುಸರಿಸುತ್ತಿದೆ. ಈಗಲೇ ನಿನ್ನೆ (ಅಕ್ಟೋ.30,14 ರಂದು) ಪ್ರಕಟಿಸಿದ ಸರಕಾರದ ಮೊದಲ ದರ್ಜೆ ವಿಮಾನ ಪ್ರಯಾಣ-ತಾರಾ ಹೋಟೆಲ್‌ಗಳಲ್ಲಿ ಸಭೆ ನಿರ್ಬಂಧಂತಹ, ಯೋಜನೇತರ ವೆಚ್ಚಗಳ ಕಡಿತದ ಜೊತೆ-ಗೆ ಜನ ಕಲ್ಯಾಣ ಯೋಜನೆಗಳಿಗೆ ಸಬ್ಸಿಡಿ ಕಡಿತವನ್ನೂ ಮಾಡುವುದಾಗಿ ಪ್ರಕಟಿಸಿರುವುದನ್ನು ಗಮನಿಸಬೇಕು. ಮೇಲಾಗಿ ನಮ್ಮ ದೇಶದ ಬಜೆಟ್ ಸಿದ್ಧವಾಗುವುದೇ ವಿಶ್ವ ಹಣಕಾಸು ಸಂಸ್ಥೆಗಳು ಮತ್ತು ವಿಶ್ವ ಬ್ಯಾಂಕ್‌ಗಳ ಸಮಾಲೋಚನೆ, ಅಂಗೀಕಾರದ ಬಳಿಕ. ಹಾಗಿರುವಾಗ ಆ ನಿರ್ದೇಶನಗಳಿಂದ ಇದು ಹೊರತಾಗಿರಲು ಸಾಧ್ಯವೇ?

ಖಾತೆಯೊಂದಿಗೆ ಹುಟ್ಟುವ ಭ್ರಮೆಯೂ

ಬ್ಯಾಂಕ್‌ನ ಖಾತೆಗಳೇ ಇಲ್ಲದಿರುವ ಜನ ಖಾತೆ ಪಡೆಯುವುದು ಒಳ್ಳೆಯದೇ. ದೇಶದಲ್ಲಿರುವುದು ಕೇವಲ 10 ಕೋಟಿ ಖಾತೆಗಳೇ. ಅದರಲ್ಲೂ 7.70 ಕೋಟಿ ವೈಯಕ್ತಿಕವಾದವುಗಳು. ಆದರೆ ಈಗ ಖಾತೆ ತೆರೆದಾಕ್ಷಣ ಕಾಂಚಾಣ ಖಾತೆಗೆ ಜಮಾ ಆಗಿ ಬಿಡುತ್ತದೆ, ಸಾಲ, ಸಹಾಯ ಸಿಕ್ಕಿ ಬಿಡುತ್ತದೆ ಎಂಬ ಭ್ರಮೆಯನ್ನು ಸರಕಾರ ಬಿತ್ತುತ್ತಿರುವುದು ಅಪಾಯಕಾರಿ. ಅದರಲ್ಲೂ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ನೀತಿಗಳನ್ನೇ ಅತ್ಯಂತ ತೀವ್ರವಾಗಿ ಜಾರಿಗೊಳಿಸಲು ಹಲವಾರು ತಂತ್ರಗಳನ್ನು ಹೆಣೆಯುತ್ತಿರುವ ಮೋದಿ ಸರಕಾರ ಮತ್ತು ಕಾರ್ಪೋರೇಟ್ ಕಂಪನಿಗಳು ಹುನ್ನಾರ ನಡೆಸುವಾಗ ಅವರು ಸೃಷ್ಟಿಸುವ ಮೋಸದ ಜಾಲಕ್ಕೆ ಜನ ಬೀಳದಂತೆ ಎಚ್ಚರ ವಹಿಸಬೇಕು. ●

ಕಡಲತಡಿ......

ಪುಟ 6 ರಿಂದ

ಖಾಸಗಿ ಆಸ್ಪತ್ರೆಗಳಲ್ಲಿ ಉತ್ತಮ ಸೇವೆ ಸಲ್ಲಿಸಲು ಇಚ್ಚಿಸುತ್ತಿದ್ದಾರೆ. ಸಾರ್ವಜನಿಕರಿಗೆ ಆರೋಗ್ಯ ಸೇವೆಯು ಸರಿಯಾಗಿ ದಕ್ಕುವ ರೀತಿಯಲ್ಲಿ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಸೇವೆ ಹಾಗೂ ಶಸ್ತ್ರ ಚಿಕಿತ್ಸೆಗಳನ್ನು ನಿಯಂತ್ರಿಸಬೇಕಾಗಿದೆ ಎಂದು ಪ್ರೊ.ನರೇಂದ್ರ ನಾಯಕ್ ಹೇಳಿದರು.

ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಅವರು ಖಾಸಗಿ ಆಸ್ಪತ್ರೆಗಳ ಸುಲಿಗೆ ಹಾಗೂ ಸರಕಾರೀ ಆಸ್ಪತ್ರೆಗಳ ಅವ್ಯವಸ್ಥೆಯನ್ನು ಖಂಡಿಸಿ ಮಾತನಾಡಿದರು. ಖಾಸಗಿ ಆಸ್ಪತ್ರೆಗಳು ಅನಗತ್ಯ ಪರೀಕ್ಷೆ, ಶವ ಬಿಟ್ಟು ಕೊಡದಿರುವುದು, ಅಮಾನವೀಯತೆ, ಹಗಲು ದರೋಡೆಗಳಿಗೆ ಯಾವ ಮಿತಿಯೂ ಇಲ್ಲ. ಇನ್ನೊಂದೆಡೆ ಸರಕಾರೀ ಆರೋಗ್ಯ ಸೇವೆ ಜಿಲ್ಲೆಯಲ್ಲಿ ಸಂಪೂರ್ಣ ಹದಗೆಟ್ಟು ಹೋಗಿದೆ. ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ. ಜಿಲ್ಲಾ ಕೇಂದ್ರದ ವೆನ್‌ಲಾಕ್ ಆಸ್ಪತ್ರೆ ತುರ್ತು ಚಿಕಿತ್ಸಾ ಘಟಕ ಸಹಿತ ಮೂಲ ಸೌಕರ್ಯಗಳಿಲ್ಲದೆ ನರಳುತ್ತಿದೆ. ಶೇ.45 ವೈದ್ಯರ ಹುದ್ದೆಗಳು ಖಾಲಿಯಾಗಿವೆ ಎಂದು ಮುನೀರ್ ಆಕ್ರೋಶ ವ್ಯಕ್ತಪಡಿಸಿದರು.

ಸರಕಾರಿ ಆಸ್ಪತ್ರೆಗಳಿಗೆ ಸಕಲ ಸೌಲಭ್ಯ ನೀಡಿ ಅವುಗಳನ್ನು ಬಲಪಡಿಸುವುದರ ಜೊತೆಗೆ ಖಾಸಗಿ ಆಸ್ಪತ್ರೆಗಳ ಹಗಲು ದರೋಡೆ ನಿಯಂತ್ರಿಸಲು ಕೂಡಲೇ ಆರೋಗ್ಯ ಸಚಿವರು ಮುಂದಾಗಬೇಕು. ಇಲ್ಲವಾದಲ್ಲಿ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಮನವಿಯನ್ನು ಸರಕಾರಕ್ಕೆ ಸಲ್ಲಿಸಲಾಯಿತು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಮಂಗಳೂರು ನಗರಾ ಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮೊದಲಾದವರು ಭಾಗವಹಿಸಿದ್ದರು.

ಸರಕಾರೀ ಆಸ್ಪತ್ರೆಗಳನ್ನು ಬಲಪಡಿಸಲು ಕುಂದಾಪುರದಲ್ಲಿ ಡಿವೈಎಫ್‌ಐ ಪ್ರತಿಭಟನೆ:

ಸರಕಾರೀ ಆಸ್ಪತ್ರೆಗಳನ್ನು ಬಲಪಡಿಸಿ, ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಿ ಎಂಬ ಘೋಷಣೆಗಳೊಂದಿಗೆ ಡಿವೈಎಫ್‌ಐ ಕುಂದಾಪುರ ತಾಲೂಕು ಸಮಿತಿಯ ನೇತೃತ್ವದಲ್ಲಿ ಕುಂದಾಪುರ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಎದುರು ಅಕ್ಟೋಬರ್ 29 ರಂದು ಪ್ರತಿಭಟನೆಯನ್ನು ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ಕುಂದಾಪುರ ತಾಲೂಕು ಕಾರ್ಯದರ್ಶಿ ರಾಜೇಶ್ ವಡೇರಹೋಬಳಿ, ಇನ್ನೊಬ್ಬ ಮುಖಂಡ ಸುಬ್ರಹ್ಮಣ್ಯ ಆಚಾರ್, ಎಸ್‌ಎಫ್‌ಐ ತಾಲೂಕು ಕಾರ್ಯದರ್ಶಿ ಶ್ರೀಕಾಂತ್ ಹೆಮ್ಮಾಡಿ ಮಾತನಾಡಿದರು. ಡಿವೈಎಫ್‌ಐ ತಾಲೂಕು ಅಧ್ಯಕ್ಷ ಸಂತೋಷ್ ಹೆಮ್ಮಾಡಿ, ಮುಖಂಡರಾದ ಸುರೇಶ್ ಕಲ್ಲಾಗರ, ರವಿ ವಿ.ಎಂ. ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ⬢

JANASHAKTHI KANNADA VARA PATRIKE NOV 9, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

'ರಾಜಕೀಯ-ತಂತ್ರಾತ್ಮಕ ಧೋರಣೆ' ವಿಮರ್ಶೆಯ ಕರಡು ರೂಪಿಸುವ ಪ್ರಜಾಸತ್ತಾತ್ಮಕ ಚರ್ಚೆ

"ಇದು ಸಿಪಿಐ(ಎಂ)ನ ಆಂತರಿಕ ಪ್ರಜಾಪ್ರಭುತ್ವದ ರೀತಿ. ಇದರಲ್ಲಿ ಹೆಚ್ಚಿನ ವಿಶೇಷವೇನಿಲ್ಲ."

ದೆಹಲಿ ಪತ್ರಿಕಾಗೋಷ್ಠಿಯಲ್ಲಿ ಪ್ರಕಾಶ್ ಕಾರಟ್



ಸಿಪಿಐ(ಎಂ)ನ 21 ನೇ ಮಹಾಧಿವೇಶನದ ಪ್ರಕ್ರಿಯೆಯು ವೇಗ ಪಡೆದುಕೊಳ್ಳುತ್ತಿದೆ. ಅಖಿಲ ಭಾರತ ಸಮ್ಮೇಳನವು 2015 ರ ಎಪ್ರಿಲ್‌ನಲ್ಲಿ ಆಂಧ್ರಪ್ರದೇಶದ ವಿಶಾಖ ಪಟ್ಟಣಂನಲ್ಲಿ ನಡೆಯಲಿದೆ. ಇಲ್ಲಿ ಅಂಗೀಕಾರಗೊಳ್ಳಬೇಕಾದ 'ರಾಜಕೀಯ-ಸಂಘಟನಾತ್ಮಕ ಕರಡು ವರದಿ'ಯು ಪಕ್ಷದ ಕೇಂದ್ರ ಸಮಿತಿಯಲ್ಲಿ ಅತ್ಯಂತ ವ್ಯವಸ್ಥಿತವಾದ ಮತ್ತು ಗಂಭೀರವಾದ ಆಂತರಿಕ ಚರ್ಚೆಯ ಮೂಲಕ ರೂಪುಗೊಳ್ಳುತ್ತಿದೆ.

ಸಮ್ಮೇಳನದ ರಾಜಕೀಯ ಈ ಕರಡು ತಳಹಂತದ ಶಾಖೆಗಳ ಮಟ್ಟದಿಂದ ಉನ್ನತ ಹಂತದ ವರೆಗೆ ಪ್ರಜಾಸತ್ತಾತ್ಮಕ ಚರ್ಚೆಗೆ ವಿಮರ್ಶೆಗೆ ಒಳಪಟ್ಟು ಶ್ರೀಮಂತಗೊಳ್ಳುತ್ತಾ ಹೋಗುತ್ತದೆ. ಇಂತಹ ಚರ್ಚೆಗೆ ಕರಡು ವರದಿಯನ್ನು ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಇತ್ತೀಚೆಗೆ ತನ್ನ ನಾಲ್ಕು ದಿನಗಳ ಸಭೆಯಲ್ಲಿ ಚರ್ಚಿಸಿದೆ. ಸಮಿತಿಯಲ್ಲಿ ಬಂದ ಚರ್ಚೆಯನ್ನು ಕರಡು ವರದಿಯಲ್ಲಿ ಒಳಗೊಳ್ಳುವ ಪ್ರಕ್ರಿಯೆಯು ನಡೆ-ಯುತ್ತಿದೆ.

ಇಂತಹ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಸರಿಯಾಗಿ ಗ್ರಹಿಸಲಾಗದ ಮಾಧ್ಯಮದ ಕೆಲ ವಲಯಗಳಲ್ಲಿ ಈ ಕುರಿತು ಅಪಪ್ರಚಾರಗಳು ನಡೆದಿವೆ. ಎಂದಿನಂತೆ ಕೆಲ ವಲಯಗಳಲ್ಲಿ ಸಿಪಿಐ(ಎಂ) ವಿರುದ್ದ ಉದ್ದೇಶಪೂರ್ವಕ ಅಪಪ್ರಚಾರಗಳು ಸಾಗಿವೆ.

ಪಕ್ಷದ ಆಂತರಿಕ ಚರ್ಚೆಯ ವಿವರಗಳನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ್ ಕಾರಟ್ ಅವರು ಅಕ್ಟೋಬರ್ 29, 2014 ರಂದು ನವದೆಹಲಿಯ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದ್ದಾರೆ.

ಇದು ಆಂತರಿಕ ಪ್ರಜಾಪ್ರಭುತ್ವದ ರೀತಿ-ಇದಕ್ಕಿಂತ ಹೆಚ್ಚಿನ ವಿಶೇಷವಿಲ್ಲ

ಸಿಪಿಐ(ಎಂ)ನ ಕೇಂದ್ರ ಸಮಿತಿಯು ಪಕ್ಷದ ಪೊಲಿಟ್ ಬ್ಯುರೋಗೆ 'ರಾಜಕೀಯ-ತಂತ್ರಾತ್ಮಕ ಧೋರಣೆ'ಯ ವಿಮರ್ಶೆಯ ಕರಡನ್ನು ಪರಿಷ್ಕರಿಸುವ ಅಧಿಕಾರವನ್ನು ನೀಡಿದೆ ಎಂದು ಪಕ್ಷದ ಕಾರ್ಯದರ್ಶಿ ಪ್ರಕಾಶ್ ಕಾರಟ್ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಪೊಲಿಟ್ ಬ್ಯೂ-ರೋದ ಪ್ರಸ್ತಾವಗಳನ್ನು ಒಮ್ಮತದಿಂದ ಕೇಂದ್ರ ಸಮಿತಿ ಅಂಗೀಕರಿಸಿದೆ ಎಂದು ಅವರು ಹೇಳಿದರು. ತನ್ನ ನಾಲ್ಕು ದಿನಗಳ ಸಭೆಯಲ್ಲಿ ಕೇಂದ್ರ ಸಮಿತಿ ಪಕ್ಷದ 25 ವರ್ಷಗಳ 'ರಾಜಕೀಯ ತಂತ್ರಾತ್ಮಕ ಧೋರಣೆ'ಯ ದಿಕ್ಕಿನ ವಿಮರ್ಶೆ ನಡೆಸಿ ಈ ತೀರ್ಮಾನಕ್ಕೆ ಬಂದಿದೆ ಎಂದರು. ಕರಡನ್ನು ಹೇಗೆ ಪರಿಷ್ಕರಿಸಬೇಕೆಂಬುದನ್ನೂ ಅದು ಒಮ್ಮತದಿಂದ ನಿರ್ಧರಿಸಿದೆ ಎಂದು ಅವರು ತಿಳಿಸಿದರು. ಈ ಪರಿಷ್ಕರಣೆಗೆ ಏಳು ಅಂಶಗಳನ್ನು ಅದು ಪಟ್ಟಿ ಮಾಡಿದೆ ಎಂದೂ ಅವರು ಹೇಳಿದ್ದಾರೆ.

ಕಳೆದ ಲೋಕಸಭಾ ಚುನಾವಣಾ ಪರಿಣಾಮಗಳ ವಿಮರ್ಶೆಯ ಸಮಯದಲ್ಲಿ ಕೇಂದ್ರ ಸಮಿತಿ ರಾಜಕೀಯ ತಂತ್ರಗಾರಿಕೆಯನ್ನು ಪುನರ್ ಪರಿಶೀಲಿಸುವ ಅವಶ್ಯಕತೆಯನ್ನು ಒತ್ತಿ ಹೇಳಿತ್ತು. ಪಕ್ಷದ ವಿವಿಧ ಸಂಘಟನೆಗಳ ಕಾರ್ಯ ವೈಖರಿ, ಅವುಗಳ ದೃಷ್ಟಿಕೋನ, ಸಾಮೂಹಿಕ ಸಂಘಟನೆಗಳ ಚಟುವಟಿಕೆಗಳು ಮತ್ತು ವಿವಿಧ ಜನವಿಭಾಗಗಳ ಮೇಲೆ ಉದಾರಿಕರಣದ ಪ್ರಭಾವ ಇತ್ಯಾದಿಗಳನ್ನು ಪರಿಶೀಲಿಸಲು ಅದು ಹೇಳಿತ್ತು.

ಈ ಪ್ರಕ್ರಿಯೆ ಪಕ್ಷದ ಮಹಾಧಿವೇಶನದ ತಯಾರಿ ಕ್ರಿಯೆ. ಪರಿಷ್ಕೃತ ಕರಡು ವರದಿಯನ್ನು ಮುಂದಿನ ಕೇಂದ್ರ ಸಮಿತಿ ಸಭೆಯಲ್ಲಿ ಮಂಡಿಸಲಾಗುವುದು. ಇದನ್ನು ಅಂತಿಮಗೊಳಿಸಿ ಪಕ್ಷದಾದ್ಯಂತ ಚರ್ಚೆಗೆ ಬಿಡುಗಡೆ ಮಾಡಲಾಗುವುದು. ಹತ್ತು ಲಕ್ಷ ಪಕ್ಷದ ಸದಸ್ಯರು ಇದನ್ನು ಓದಿ ಚರ್ಚಿಸಿ, ವಿಮರ್ಶಿಸಿ ಅವರ ಸೂಚನೆಗಳನ್ನು ನೀಡುತ್ತಾರೆ. ಇದು ಸಿಪಿಐ(ಎಂ)ನ ಆಂತರಿಕ ಪ್ರಜಾಪ್ರಭುತ್ವದ ರೀತಿ. ಇದರಲ್ಲಿ ಹೆಚ್ಚಿನ ವಿಶೇಷವಿಲ್ಲ ಎಂದೂ ಕಾರಟ್ ಅವರು ಹೇಳಿದರು.

ಈಗ ನಡೆಯುತ್ತಿರುವಂತಹ ವಿಮರ್ಶೆ ಏಕೆ ಎಂಬ ಪ್ರಶ್ನೆಗೆ ಅವರು "ಪಕ್ಷ ತನ್ನ ಬೆಳವಣಿಗೆ ಬಗ್ಗೆ ಸಂತುಷ್ಟವಾಗಿಲ್ಲ. ಅಲ್ಲದೆ ಜಲಂಧರ್ ಮಹಾಧಿವೇಶನದಿಂದ ಹಿಡಿದು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯದ ಬಗ್ಗೆ ಮಾತನಾಡುತ್ತಲೇ ಬಂದಿದ್ದೇವೆ. ಈ ದಿಸೆಯಲ್ಲಿ ಹೇಳಿಕೊಳ್ಳುವ ಪ್ರಗತಿ ಆಗಿಲ್ಲ." ಎಂದಿದ್ದಾರೆ. ಇಂತಹ ವಿಮರ್ಶೆಯ ಪ್ರಸ್ತಾಪ ಹಿಂದೆ 1996 ರಲ್ಲೂ ಆಗಿತ್ತು ಎಂದಿದ್ದಾರೆ. ಕಾರಣಾಂತರಗಳಿಂದ ಇದನ್ನು ಮಾಡಲಾಗಿರಲಿಲ್ಲ ಎಂದೂ ಕಾರಟ್ ಹೇಳಿದರು.

ಈ ವಿಮರ್ಶೆಯ ಪ್ರಾರಂಭ 1991 ರಿಂದ ಯಾಕೆ ಎಂಬ ಪ್ರಶ್ನೆಗೆ ಅವರು ಉತ್ತರಿಸುತ್ತಾ " ನವ ಉದಾರವಾದಿ ನೀತಿಗಳ ಉದಾರೀಕರಣ ನೀತಿ 1991 ರಲ್ಲಿ ಪ್ರಾರಂಭವಾಯಿತು. ಸೋವಿಯೆಟ್ ಯೂನಿಯನ್ ಒಡೆದದ್ದೂ ಅದೇ ಸಮಯದಲ್ಲಿ. ಅಲ್ಲದೆ ಬಿಜೆಪಿ ಮತ್ತು ಕೋಮು ಶಕ್ತಿಗಳು ಅದೇ ಸಮಯದಲ್ಲಿ ಶಕ್ತಿಗಳಿಸತೊಡಗಿದವು. ನಾವು ಮಾಡುತ್ತಿರುವುದರಲ್ಲಿ ಎಲ್ಲವೂ ತಪ್ಪು ಎಂದೇನಲ್ಲ. ಸಾಧನೆಗಳಲ್ಲಿನ ನ್ಯೂನತೆಗಳನ್ನೂ ಅರಿಯಬೇಕಾಗುತ್ತದೆ" ಎಂದರು.

ಕೇಂದ್ರ ಸಮಿತಿಯೊಳಗೆ ಭಿನ್ನಾಭಿಪ್ರಾಯಗಳಿವೆ ಎಂಬ ಬಗ್ಗೆ ಮಾಧ್ಯಮಗಳಲ್ಲಿ ಬಂದ ವರದಿಗಳನ್ನು ನಿರಾಕರಿಸುತ್ತಾ ಅವರು ಏಳು ಜನ ಪೊಲಿಟ್ ಬ್ಯೂರೋ ಸದಸ್ಯರಿಂದ ಟಿಪ್ಪಣಿಗಳು ಬಂದಿದ್ದವು. ಅವುಗಳೆಲ್ಲವನ್ನು ಚರ್ಚಿಸಿದ್ದೇವೆ ಎಂದರು. ವರದಿಯ ಬಗ್ಗೆ ಅಸಮ್ಮತಿ ಇದ್ದರೆ ಅದನ್ನು ಮಂಡಿಸುವ ಅವಕಾಶವನ್ನೂ ನೀಡಲಾಗಿತ್ತು. ಆದರೆ ಅಂತಹ ಅಸಮ್ಮತಿ ಯಾವುದೂ ವ್ಯಕ್ತವಾಗಿಲ್ಲ ಎಂದರು.


ಕಾಂಗ್ರೆಸ್ ಜೊತೆ ಮೈತ್ರಿ ಇಲ್ಲ

ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಪ್ರಕಾಶ್ ಕಾರಟ್ ಅವರು ಕಾಂಗ್ರೆಸ್ ಪಕ್ಷದೊಂದಿಗೆ ಪಶ್ಚಿಮ ಬಂಗಾಳದಲ್ಲಿರಲಿ ಅಥವಾ ಹೊರಗೆ ಆಗಲಿ ಯಾವುದೇ ಮೈತ್ರಿಯ ಸಾಧ್ಯತೆಯನ್ನು ಅಥವಾ ಹೊಂದಾಣಿಕೆಯನ್ನು ತಳ್ಳಿ ಹಾಕಿದರು. ಪಕ್ಷದಲ್ಲಿ ಈ ವಿಷಯ ಚರ್ಚೆಯಲ್ಲಿಲ್ಲ ಎಂದೂ ಅವರು ಹೇಳಿದರು. ಅದೇ ಸಮಯದಲ್ಲಿ ಅವರು ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಅದರಲ್ಲೂ ಮುಖ್ಯವಾಗಿ ಆರೆಸ್ಸೆಸ್ ನೇತೃತ್ವದ ಹಿಂದುತ್ವ ಶಕ್ತಿಗಳು ಒಡ್ಡಿರುವ ಅಪಾಯಗಳ ವಿರುದ್ದದ ಹೋರಾಟದಲ್ಲಿ ಎಲ್ಲ ಜಾತ್ಯತೀತ ಶಕ್ತಿಗಳೊಂದಿಗೆ ಸಹಕರಿಸುತ್ತದೆ ಎಂದೂ ಅವರು ಹೇಳಿದರು.

ಪಕ್ಷದ ಸ್ವತಂತ್ರ ಬಲಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಮತ್ತು ಎಡ ಐಖ್ಯತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿವೆ ಎಂದೂ ಅವರು ಪತ್ರಿಕಾಗೋಷ್ಠಿಗೆ ಮಾಹಿತಿ ನೀಡಿದರು.

ವಿಡಂಬಾರಿಯವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

ಕನ್ನಡದ ಖ್ಯಾತ ಚುಟುಕು ಕವಿ ಹಾಗೂ ಜನಶಕ್ತಿಯ ಆತ್ಮೀಯ ಒಡನಾಡಿಯಾದ ವಿಡಂಬಾರಿ (ವಿ. ಜಿ. ಭಂಡಾರಿ) ಯವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯ ಪುರಸ್ಕಾರ ದೊರೆತಿದೆ. ಜನಶಕ್ತಿಯು ಈ ಸಂಧರ್ಭದಲ್ಲಿ ಅಭಿನಂದಿಸುತ್ತದೆ.



ವಾಣಿಜ್ಯೀಕರಣ

ಮನುಷ್ಯತ್ವ ಕಲಿಸಲೇ ಬೇಕಾದ ನಮ್ಮ
ಶಿಕ್ಷಣವು ಲೋಭಿಗಳ ಪಾಲಾಯ್ತೋ ತಮ್ಮ
ಹೀಗಾಗಿ ಪದವಿಗಳು ವ್ಯಾಪಾರಿಕರಣ
ಆಗಿಂದು ಬಲ್ಲಿರಾ ಹಕ್ಕುಗಳ ಹರಣ.

- ವಿಡಂಬಾರಿ

ಇತಿಹಾಸ?

ಗತಕಾಲದಿತಿಹಾಸ ವಂಚರು ತಿರುಚಿ
ಎಸೆಯುವರು ಸತ್ಯಕ್ಕೆ ಕೆಸರನ್ನು ಎರಚಿ
ಸುಳ್ಳುಗಳ ತಳಹದಿಯ ಮೇಲೆಯೇ ಗೊತ್ತೆ
ಕಟ್ಟಲಿಕೆ ಹೊರಟಿಹರು ಆಗಿಹುದು ಪತ್ತೆ.

- ವಿಡಂಬಾರಿ

ಧಾರ್ಮಿಕ ಸ್ವಿಸ್ ಬ್ಯಾಂಕ್

ಧಾರ್ಮಿಕ ಸ್ವಿಸ್ ಬ್ಯಾಂಕ್ ನಮ್ಮಲ್ಲೆ ನೋಡಿ
ಬಹಳಷ್ಟು ಇದ್ದಾವೆ ಬಚ್ಚಿಡಲು ಬೇಡಿ
ಈ ಕುರಿತು ಅಣ್ಣ ಹಜಾರೆಯೂ ಸೊಲ್ಲು
ಎತ್ತಿಲ್ಲ ಯಾಕೆಂದು ಸಜ್ಜನರ ಗುಲ್ಲು

- ವಿಡಂಬಾರಿ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**